ജനകീയ ആസൂത്രണ പദ്ധതി · 1996

# അധികാര ജനങ്ങൾ

വികസന റിപ്പോർട്ട്

ಬದಿಯಡ್ಕ ಪಂಚಾಯತು ವಿಕಸನ ವರದಿ



# ಜನಕೀಯ ಯೋಜನೆ

## ಬದಿಯಡ್ಕ ಗ್ರಾಮ ಪಂಚಾಯತು

## ಕಾಸರಗೋಡು ಜಿಲ್ಲೆ

# ವಿಕಸನ ವರದಿ



# PREPARATION OF DEVELOPMENT REPORT





# LATE Ex PRESIDENTS



Lt. Elanthodi Krishna Bhat



Lt. Kamalaksha Pai



Lt. Dr. P.S.Shasthri

# Ex PRESIDENTS



Sri Kaivara Kinhanna Rai



Sri Vashe Shrikrishna Bhat



Sri Rama Patali



Sri C.A.Abbobaker

# DISTRICT PANCHAYATH MEMBER
# BADIADKA CONSTITUENCY



SRI K.PUTTAPPA

# MANJESHWAR BLOCK PANCHAYATH MEMBERS
# BADIADKA CONSTITUENCY



SRI B. NARASIMHA SHENOY
BADIADKA



SRI B. KRISHNA NAIK
PALLATADKA



SRI T.GOVINDAN
PANCHAYATH SECRETARY



SRI M. ESHWARA BHAT
D.R.P CONVENOR BADIADKA PANCHAYATH

# PRESIDENT,VICE PRESIDENT AND MEMBERS



SRI B.SUNDARA PRABHU
PRESIDENT



SMT. SAVITHRI N.RAO
VICE PRESIDENT



SMT. SAHRADA BHAT



SMT. VINODA PAI



SRI C.A.ABBOBAKER



SMT. RAJANI SHETTY



SRI. SHANKARA



SRI K.E. ABDULLA



SRI RAMA PATALI



SRI P.G.CHANDRAHASA RAI



SRI ANANDA

# PANCHAYATH STAFF



# PANCHAYATH ACTIVITIES



# ವಿಷಯ ಸೂಚಿ


1. ಮುನ್ನುಡಿ
2. ಪಂಚಾಯತು ಮಾಹಿತಿ
3. ಭೂ ಪ್ರಕೃತಿ ಮತ್ತು ಸಂಪನ್ಮೂಲ
4. ಪಂಚಾಯತು ಇತಿಹಾಸ
5. ಬಾಳ್ತಿಯಲ್ಲಿರುವ ಸರಕಾರೀ ಸ್ಕೀಂಗಳು
6. ಕೃಷಿ ಮತ್ತು ನೀರಾವರಿ
7. ಮೃಗ ಸಂರಕ್ಷಣೆ ಮತ್ತು ಮೀನುಗಾರಿಕೆ
8. ವಿದ್ಯಾಭ್ಯಾಸ
9. ಕುಡಿನೀರು ಮತ್ತು ಸಾಮಾಜಿಕ ಆರೋಗ್ಯ
10. ಕೈಗಾರಿಕೆ
11. ಸಾರಿಗೆ ಮತ್ತು ಚೈತನ್ಯ
12. ವಸತಿ ಮತ್ತು ಸಾಮಾಜಿಕ ಕ್ಷೇಮ
13. ಸಾಂಸ್ಕೃತಿಕ
14. ವನಿತಾ
15. ಸಹಕಾರೀ ವ್ಯವಸ್ಥೆ
16. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ
17. ಸಂಪನ್ಮೂಲ ಸಂಗ್ರಹ
18. ಉಪ ಸಂಹಾರ

# BADIADKA GRAMA PANCHAYATH



1

# ಮುನ್ನುಡಿ

ಆತ್ಮೀಯ ಬಂಧುಗಳೆ,

ಭಾರತ ದೇಶದ ಯೋಜನಾ ಆಯೋಗದ ವ್ಯವಸ್ಥೆಯ ಅಡಿಯಲ್ಲಿ ರೂಪಿಸಲ್ಪಡುವ 9ನೆಯ ಪಂಚವಾರ್ಷಿಕ ಯೋಜನೆಯ ಪೂರ್ವಭಾವೀ ಚಟುವಟಿಕೆಯಲ್ಲಿ ನಮ್ಮನ್ನು ತೊಡಗಿಸಿಕೊಂಡಿದ್ದೇವೆ. ಹಿಂದಿನ ಯೋಜನೆಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿ ಈ ಯೋಜನೆಯನ್ನು ನಡೆಸಿಕೊಡಬೇಕೆಂಬ ಆಕಾಂಕ್ಷೆಯು ಕೇರಳ ಸರಕಾರದ್ದಾಗಿದ್ದು ಈ ಉದ್ದೇಶದಿಂದ ಇದನ್ನು ಜನಕೀಯ ಯೋಜನೆಯೆಂದು ಹೆಸರಿಸಲಾಗುತ್ತಿದೆ.

ಇದರ ವೈಶಿಷ್ಟ್ಯವೇನೆಂದರೆ ಈ ಯೋಜನೆಯ ತಯಾರಿಯು ಗ್ರಾಮಾಂತರ ಪ್ರದೇಶಗಳಲ್ಲಿ ರೂಪುಗೊಳ್ಳುವ ಗ್ರಾಮ ಸಭೆಗಳಲ್ಲಿ ನಡೆಯುತ್ತದೆ.

ನಮಗೆ ಸ್ವಾತಂತ್ರ್ಯ ದೊರಕಿ ಸುಮಾರು ಐವತ್ತು ವರ್ಷಗಳು ಸಂದುವು. ದೇಶದ ಅಮೂಲಾಗ್ರ ಅಭಿವೃದ್ಧಿಗಾಗಿ ನಿಯೋಜಿಸಿದ ಪಂಚವಾರ್ಷಿಕ ಯೋಜನೆಗಳ ಪೈಕಿ ಎಂಟನೆಯ ಯೋಜನೆಯು ಮುಗಿಯುತ್ತಾ ಬರುತ್ತಿದೆ. ನಮಗೆ ದೊರೆತ ಅಂಕೆ ಸಂಖ್ಯೆಗಳ ಪ್ರಕಾರ ಹಿಂದಿನ ಯೋಜನೆಗಳಲ್ಲಿ ಖರ್ಚು ಮಾಡಿದ ಹಣದ ಶೇಕಡಾ 15ರಷ್ಟು ಮಾತ್ರವೇ ಜನಸಾಮಾನ್ಯರನ್ನು ತಲಪಿರುತ್ತದೆ. ಇದಕ್ಕೆ ಮಧ್ಯವರ್ತಿಗಳು ಹಾಗೂ ಸರಕಾರೀ ಅಧಿಕಾರಿಗಳ ನಿರ್ಲಕ್ಷ್ಯವು ಕಾರಣವಾಗಿರಬಹುದು. ಹಿಂದಿನ ಯೋಜನೆಗಳು ರಾಷ್ಟ್ರಮಟ್ಟ, ಪ್ರಾಂತ್ಯಮಟ್ಟ, ಜಿಲ್ಲಾಮಟ್ಟಗಳಲ್ಲಿ ತಯಾರಾಗುತ್ತಿದ್ದವು. ಇದರಿಂದಾಗಿ ಗ್ರಾಮೀಣ ಪ್ರದೇಶದ ನೈಜ ಮಾಹಿತಿ ಇಲ್ಲದವರು ಯೋಜನೆಯನ್ನು ತಯಾರಿಸುವವರಾಗಿರುತ್ತಿದ್ದರು. ಈ ಯೋಜನೆ ಪ್ರಕಾರ ಜನ ಸಾಮಾನ್ಯನಿಗೆ ತನ್ನ ಅವಶ್ಯಕತೆಗಳನ್ನು ಮುಂದಿಡಲು ಅವಕಾಶವಿದೆ.

ಕೇರಳ ರಾಜ್ಯವು ಪ್ರತಿಭಾವಂತರ ಹಾಗೂ ವಿದ್ಯಾವಂತರ ರಾಜ್ಯವಾಗಿದೆ. ಜನಕೀಯ ಯೋಜನೆಯನ್ನು ದೇಶದಲ್ಲಿ ಪ್ರಪ್ರಥಮವಾಗಿ ಜ್ಯಾರಿಗೊಳಿಸಲು ಪ್ರಯತ್ನಿಸಿದ ಕೀರ್ತಿಯು ನಮ್ಮ ರಾಜ್ಯಕ್ಕೆ ಸಲ್ಲುತ್ತದೆ. ಗಾಂಧೀಜಿಯವರು ಗ್ರಾಮ ರಾಜ್ಯದ ಕನಸನ್ನು ಕಂಡಿದ್ದರು. ಅದನ್ನು ನನಸು ಮಾಡುವಂತಹ ಪ್ರಯತ್ನವನ್ನು ಇದೀಗ ಆರಂಭಿಸುತ್ತಿದ್ದೇವೆ.

ಆರ್ಥಿಕವಾಗಿ ಹಿಂದುಳಿದ ಕೇರಳ ರಾಜ್ಯವು ಕೃಷಿ ಆದಾಯದಲ್ಲಿ ತುಂಬಾ ಹಿಂದಿದೆ. 1960ರಲ್ಲಿ ಶೇಕಡಾ 60ರಷ್ಟಿದ್ದ ಕೃಷಿ ಆದಾಯವು 1990ರಲ್ಲಿ ಶೇಕಡಾ 30ಕ್ಕೆ ಇಳಿದಿದೆ, ಎಂಬುದು ದುರದೃಷ್ಟಕರ. ಕೃಷಿ ಉತ್ಪನ್ನಗಳಿಗೆ ಉತ್ತಮ ಮೌಲ್ಯದ ಅಲಭ್ಯತೆ, ಕಾರ್ಮಿಕ ಸಮಸ್ಯೆ, ನೀರಿನ ಸಮಸ್ಯೆ ಮೊದಲಾದವುಗಳು ಕೃಷಿ ರಂಗದ ಆಕರ್ಷಣೆ ಕಡಿಮೆಯಾಗಲು ಕಾರಣ. ಹಿಂದಿನ ಯೋಜನೆಗಳು ಶೀಘ್ರವಾಗಿ ಕಾರ್ಯರೂಪಕ್ಕೆ ಬರುತ್ತಿರಲಿಲ್ಲ. ಕೆಲವು ಸಮಸ್ಯೆಗಳಿಂದಾಗಿ ಜನಸಾಮಾನ್ಯರಿಗೆ ದೊರಕಬೇಕಾದ ಸವಲತ್ತುಗಳು ಅಪೂರ್ಣವಾಗಿದ್ದುವು. ಕೈಗಾರಿಕೆಗಳ ಮಟ್ಟಿಗೆ ಹೇಳುವುದಾದರೆ, ಈ ರಂಗದ ಉತ್ಪಾದನೆ ಕೇವಲ ಶೇಕಡಾ 10. ಸುಮಾರು 30 ವರ್ಷಗಳಿಂದೀಚೆಗೆ ಯಾವುದೇ ಬೃಹತ್ ಕೈಗಾಕೆಗಳು ರಾಜ್ಯವನ್ನು ಪ್ರವೇಶಿಸಿಲ್ಲ. ಕೃಷಿ ಉತ್ಪಾದನೆಯನ್ನು ಹೆಚ್ಚಿಸಿ ಕೈಗಾರಿಕೆಗಳನ್ನು ಹೆಚ್ಚು ಲಾಭದಾಯಕವನ್ನಾಗಿ ಮಾಡುವುದು ಜನಕೀಯ ಯೋಜನೆಯ ಉದ್ದೇಶಗಳಲ್ಲಿ ಪ್ರಧಾನವಾಗಿದೆ. ಆರೋಗ್ಯದ ದೃಷ್ಟಿಯಲ್ಲಿ ಕೇರಳದ ಮಟ್ಟವು ತೃಪ್ತಿಕರವಾಗಿದೆಯಾದರೂ ರೋಗಗಳ ನಿಯಂತ್ರಣಕ್ಕಾಗಿ ಈ ರಂಗದಲ್ಲಿ ವಿಶೇಷ ಮಹತ್ವವನ್ನು ಕಲ್ಪಿಸಲಾಗಿದೆ. ಶಿಕ್ಷಣ ರಂಗದ ಗುಣಮಟ್ಟದ ಅಭಿವೃದ್ಧಿಯನ್ನು ಒಂದು ಸವಾಲಾಗಿ ಸ್ವೀಕರಿಸಬೇಕಾಗಿದೆ. ಈ ಯೋಜನೆಯಲ್ಲಿ ಮಹಿಳೆಯರಿಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗಗಳಿಗೂ ವಿಶೇಷ ಪ್ರಾತಿನಿಧ್ಯವನ್ನು ನೀಡಲಾಗಿದೆ. ಬರುವ ಎಪ್ರಿಲ್ ಒಂದರಿಂದ ಆರಂಭವಾಗುವ ಈ ಯೋಜನೆಯಲ್ಲಿ ಆರ್ಥಿಕ ವಿಕೇಂದ್ರೀಕರಣಕ್ಕೆ ಸ್ಥಾನವನ್ನು ಕಲ್ಪಿಸಿದ್ದಾರೆ. ಯೋಜನಾ ಆಯೋಗದ ಆದೇಶದಂತೆ ಗ್ರಾಮ ಸಭೆಗಳನ್ನು ನಡೆಸಿ ಯೋಜನಾ ವರದಿಗಳನ್ನು ತಯಾರಿಸುವಾಗ ಆರ್ಥಿಕ ಪರ, ಆಡಳಿತ ಪರ, ನಿಯಮ ಪರ ವರದಿಗಳಿಗೆ ಮಾತ್ರ ಸ್ಥಾನವನ್ನು ಕಲ್ಪಿಸಲಾಗಿದೆ. ವಿವಿಧ ವಿಷಯಗಳ ಕುರಿತು ಅಮೂಲಾಗ್ರ ಪರಿಶೀಲನೆ ನಡೆಸಿ, ಸಂಗ್ರಹಿಸಿ, ಕ್ರೋಢೀಕರಿಸಿದ ವರದಿಯನ್ನು ಈ ಪುಸ್ತಕದಲ್ಲಿ ಕೊಡಲಾಗಿದೆ. ಲಭ್ಯವಿರುವಷ್ಟು ಪಂಚಾಯತಿನ ಪರಿಸರದ ಮಾಹಿತಿಗಳು, ಸರಕಾರಿ ಕಛೇರಿಗಳ ಮಾಹಿತಿಗಳು ಮತ್ತು ಇತರ ಸಂಘ ಸಂಸ್ಥೆಗಳ ಮಾಹಿತಿಗಳನ್ನು

ಸಂಗ್ರಹಿಸಲಾಗಿದೆ. ಈ ಹಿಂದೆ ಹಲವಾರು ಯೋಜನೆಗಳು ಕಳೆದರೂ ಪರಿಹರಿಸಬೇಕಾದ ಸಮಸ್ಯೆಗಳು ಗುಡ್ಡದಷ್ಟು ಬಾಕಿಯಿರುತ್ತವೆ. ಕ್ರೋಢೀಕರಿಸಿದ ಸಮಸ್ಯೆಗಳನ್ನು ಪಂಚಾಯತು ಸೆಮಿನಾರಿನಲ್ಲಿ ಜನಪ್ರತಿನಿಧಿಗಳ ಮತ್ತು ವಿದಗ್ಧರ ಮುಂದೆ ಇರಿಸಿ ವಿಮರ್ಶೆಗೆ ಒಳಪಡಿಸಿ ವರದಿಗಳನ್ನು ಕಾರ್ಯಗತಗೊಳಿಸಲಾಗುತ್ತಿದೆ.

ಇದಕ್ಕೆ ಸಂಬಂಧಿಸಿದ ಚಟುವಟಿಕೆಗಳು ಸಪ್ಟಂಬರ 1996ರಿಂದ ಆರಂಭವಾಗಿ ಮುಂದುವರಿಯುತ್ತಿವೆ. ಈ ಚಟುವಟಿಕೆಗಳ ಅಂಗವಾಗಿ ವಿದಗ್ಧರ ಸಮಿತಿ, ಸಂಪನ್ಮೂಲ ವ್ಯಕ್ತಿಗಳ ತರಬೇತಿ, ಗ್ರಾಮ ಸಭೆಗಳು, ಭೌಗೋಳಿಕ ಪರ್ಯಟನೆ, ಇತಿಹಾಸ ಸಂಗ್ರಹ ಸೆಮಿನಾರುಗಳು, ವರದಿಗಳ ತಯಾರಿ ಮತ್ತು ಕ್ರೋಢೀಕರಣ ಮೊದಲಾದ ಕೆಲಸಗಳು ಸಮಾರೋಪಾದಿಯಲ್ಲಿ ಕರ್ತವ್ಯ ನಿರತ ಸ್ವಯಂಸೇವಕರಿಂದ ಮುಂದುವರಿಯುತ್ತಲಿದೆ. ಇದಕ್ಕಾಗಿ ಪಂಚಾಯತು ಕ್ಷೇತ್ರದ ಮತದಾರರ, ತಜ್ಞರ, ಸರಕಾರೀ ಅಧಿಕಾರಿಗಳ ಸ್ವಯಂಸೇವಕರ ಅವಿರತ ಸೇವೆಯನ್ನು ಕೃತಜ್ಞತಾ ಪೂರ್ವಕವಾಗಿ ಸ್ಮರಿಸುತ್ತಿದ್ದೇವೆ.

ಗ್ರಾಮ ಸಭೆಗಳಲ್ಲಿ ಎಲ್ಲಾ ವರ್ಗದ ಜನರಿಗೂ ಭಾಗವಹಿಸುವ ಅವಕಾಶದೊಂದಿಗೆ ದೀರ್ಘಕಾಲ ಬಾಳಿಕೆ ಬರುವ ಯೋಜನೆಗಳನ್ನು ಅತಿ ಕಡಿಮೆ ಖರ್ಚಿನಲ್ಲಿ ರೂಪಿಸುವುದು ಒಂದು ಪ್ರಧಾನ ಉದ್ದೇಶವಾಗಿದೆ. ಬಡವರಿಗೆ ಅತಿ ಹೆಚ್ಚು ಪ್ರಯೋಜನವನ್ನು ನೀಡುವುದಕ್ಕಾಗಿ ಶ್ರಮಿಸಲಾಗಿದೆ. ಇನ್ನು ಮುಂದಿನ ಹಂತದಲ್ಲಿ ಸ್ಕೀಮುಗಳು ತಯಾರಾಗಿ ಯೋಜನೆಗಳು ಕಾರ್ಯರೂಪಕ್ಕೆ ಬರುತ್ತವೆ. ಸಾಕ್ಷರತೆಯು ಕೇರಳದಲ್ಲಿ ನೂರು ಶತಮಾನ ವಿಜಯವನ್ನು ಸಾಧಿಸಿದೆಯೆಂದು ನಾವು ಘೋಷಿಸಿದರೂ ಈ ರಂಗದಲ್ಲಿ ಇನ್ನೂ ಹಲವು ಬೆಳವಣಿಗೆಗಳು ಅವಶ್ಯ. ನಿರುದ್ಯೋಗವು ಸಮಸ್ಯಾತ್ಮಕವಾಗಿ ಬೆಳವಣಿಗೆ ಹೊಂದುತ್ತಿದ್ದು ಇದನ್ನು ಹಂತಹಂತವಾಗಿ ಪರಿಹರಿಸಲು ಯೋಜಿಸಲಾಗುತ್ತಿದೆ. ಗಲ್ಫ್ ಉದ್ಯೋಗಸ್ಥರಿಂದ ಬರುವ ವರಮಾನವನ್ನು ದೇಶೀಯ ವಿಕಸನ ಯೋಜನೆಗೆ ವಿನಿಯೋಗಿಸುವ ಮತ್ತು ಪಡಿತರ ವಿತರಣೆಯಲ್ಲಿ ಇನ್ನೂ ಸರಳ ಕ್ರಮವನ್ನು ಜ್ಯಾರಿಗೆ ತರುವ ಕುರಿತು ಏರ್ಪಾಡುಗಳು ನಡೆಯುತ್ತಿವೆ.

ಸಮಸ್ಯೆಗಳು ಮೇರು ಪರ್ವತದಷ್ಟಿದ್ದರೆ ಪರಿಹಾರಗಳು ಪರಿಮಿತವಾಗಿವೆ. ಕುಡಿಯುವ ನೀರು, ವಸತಿ, ರೋಗ ನಿವಾರಣೆ, ಪರಂಪರಾಗತ ಕೈಗಾರಿಕೆಗಳಿಗೆ ಆದ್ಯತೆ ನೀಡಲಾಗಿದೆ. ಹಿಂದಿನ ಕೆಲವು ಯೋಜನೆಗಳು ರೂಪಿತಗೊಂಡು ಕಾಗದ ಪತ್ರಗಳಲ್ಲಿ ಬಾಕಿಯಾಗಿರಬಹುದು. ಈ ವೈಫಲ್ಯವನ್ನು ಗುರುತಿಸಿ ಸೂಕ್ತ ಕಂಡಲ್ಲಿ ಅದಕ್ಕೆ ಚಾಲನೆಯನ್ನು ನೀಡುವಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿದ್ದೇವೆ. ಅಂತೂ ವಿಕೇಂದ್ರೀಕರಣವು ನಮ್ಮ ಮುಂದಿರುವಂತಹ ಬಹುದೊಡ್ಡ ಸವಾಲಾಗಿದೆ. ಈ ಯೋಜನೆಯನ್ನು ಕೆಲವು ಪಂಚಾಯತುಗಳು ಈ ಮೊದಲೇ ಆರಂಭಿಸಿದ್ದು ನಮ್ಮ ಪಂಚಾಯತು ಯೋಜನಾ ಕಛೇರಿಯ ಸೂಚನೆ ದೊರೆತೊಡನೆಯೇ ಕಾರ್ಯಕ್ಷೇತ್ರಕ್ಕೆ ಇಳಿದಿದೆ. ನಮ್ಮ ಪಂಚಾಯತಿನಲ್ಲಿ ಮಣ್ಣು ಸಂರಕ್ಷಣೆ ವಿಭಾಗ ಮತ್ತು ನೀರಾವರಿ ವಿಭಾಗಗಳು ಪ್ರಕೃತ ಸರಕಾರೀ ಮಟ್ಟದಲ್ಲಿ ಚಾಲನೆಯಲ್ಲಿ ಇಲ್ಲದಿರುವುದರಿಂದ ಕ್ಷೇತ್ರದ ಗ್ರಾಮೀಣ ಅಭಿವೃದ್ಧಿಯ ದೃಷ್ಟಿಯಿಂದ ಈ ವಿಭಾಗಗಳ ಸೇವೆಯನ್ನು ಪಡೆಯಲು ಪ್ರಯತ್ನಿಸುತ್ತಿದ್ದೇವೆ.

ಇಂತಹ ರಚನಾತ್ಮಕ ಮೌಲ್ಯಗಳನ್ನು ಕಾರ್ಯರೂಪಕ್ಕೆ ತರುವಾಗ ಸಾರ್ವಜನಿಕ ರಂಗದಲ್ಲಿ ಅಸಹಕಾರ, ಅಡೆತಡೆಗಳು ಇದಿರಾಗುವುದು ಸ್ವಾಭಾವಿಕ. ಹೇಗಿದ್ದರೂ ಈ ಯೋಜನೆಯಲ್ಲಿ ನಮ್ಮ ಪಂಚಾಯತು ನೂರು ಶತಮಾನದಷ್ಟು ಸಫಲತೆಯನ್ನು ಪಡೆಯಲು ಪ್ರಯತ್ನಿಸುತ್ತದೆ ಎಂಬ ಭರವಸೆಯನ್ನು ಈ ಮೂಲಕ ನೀಡುತ್ತಿದ್ದೇವೆ. ಇದಕ್ಕಾಗಿ ಈ ಹಿಂದೆ ತ್ಯಾಗ ಮನೋಭಾವನೆಯಿಂದ ಈ ಕ್ಷೇತ್ರದಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದ ಮಹನೀಯರ ಆದರ್ಶಗಳು ನಮಗೆ ದಾರಿದೀಪವಾಗಲಿ. ಈ ದಿಸೆಯಲ್ಲಿ ಪರಮಾತ್ಮನ ಅನುಗ್ರಹವು ನಮಗೆ ನಿತ್ಯ ಉತ್ಸಾಹದಾಯಕವಾಗಿರಲಿ ಎಂದು ಪ್ರಾರ್ಥಿಸುವುದರೊಂದಿಗೆ ಈ ವರದಿಯನ್ನು ನಿಮ್ಮ ಮುಂದೆ ಇಡುತ್ತಿದ್ದೇವೆ.

2

# ಪಂಚಾಯತು ಮಾಹಿತಿಗಳು

| | | |
|---|---|---|
| ಪಂಚಾಯತಿನ ಹೆಸರು | : | ಬದಿಯಡ್ಕ ಗ್ರಾಮ ಪಂಚಾಯತು |
| ಒಳಗೊಂಡಿರುವ ಗ್ರಾಮಗಳು | : | ನೀರ್ಚಾಲು, ಬದಿಯಡ್ಕ, ಬೇಳ |
| ಬ್ಲೋಕ್ ಪಂಚಾಯತ್ ಡಿವಿಜನ್ | : | ಪಳ್ಳತ್ತಡ್ಕ, ಬದಿಯಡ್ಕ |
| ತಾಲೂಕು | : | ಕಾಸರಗೋಡು |
| ಜಿಲ್ಲಾ ಪಂಚಾಯತ್ ಡಿವಿಜನ್ | : | ಬದಿಯಡ್ಕ |
| ಎಸೆಂಬ್ಲಿ ಮಂಡಲ | : | ಕಾಸರಗೋಡು |
| ವಿಸ್ತೀರ್ಣ | : | 25.5 ಚದರ ಮೈಲು |
| ಗಡಿಗಳು | : | ಉತ್ತರ - ಉಕ್ಕಿನಡ್ಕ<br>ದಕ್ಷಿಣ - ನೆಕ್ರಾಜೆ<br>ಪೂರ್ವ - ಕರುವಳ್ತಡ್ಕ<br>ಪಶ್ಚಿಮ- ಸೀತಂಗೋಳಿ |
| ಒಟ್ಟು ಜನಸಂಖ್ಯೆ | : | 27,265 (1991ನೇ ಕಾನೇಶ್ಮಾರಿಯ ಪ್ರಕಾರ) |
| ಒಟ್ಟು ಮನೆಗಳು | : | 4,310 |
| ಜನ ಸಾಂದ್ರತೆ | : | 982 / ಚದರ ಕಿ.ಮೀ. |
| ಸಾಕ್ಷರತೆ | : | 90% |
| ಪುರುಷರು | : | 92.4% |
| ಸ್ತ್ರೀಯರು | : | 88.3% |
| ಸರಾಸರಿ | : | 90.4% |
| ಪರಿಶಿಷ್ಟ ಜಾತಿ : ಪುರುಷರು | : | 1690 |
| ಸ್ತ್ರೀಯರು | : | 1608 |
| ಪರಿಶಿಷ್ಟ ವರ್ಗ : ಪುರುಷರು | : | 1479 |
| ಸ್ತ್ರೀಯರು | : | 1504 |
| ಲೊಕೇಶನ್ | : | ಕೇರಳದ ಉತ್ತರ ಪ್ರದೇಶದಲ್ಲಿದ್ದು, ಸಮುದ್ರ ದಡದಿಂದ 16ಕಿ. ಮೀ ಪೂರ್ವದಲ್ಲಿರುತ್ತದೆ. |

## ಆಡಳಿತೆ :

ಬದಿಯಡ್ಕ, ನೀರ್ಚಾಲು ಒಳಗೊಂಡ ಬದಿಯಡ್ಕ ಪಂಚಾಯತಿನ ಮೊದಲ ಆಡಳಿತ ಸಮಿತಿಯು ಸ್ವಾತಂತ್ರ್ಯ ಪೂರ್ವದಲ್ಲಿ ದಿ। ಇಳಂತೋಡಿ ಕೃಷ್ಣ ಭಟ್‌ರವರ ಅಧ್ಯಕ್ಷತೆಯಲ್ಲೂ, ಸ್ವಾತಂತ್ರ್ಯಾ ನಂತರ ದಿ। ಕಮಲಾಕ್ಷ ಪೈಗಳ ಹಾಗೂ ದಿ। ಡಾ। ಪಿ. ಎಸ್. ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿಯೂ ಕಾರ್ಯ ನಿರ್ವಹಿಸಲ್ಪಟ್ಟಿತ್ತು.

ತಾರೀಕು 3-12-1963 ರಂದು ಚುನಾವಣೆ ನಡೆಯಿತು. ಇದರಲ್ಲಿ ಶ್ರೀ ಕಯ್ಯಾರ ಕಿಂಞಣ್ಣ ರೈಯವರು ಅಧ್ಯಕ್ಷರಾಗಿಯೂ, ಶ್ರೀ ಮೊಳೆಯಾರ ನಾರಾಯಣ ಭಟ್ಟರು ಉಪಾಧ್ಯಕ್ಷರಾಗಿಯೂ ಇರುವ ಆಡಳಿತ ಸಮಿತಿಯು ಎಂಟು ಜನ ಸದಸ್ಯರನ್ನೊಳಗೊಂಡು ಕಾರ್ಯ ನಿರ್ವಹಿಸುತ್ತಿತ್ತು. ಸದಸ್ಯರ ಹೆಸರುಗಳನ್ನು ಕಳಗೆ ಕೊಡಲಾಗಿದೆ :

1. ದಿ। ಎನ್. ಗೋಪಾಲಕೃಷ್ಣ ಭಟ್
2. ಶ್ರೀ ಡಿ. ಸಿ. ನಾರಾಯಣ
3. ಶ್ರೀ ಹಾಜಿ ಬಿ. ಕೆ. ಫಝುಲ್
4. ದಿ। ಕೆ. ಎಂ. ಶಂಕರನಾರಾಯಣ ಶರ್ಮ
5. ಜನಾಬ್ ಅಬೂಬಕರ್ ಬಿ.
6. ಶ್ರೀ ಕೈಯಾರ ಕಿಂಞಣ್ಣ ರೈ
7. ಶ್ರೀ ಎಂ. ನಾರಾಯಣ ಭಟ್
8. ಶ್ರೀ ಎಂ. ಅಣ್ಣಯ್ಯ ಶೆಟ್ಟಿ

1963 ನೇ ಇಸವಿಯಿಂದ 1978ರ ವರೆಗೆ ಶ್ರೀ ಕೈಯಾರ ಕಿಂಞಣ್ಣ ರೈಗಳ ಅಧ್ಯಕ್ಷತೆಯಲ್ಲಿ ಕಾರ್ಯವೆಸಗಿತು. 1978ರಲ್ಲಿ ನಡೆದ ಚುನಾವಣೆಯಲ್ಲಿ ಶ್ರೀ ವಿ. ಶ್ರೀ ಕೃಷ್ಣ ಭಟ್ಟರು ಅಧ್ಯಕ್ಷರಾಗಿಯೂ, ಶ್ರೀ ಗಣೇಶಾನಂದ ಆಳ್ವರು ಉಪಾಧ್ಯಕ್ಷರಾಗಿಯೂ ಎಂಟು ಜನ ಸದಸ್ಯರಿಂದ ಕೂಡಿದ ಆಡಳಿತ ಸಮಿತಿಯು ಕಾರ್ಯ ನಿರ್ವಹಿಸುತ್ತಿತ್ತು, ಸದಸ್ಯರ ಹೆಸರುಗಳು ಈ ಕೆಳಗಿನಂತಿವೆ:

1. ಶ್ರೀ ಎನ್. ಕೆ. ಅಚ್ಯುತ ಭಟ್
2. ಶ್ರೀ ವಿ. ಜಿ. ವೆಂಕಟ್ರಮಣ ಭಟ್
3. ಶ್ರೀ ಎನ್. ಮಹಾಲಿಂಗ ಭಟ್
4. ಶ್ರೀ ಸಿ. ಎಚ್. ಐತ್ತಪ್ಪ ನಾಯ್ಕ
5. ಶ್ರೀ ಪಿ. ಕೃಷ್ಣಕಾಂತ ಶೆಟ್ಟಿ
6. ಶ್ರೀ ಬಿ. ಮೊಯಿದಿನ್ ಕುಂಞ
7. ಶ್ರೀಮತಿ ಪಿ. ಲಕ್ಷ್ಮೀ ರೈ

1978ರಿಂದ 1984ರ ವರೆಗೆ ಶ್ರೀ ಶ್ರೀಕೃಷ್ಣ ಭಟ್ ವಿ. ಇವರ ಅಧ್ಯಕ್ಷತೆಯಲ್ಲಿ ಕಾರ್ಯವೆಸಗುತ್ತಿದ್ದ ಈ ಗ್ರಾಮ ಪಂಚಾಯತು 1985ರಿಂದ 1987ರ ವರೆಗಿನ ಕಾಲಾವಧಿಯಲ್ಲಿ ಸರಕಾರದ ಮೇಲಾಧಿಕಾರಿಗಳ ಆಡಳಿತೆಗೊಳಪಟ್ಟಿತ್ತು.

1988ರಲ್ಲಿ ನಡೆದ ಚುನಾವಣೆಯಲ್ಲಿ ಶ್ರೀ ರಾಮ ಪಾಟಾಳಿಯವರು ಅಧ್ಯಕ್ಷರಾಗಿಯೂ ಶ್ರೀ ಸಿ. ಎ. ಅಬೂಬಕರ್‌ರವರು ಉಪಾಧ್ಯಕ್ಷರಾಗಿಯೂ ಆಡಳಿತೆ ನಡೆಸಿದರು. ಈ ಆಡಳಿತಾ ಸಮಿತಿಯ ಸದಸ್ಯರ ಹೆಸರುಗಳನ್ನು ಕೆಳಗೆ ಕೊಡಲಾಗಿದೆ.

1. ಶ್ರೀಮತಿ ಹಲೀಮ
2. ಶ್ರೀ ಎನ್. ಮಹಾಲಿಂಗ ಭಟ್
3. ಶ್ರೀ ವಿ. ಸುಬ್ರಹ್ಮಣ್ಯ ಭಟ್
4. ಶ್ರೀ ಕೆ. ಕಿಂಞಣ್ಣ ರೈ

5. ಶ್ರೀಮತಿ ಎಂ. ಲೀಲಾವತಿ
6. ಶ್ರೀ ಅಲ್ಬರ್ಟ್ ಕ್ರಾಸ್ತ
7. ಶ್ರೀ ರಾಮ ಪಣಿಕ್ಕರ್
8. ಶ್ರೀ ಕೆ. ಇ. ಅಬ್ದುಲ್ಲ

1988 ರಲ್ಲಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ರಾಮ ಪಾಟಾಳಿಯವರು ಎರಡು ವರ್ಷಗಳ ಕಾಲ ಆಡಳಿತೆ ನಡೆಸಿ 1990 ರಲ್ಲಿ ಶ್ರೀ ಸಿ. ಎ. ಅಬೂಬಕರ್‌ರವರಿಗೆ ತಮ್ಮ ಅಧ್ಯಕ್ಷ ಸ್ಥಾನವನ್ನು ಬಿಟ್ಟುಕೊಟ್ಟರು. ಇವರ ಅಧ್ಯಕ್ಷತೆಯಲ್ಲಿ 1995ರವರೆಗೆ ಈ ಬದಿಯಡ್ಕ ಗ್ರಾಮ ಪಂಚಾಯತಿನ ಆಡಳಿತೆಯು ನಡೆಯಿತು.

1995 ರಲ್ಲಿ ನಡೆದ ಚುನಾವಣೆಯಲ್ಲಿ ಶ್ರೀ ಸುಂದರ ಪ್ರಭು ಬಿ. ಇವರು ಅಧ್ಯಕ್ಷರಾಗಿಯೂ, ಶ್ರೀಮತಿ ಸಾವಿತ್ರಿ ರಾವ್ ಉಪಾಧ್ಯಕ್ಷರಾಗಿಯೂ ಇರುವ ಆಢಳಿತ ಸಮಿತಿಯು ಒಂಭತ್ತು ಜನ ಸದಸ್ಯರನ್ನೊಳಗೊಂಡು ಆಡಳಿತವನ್ನು ನಿರ್ವಹಿಸುತ್ತಾ ಇದೆ. ಸದಸ್ಯರ ಹೆಸರುಗಳನ್ನು ಕೆಳಗೆ ಕೊಡಲಾಗಿದೆ.

1. ಶ್ರೀಮತಿ ಶಾರದಾ ಎಸ್. ಎನ್. ಭಟ್
2. ಶ್ರೀಮತಿ ವಿನೋದ ಪೈ.
3. ಜನಾಬ್ ಸಿ. ಎ. ಅಬೂಬಕರ್
4. ಶ್ರೀಮತಿ ರಜನಿ ಶೆಟ್ಟಿ ಕಡಾರು
5. ಶ್ರೀ ಡಿ. ಶಂಕರ
6. ಜನಾಬ್ ಕೆ.ಇ. ಅಬ್ದುಲ್ಲ
7. ಶ್ರೀ ಬಿ. ರಾಮ ಪಾಟಾಳಿ
8. ಶ್ರೀ ಪಿ. ಜಿ. ಚಂದ್ರಹಾಸ ರೈ
9. ಶ್ರೀ ಕೆ. ಆನಂದ

ಬದಿಯಡ್ಕ ಪಂಚಾಯತಿನ ಕಛೇರಿಯಲ್ಲಿ ಪ್ರವರ್ತಿಸುತ್ತಿರುವ ನೌಕರರ ವಿವರಗಳು [19-11-96ರಂತೆ]

| | | |
|---|---|---|
| 1. | ಶ್ರೀ ಪಿ. ಗೋವಿಂದನ್ | ಕಾರ್ಯದರ್ಶಿ |
| 2. | ಶ್ರೀ ಸಿ. ಡಿ. ತಂಕಪ್ಪನ್ | ಹೆಡ್ ಕ್ಲರ್ಕ್ |
| 3. | ಶ್ರೀ ವಿಲಿಯಮ್ ಡಿ ಸೋಜ | ಯು. ಡಿ. ಕ್ಲರ್ಕ್ |
| 4. | ಶ್ರೀ ಕೆ. ಚೋಮ | ಎಲ್. ಡಿ. ಕ್ಲರ್ಕ್ |
| 5. | ಶ್ರೀ ನವೀನ ಶಂಕರ್ ನಾಯಕ್ | ಎಲ್. ಡಿ. ಕ್ಲರ್ಕ್ |
| 6. | ಶ್ರೀಮತಿ ಎ. ರಾಜೀವಿ | ಪಿಯೂನ್ |
| 7. | ಶ್ರೀಮತಿ ಪಿ. ರೋಹಿಣಿ | ಪಿಯೂನ್ |
| 8. | ಶ್ರೀ ಜಿ. ಪ್ರಸನ್ನ ಕುಮಾರ್ | ಪಿ. ಟಿ. ಪೌಂಡ್ ಕೀಪರ್ |
| 9. | ಶ್ರೀ ಸಿ. ಕುಮಾರನ್ | ಪಿ. ಟಿ. ಎಸ್ |
| 10. | ಕುಮಾರಿ ಕೆ. ಸುಶೀಲ | ಪಿ. ಟಿ. ಎಸ್ |

**ನರ್ಸರಿ ಶಾಲೆ**

| | | |
|---|---|---|
| 1. | ಶ್ರೀಮತಿ ಪಿ. ಸಿ. ಅಂಬುಜಾಕ್ಷಿ | ಅಧ್ಯಾಪಿಕೆ |
| 2. | ಶ್ರೀಮತಿ ಕೆ. ಭಾಗಿ | ಆಯಾ |

**ಪಂಚಾಯತ್ ಸಾಕ್ಷರತಾ ಕೋ-ಓರ್ಡಿನೇಟರ್**

ಶ್ರೀ ಎಂ. ಈಶ್ವರ ಭಟ್ (ಇಂಜಿನೀಯರಿಂಗ್ ಇನ್‌ಸ್ಟ್ರಕ್ಟರ್) ಡಿ. ಆರ್. ಪಿ. ಕನ್ವೀನರ್

3

# ಭೂ ಪ್ರಕೃತಿ ಮತ್ತು ಸಂಪನ್ಮೂಲ

ಬದಿಯಡ್ಕ ಪಂಚಾಯತು ಪಶ್ಚಿಮ ಕರಾವಳಿಯಿಂದ ಪೂರ್ವಕ್ಕೆ 10 ಕಿ. ಮೀ ಒಳಭಾಗದಲ್ಲಿರುತ್ತದೆ. ಇದರ ಪೂರ್ವ ಪಾರ್ಶ್ವದಲ್ಲಿ ಕುಂಬ್ಡಾಜೆ ಪಂಚಾಯತು ದಕ್ಷಿಣದಲ್ಲಿ ಚೆಂಗಳ ಪಂಚಾಯತು ಪಶ್ಚಿಮದಲ್ಲಿ ಮಧೂರು ಪಂಚಾಯತು ಹಾಗೂ ಉತ್ತರದಲ್ಲಿ ಎಣ್ಮಕಜೆ ಪಂಚಾಯತು ಇರುತ್ತದೆ.

ಕಾಸರಗೋಡು ಜಿಲ್ಲೆಗೆ ಒಳಪಡುವ ಈ ಪಂಚಾಯತು ಪ್ರದೇಶವು ಗುಡ್ಡ ಮತ್ತು ಬಯಲುಗಳಿಂದ ಕೂಡಿದೆ. ಗುಡ್ಡ ಪ್ರದೇಶಗಳಲ್ಲಿ ಮಣ್ಣು ಇರುವ ಸ್ಥಳಗಳಲ್ಲಿ ಗೇರು ಬೀಜ, ರಬ್ಬರ್, ಇತ್ಯಾದಿ ನೀರಾವರಿ ಅವಶ್ಯವಿಲ್ಲದ ಬೆಳೆಗಳನ್ನು ಬೆಳೆಸುತ್ತಾರೆ. ಮುರಕಲ್ಲು ಇರುವ ಸ್ಥಳಗಳಲ್ಲಿ ಕಲ್ಲು ಕಡಿಯುವ ವ್ಯವಸಾಯ ಸಾಗುತ್ತಿದೆ. ಬಯಲು ಪ್ರದೇಶಗಳಲ್ಲಿ ಭತ್ತ, ಅಡಿಕೆ, ತೆಂಗು, ಬಾಳೆ, ಇತ್ಯಾದಿ ಕೃಷಿಗಳನ್ನು ಮಾಡುತ್ತಾರೆ.

| ವಿವರ | ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ |
|---|---|
| ಬಯಲು | 1246 |
| ಗುಡ್ಡ | 1560 |
| ತೆಂಗಿನ ತೋಟ | 265 |
| ಅಡಿಕೆ ತೋಟ | 762 |
| ಭತ್ತದ ಗದ್ದೆ | 150 |
| ರಬ್ಬರ್ | 30 |
| ಗೇರು ಬೀಜ | 562 |
| ಕರಿಮೆಣಸು | 100 |
| ಕೊಕ್ಕೋ | 70 |
| ಬಾಳೆ | 10 |
| ಪಚ್ಚೆ ಹೆಸರು, ಉದ್ದು, ಹುರುಳಿ | 25 |
| ತರಕಾರಿ | 15 |
| ಶುಂಠಿ | 4 |
| ಎಳ್ಳು | 3 |
| ವೀಳ್ಯದೆಲೆ | 1 |

| | | |
|---|---|---|
| 1991 ರಲ್ಲಿ ಜನಗಣತಿಯ ಪ್ರಕಾರ ಪಂಚಾಯತಿನ ಜನಸಂಖ್ಯೆ | - | 2 7,265 ಆಗಿರುತ್ತದೆ. |
| ಮನೆಗಳ ಸಂಖ್ಯೆ | - | 4,310 |
| 6 ವರ್ಷ ಪ್ರಾಯಕ್ಕಿಂತ ಕಡಿಮೆ ಇರುವ ಮಕ್ಕಳ ಸಂಖ್ಯೆ | - | 4,275 |
| ಪರಿಶಿಷ್ಟ ಜಾತಿಗೆ ಸೇರಿದವರ ಮನೆಗಳ ಸಂಖ್ಯೆ | - | 600 |
| ಪರಿಶಿಷ್ಟ ವರ್ಗ ಸೇರಿದವರ ಮನೆಗಳ ಸಂಖ್ಯೆ | - | 550 |
| ಒಟ್ಟು ವಿಸ್ತೀರ್ಣ | - | 67.79 ಚದರ ಕಿ. ಮೀ. |
| ಪುರುಷರು | - | 13,874 |
| ಮಹಿಳೆಯರು | - | 13,391 |
| ಸಾಕ್ಷರತೆ | - | 100% |
| ಪರಿಶಿಷ್ಟ ಜಾತಿ | - | 3,298 |

| | | |
|---|---|---|
| ಪರಿಶಿಷ್ಟ ಪಂಗಡ | - | 2,983 |
| ಉದ್ಯೋಗದಲ್ಲಿರುವವರ ಸಂಖ್ಯೆ | - | 2,052 |
| ಮಹಿಳಾ ಉದ್ಯೋಗಿಗಳು | - | 768 |
| ಪುರುಷ ಉದ್ಯೋಗಿಗಳು | - | 1,284 |
| ಒಟ್ಟು ಜನಸಂಖ್ಯೆಯ ಉದ್ಯೋಗದಲ್ಲಿರುವವರ ಶೇಕಡಾ ಮಾನ | - | 11.15% |
| ಆಂಶಿಕ ಕೆಲಸಗಾರರು | - | 2,000 (ಕೃಷಿ, ಕಟ್ಟಡ ನಿರ್ಮಾಣ ಇತ್ಯಾದಿ) |
| ಪುರುಷರು | - | 1,260 |
| ಮಹಿಳೆಯರು | - | 740 |

4

# ಪಂಚಾಯತು ಇತಿಹಾಸ

'ಬದಿ' ಎಂದರೆ ದೈವಸ್ಥಾನ ! ಅಡ್ಕ' ಎಂದರೆ ವಿಸ್ತಾರವಾದ ಬಯಲು ಪ್ರದೇಶ. ನೀರ್ಚಾಲು, ಕಿನ್ನಿಮಾಣಿ ಮತ್ತು ಪೂಮಾಣಿ ದೈವಗಳ ದೈವಸ್ಥಾನದಿಂದಾಗಿ 'ಬದಿಯಡ್ಕ'ಎಂಬ ಹೆಸರನ್ನು ಪಡೆಯಿತು.

ಪ್ರಥಮವಾಗಿ ಬದಿಯಡ್ಕ ಮತ್ತು ಬೇಳಗಳಲ್ಲಿ ಆಡಳಿತದ ಸೌಕರ್ಯಕ್ಕಾಗಿ ಬೇರೆ ಬೇರೆಯಾಗಿ ಪಂಚಾಯತುಗಳು ಮತ್ತು ಪಂಚಾಯತು ಕೋರ್ಟುಗಳು ಕಾರ್ಯ ನಿರ್ವಹಿಸುತ್ತಿದ್ದುವು. ಬೇಳ ಪಂಚಾಯತಿನ ಅಧ್ಯಕ್ಷರಾಗಿ ಬೊಳುಂಬು ಮಹಾಲಿಂಗ ಭಟ್ಟರು, ಮಾನ್ಯ ಅಣ್ಣಯ್ಯ ಶೆಟ್ಟರು ಮತ್ತು ಕೋಡಿಂಗಾರು ಕೋಚಣ್ಣ ಭಂಡಾರಿಗಳು ಕಾರ್ಯವೆಸಗಿರುತ್ತಾರೆ. ಆ ಬಳಿಕ ಇದು ಬದಿಯಡ್ಕ ಪಂಚಾಯತಿನೊಂದಿಗೆ ವಿಲೀಕರಣಗೊಂಡು ಪ್ರಥಮ ಬದಿಯಡ್ಕ ಪಂಚಾಯತಿನ ಅಧ್ಯಕ್ಷರಾಗಿ ಈಳಂತೋಡಿ ಕೃಷ್ಣ ಭಟ್ಟರು ಅಧಿಕಾರಕ್ಕೆ ಬಂದರು.

ಈವರೆಗೆ ಕೆಳಗಿನವರು ಅಧ್ಯಕ್ಷರಾಗಿ ಅಧಿಕಾರ ನಿರ್ವಹಿಸಿರುತ್ತಾರೆ.

ಸರ್ವಶ್ರೀ

(i) ದಿ। ಈಳಂತೋಡಿ ಕೃಷ್ಣ ಭಟ್
(ii) ದಿ। ಕಮಲಾಕ್ಷ ಪೈ
(iii) ದಿ। ಡಾ. ಪಿ. ಯಸ್ ಶಾಸ್ತ್ರಿ
(iv) ಕಯ್ಯಾರ ಕಿಂಞಣ್ಣ ರೈ
(v) ವಿ. ಶ್ರೀಕೃಷ್ಣ ಭಟ್
(vi) ರಾಮ ಪಾಟಾಳಿ
(vii) ಸಿ. ಎ. ಅಬೂಬಕರ್
(viii) ಬಿ. ಸುಂದರ ಪ್ರಭು (ಹಾಲಿ ಅಧ್ಯಕ್ಷರು)

**ವಿಶೇಷ ಪುರಸ್ಕಾರಗಳು :**

ಡಾ । ಪಿ. ಯಸ್. ಶಾಸ್ತ್ರಿಗಳ ಅಧಿಕಾರಾವಧಿಯಲ್ಲಿ ಮದ್ರಾಸು ಸರಕಾರದಿಂದ ಉತ್ತಮ ಪಂಚಾಯತು ಎಂಬ ಪುರಸ್ಕಾರ ಲಭಿಸಿರುತ್ತದೆ. ಇದೇ ರೀತಿಯಲ್ಲಿ ಕೇರಳ ರಾಜ್ಯದ ಉತ್ತಮ ಪಂಚಾಯತು ಆಗಿ ಕಯ್ಯಾರ ಕಿಂಞಣ್ಣ ರೈಗಳ ಅಧಿಕಾರಾವಧಿಯಲ್ಲಿ ಗುರುತಿಸಲ್ಪಟ್ಟಿದೆ.

ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಬದಿಯಡ್ಕ ಪಂಚಾಯತು ಬ್ರಿಟಿಷ್ ಆಳ್ವಿಕೆಯ ಯುದ್ಧ ಪರ, ವಿರೋಧಿ ನೀತಿಗೆ ಎದುರಾಗಿ ಕೆಲಸ ಮಾಡಿದ್ದರಿಂದ ಈ ಪಂಚಾಯತ್ ಬರ್ಕಾಸ್ತು ಗೊಳಿಸಲ್ಪಟ್ಟು ಸರಕಾರದ ನೇರ ಆಡಳಿತಕ್ಕೆ ಒಳಪಟ್ಟು ಸರಕಾರದಿಂದ ನೇಮಿಸಲ್ಪಟ್ಟ ಪ್ರತಿನಿಧಿಗಳಿಂದ ಆಡಳಿತ ಕಾರ್ಯ ನಿರ್ವಹಿಸುತ್ತಿತ್ತು.

1. ಡಾ । ಪಿ. ಯಸ್. ಶಾಸ್ತ್ರಿಗಳ ಅಧಿಕಾರಾವಧಿಯಲ್ಲಿ ಬದಿಯಡ್ಕದಲ್ಲಿ ಪೋಲೀಸ್ ಸ್ಟೇಶನ್ ಪ್ರಾರಂಭಿಸಲ್ಪಟ್ಟಿತು.
2. ಕಮಲಾಕ್ಷ ಪೈಗಳ ಅಧಿಕಾರಾವಧಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವು ಕಾರ್ಯವೆಸಗಲು ಪ್ರಾರಂಭವಾಯಿತು.
3. ಡಾ । ಪಿ. ಯಸ್. ಶಾಸ್ತ್ರಿಗಳ ಅಧಿಕಾರಾವಧಿಯಲ್ಲಿ ಪಶು ವೈದ್ಯಕೀಯ ಸೌಲಭ್ಯ, ಟೆಲಿಫೋನ್ ಸೌಕರ್ಯ, ಮತ್ತು ಬದಿಯಡ್ಕ ಪೇಟೆಗೆ ನೀರು ಸರಬರಾಜು ವ್ಯವಸ್ಥೆ ಪ್ರಾರಂಭಿಸಲ್ಪಟ್ಟಿತು. ಕಾನತ್ತಿಲ (ಮೀಸೆ ಬೈಲು), ಚೆಡೆಕಲ್ಲು, ಪೆರಡಾಲ, ಬರ್ಲ ಎಂಬಲ್ಲಿ ಶಾಶ್ವತ ಕಾಲು ಸಂಕಗಳನ್ನು ನಿರ್ಮಿಸಲಾಯಿತು.
4. ಕಯ್ಯಾರ ಕಿಂಞಣ್ಣ ರೈಗಳ ಅಧಿಕಾರಾವಧಿಯಲ್ಲಿ ಪಂಚಾಯತು ಶಾಲೆಗಳಾದ ಉದಯಗಿರಿ ಮತ್ತು ವಿದ್ಯಾಗಿರಿ ಶಾಲೆಗಳು ಪ್ರಾರಂಭಿಸಲ್ಪಟ್ಟಿತು. ಬದಿಯಡ್ಕದ ಪೇಟೆಯಲ್ಲಿ ಜನರ ಸೌಕರ್ಯಕ್ಕಾಗಿ ಬಸ್ ನಿಲ್ದಾಣ ಹಾಗೂ ವ್ಯಾಪಾರ ಸಂಕೀರ್ಣವನ್ನು ನಿರ್ಮಿಸಲಾಯಿತು. ಬದಿಯಡ್ಕದಲ್ಲಿ ಲೋಕಲ್ ಲೈಬ್ರೆರಿ (ವಾಚನಾಲಯ) ಇವರ

ಕಾಲದಲ್ಲಿ ಜನರಿಗಾಗಿ ತೆರೆಯಲ್ಪಟ್ಟಿತು. ಹಾಗೂ ಪೇಟೆಗೆ ವಿದ್ಯುತ್ ಸಂಪರ್ಕವೂ ಇವರ ಅವಧಿಯಲ್ಲಿ ಒದಗಿ ಬಂತು.

5. ವಿ. ಶ್ರೀಕೃಷ್ಣ ಭಟ್ಟರ ಅಧಿಕಾರಾವಧಿಯಲ್ಲಿ ವ್ಯಾಪಾರ ಸಂಕೀರ್ಣ, ಸ್ಮಶಾನ (ಚೆನ್ನಾರು ಕಟ್ಟೆಯಲ್ಲಿ) ವನ್ನು ಸ್ಥಾಪಿಸಲಾಯಿತು. ನೀರಿನ ಸೌಕರ್ಯಕ್ಕಾಗಿ ಕೊಳವೆ ಬಾವಿಗಳೂ, ಬಾವಿಗಳೂ ನಿರ್ಮಾಣಗೊಂಡವು. ಕನಕಪ್ಪಾಡಿ ಅಲ್ಪಸಂಖ್ಯಾತರ ಕಾಲೋನಿಯ ರಚನೆಯಾಯಿತು.

6. ರಾಮ ಪಾಟಾಳಿಯವರ ಆಢಳಿತಾವಧಿಯಲ್ಲಿ ಪೆರುಮುಂಡ ಮತ್ತು ನೀರ್ಚಾಲ್‌ಗಳಲ್ಲಿ ಟಿವಿ ಸೆಂಟರ್‌ಗಳನ್ನು ಪ್ರಾರಂಭಿಸಲಾಯಿತು.

7. ಸಿ. ಎ. ಅಬೂಬಕ್ಕರ್‌ರವರ ಅಧಿಕಾರಾವಧಿಯಲ್ಲಿ ಮಿನಿ ಸ್ಟೇಡಿಯಂ, ಚೆಡೆಕಲ್ಲು ನರ್ಸರಿ ಶಾಲೆ, ಸಾಂಸ್ಕೃತಿಕ ನಿಲಯಗಳು ನಿರ್ಮಾಣಗೊಂಡವು. ಹಾಗೂ ಬದಿಯಡ್ಕ ಪಂಚಾಯತು ಸಂಪೂರ್ಣ ಸಾಕ್ಷರತಾ ಪಂಚಾಯತ್ ಆಗಿ ಘೋಶಿಸಲ್ಪಟ್ಟಿತು.

ಪ್ರಸ್ತುತ ಬಿ. ಸುಂದರ ಪ್ರಭುಗಳು ಗ್ರಾಮ ಪಂಚಾಯತು ಅಧ್ಯಕ್ಷರಾಗಿ 9ನೇ ಪಂಚವಾರ್ಷಿಕ ಜನಕೀಯ ಯೋಜನೆಯನ್ನು ಜಾರಿಗೊಳಿಸುವರೇ ಶ್ರಮಿಸುತ್ತಿದ್ದಾರೆ.

## ಆರಾಧನಾಲಯಗಳು :

ಬದಿಯಡ್ಕ ಪಂಚಾಯತಿನಲ್ಲಿ ಹಲವು ಆರಾಧನಾಲಯಗಳು ಅಸ್ಥಿತ್ವದಲ್ಲಿವೆ. ಪೆರಡಾಲದಲ್ಲಿ ಶ್ರೀ ಉದನೇಶ್ವರ ದೇವಸ್ಥಾನ, ಕೆಡೆಂಜಿ ಶ್ರೀ ಮಹಾವಿಷ್ಣು ದೇವಸ್ಥಾನ, ಬಳ್ಳಂಬೆಟ್ಟು ವನಶಾಸ್ತಾರ, ಕುಂಟಿಕಾನ ಶಂಕರನಾರಾಯಣ ಮಠ, ಕುಮಾರಮಂಗಲ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಕುಕ್ಕಂಕೋಡು ಶ್ರೀ ಸುಬ್ರಮಣ್ಯ ದೇವಸ್ಥಾನ, ಕರ್ಮಾರು ಶ್ರೀ ಮಹಾವಿಷ್ಣು ದೇವಸ್ಥಾನ, ಮಾನ್ಯ ಶ್ರೀ ವೆಂಕಟ್ರಮಣ ದೇವಸ್ಥಾನ, ಬೆಳ್ಳೂರು ಶ್ರೀ ಮಹಾದೇವ ದೇವಸ್ಥಾನ, ಮುನ್ನೂರು ಶ್ರೀ ಗೋಪಾಲಕೃಷ್ಣ ದೇವಸ್ಥಾನ, ಚೇರ್ಕೂಡ್ಲು ಶ್ರೀ ಮಹಾವಿಷ್ಣು ದೇವಸ್ಥಾನ, ಸೇಡಿಕಟ್ಟೆಯಲ್ಲಿ ಶ್ರೀ ಧರ್ಮಶಾಸ್ತಾರ, ಹೊಸಮನೆ ಮಲ್ಲತ್ತೇರು ಎಂಬಲ್ಲಿ ಲಸ್ಕರೀ ಮಠ, ನೆಲ್ಲಿಕುಂಜೆ ಶ್ರೀ ಮಹಾವಿಷ್ಣು ದೇವಸ್ಥಾನ, ಇಕ್ಕೇರಿ ಶ್ರೀ ಶಂಕರ ನಾರಾಯಣ ಮಠ ಇವೇ ಮೊದಲಾದವುಗಳು ಪ್ರಸಿದ್ಧವಾಗಿವೆ.

ಕಿನ್ನಿಮಾಣಿ-ಪೂಮಾಣಿ ದೈವಸ್ಥಾನ, ಕಡಾರು ದೈವಸ್ಥಾನ, ಬಾರಡ್ಕ ಗುಳಿಗನ ಬನ, ಏಳ್ಕಾನ ರಕ್ತೇಶ್ವರಿ ದೈವಸ್ಥಾನ, ಕಾಂತಲ ಧೂಮಾವತಿ ದೈವಸ್ಥಾನ, ಕಾಯರ್‌ಕಯ ವಯನಾಡ ಕುಲವನ್ ದೈವಸ್ಥಾನ, ಪರ್ಕಿಕ್ಕಾರು ಚಾಮುಂಡೇಶ್ವರಿ ದೈವಸ್ಥಾನಗಳು ಪ್ರಸಿದ್ಧಿ ಪಡೆದವುಗಳಾಗಿದೆ. ಅಲ್ಲದೆ ನೀರ್ಚಾಲು ಬೇಬ್ಬರ್ಯ ಕಟ್ಟೆಯ ದೈವಸ್ಥಾನವು ಕೂಡ ಪ್ರಸಿದ್ಧಿ ಪಡೆದಿದೆ. ವಿಷ್ಣುಮೂರ್ತಿ ದೈವದ ವಾರ್ಷಿಕೋತ್ಸವವು (ಒತ್ತೆಕೋಲ) ಮಾನ್ಯ, ಬೇಳ, ಮುಂಡೋಡು, ವಳಮಲೆ, ಬದಿಯಡ್ಕ, ಬಾರಡ್ಕ ಇತ್ಯಾದಿ ಕಡೆಗಳಲ್ಲಿ ನಡೆದು ಬರುತ್ತಿದೆ.

ಬೇಳ, ಉಕ್ಕಿನಡ್ಕ ಹಾಗೂ ಮಾಡತ್ತಡ್ಕದಲ್ಲಿ ಇಗರ್ಜಿಗಳು ಅಸ್ಥಿತ್ವದಲ್ಲಿದೆ. ಮಸೀದಿಗಳಲ್ಲಿ ಪೆರಡಾಲ ಮಸೀದಿಯು ಪುರಾತನವಾಗಿದ್ದು, ಆ ಬಳಿಕ ಚಡೇಕಲ್ಲು, ಕನ್ಯಾನ, ಚುಳ್ಳಿಕ್ಕಾನ, ಬೀಜಂತಡ್ಕ, ಬದಿಯಡ್ಕ, ಪಳ್ಳತಡ್ಕ, ಕೋರಿಕ್ಕಾರು, ನೀರ್ಚಾಲು, ಬೇಳ, ಮಾಡತ್ತಡ್ಕ, ಕನ್ನೆಪ್ಪಾಡಿ, ಗೋಳಿಯಡ್ಕದಲ್ಲಿನ ಮಸೀದಿಗಳು ಪ್ರಮುಖ ಇತರ ಮಸೀದಿಗಳಾಗಿವೆ. ಪೆರಡಾಲ ಜಾರವು ಮುಸ್ಲಿಮರ ಪವಿತ್ರ ಕ್ಷೇತ್ರವಾಗಿದೆ. ಇಲ್ಲಿ ಎರಡು ವರ್ಷಕ್ಕೊಮ್ಮೆ ಉರುಸ್ ಉತ್ಸವವು ವಿಜೃಂಭಣೆಯಿಂದ ನಡೆದು ಬರುತ್ತಿದೆ.

**ಸ್ವಾತಂತ್ರ್ಯ ಹೋರಾಟಗಾರರು :** ಸ್ವಾತಂತ್ರ್ಯಕ್ಕಾಗಿ ಹೋರಾಡಿ ಜೈಲುವಾಸವನ್ನನುಭವಿಸಿದವರಲ್ಲಿ ಶಂಕರ್ ಟೈಲರ್, ಕಮಲಾಕ್ಷ ಪೈಗಳು, ಡಿ. ಬೀರು ಶೆಟ್ಟಿ, ಡಾ। ವಿ. ಎಸ್ ಶಾಸ್ತ್ರಿಗಳು, ಖಂಡಿಗೆ ಕೃಷ್ಣ ಭಟ್ಟರು, ಸರ್ಪಂಗಳ ರಾಮ ಭಟ್ಟರು, ವೈದ್ಯ ಶಂಕರ ನಾರಾಯಣ ಭಟ್ ಪಾಣಾಜೆ ಇವರುಗಳು ಪ್ರಮುಖರಾಗಿದ್ದಾರೆ.

**ಭೂ ಮಾಲಕರು :** ಬದಿಯಡ್ಕ ಪಂಚಾಯತಿನಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೇ ಮುಖ್ಯವಾಗಿದ್ದ ಭೂ ಮಾಲಕರಲ್ಲಿ ಮಾಯಿಪ್ಪಾಡಿ ಸಾಮಂತರಸುಗಳು, ಚೆಂಬುಳ್ಳಿಮಾರು, ಖಂಡಿಗೆ, ಕೋಡಿಂಗಾರು, ಕಡಾರು, ಪೆರಡಾಲಗುತ್ತು, ಏಳ್ಕಾನದವರು. ಈ ಮನೆತನಗಳು ಈಗ ಭೂ ಸುಧಾರಣೆಯಿಂದಾಗಿ ಕ್ಷೀಣಗೊಂಡಿವೆ.

**ಕಾರ್ಮಿಕ ಸಂಘಟನೆ :** ಕೃಷಿ ಮತ್ತು ಕೈಗಾರಿಕೆಗಳಿಂದಾಗಿ ಹಲವು ಕಾರ್ಮಿಕ ಸಂಘಟನೆಗಳು ರೂಪುಗೊಂಡಿವೆ. ಅವುಗಳಲ್ಲಿ ಕರ್ಷಕ ಸಂಘ, ಕೃಷಿ ಕಾರ್ಮಿಕರ ಸಂಘ, ದಿನೇಶ ಬೀಡಿ ಕಾರ್ಮಿಕ ಸಂಘ, ಕೆಂಪು ಕಲ್ಲು ಕಡಿಯುವವರ ಸಂಘ, ತಲೆಹೊರೆ ಕಾರ್ಮಿಕರ ಸಂಘ, ಇತ್ಯಾದಿಗಳು ಪ್ರಚಲಿತವಾಗಿವೆ.

**ಸಹಕಾರಿ ಸಂಘಗಳು :** 1918ರಲ್ಲಿ ಪೆರಡಾಲ ಕೃಷ್ಣಯ್ಯನವರಿಂದ ನೀರ್ಚಾಲಿನಲ್ಲಿ ಸರ್ವಿಸ್ ಕೋಪರೇಟಿವ್ ಸೊಸೈಟಿಯ ಪ್ರಾರಂಭವಾಯಿತು. ಅದೂ ಬೆಳೆದು ಪೆರಡಾಲ ಸರ್ವಿಸ್ ಕೋಪರೇಟಿವ್ ಬೆಂಕ್ ಆಗಿ ಕಾರ್ಯವೆಸಗುತ್ತಿದ್ದು ಬದಿಯಡ್ಕದಲ್ಲಿಯೂ ಒಂದು ಶಾಖೆಯನ್ನು ಹೊಂದಿದೆ.

1944ರಲ್ಲಿ ಇಳಂಕೋಡಿ ಕೃಷ್ಣ ಭಟ್ಟರ ನೇತೃತ್ವದಲ್ಲಿ ಮೊಳಹಲ್ಲಿ ಶಿವರಾಯರ ಸಹಕಾರದಲ್ಲಿ ಬದಿಯಡ್ಕ ಕೋಪರೇಟಿವ್ ಸ್ಟೋರ್ಸ್‌ನ ಸ್ಥಾಪನೆ. ಈ ಮೂಲಕ ಜನತೆಗೆ ರೇಶನಿಂಗ್ ವಿತರಣಾ ವ್ಯವಸ್ಥೆ, ನಿತ್ಯೋಪಯೋಗಿ ವಸ್ತುಗಳ ಮಾರಾಟ ವ್ಯವಸ್ಥೆ ಮತ್ತು ಸರಕು ಸಾಗಣೆ ವ್ಯವಸ್ಥೆ ನಡೆಯುತ್ತಿದ್ದು ಉತ್ತಮ ಸೇವೆಗಾಗಿ ಪಾರಿತೋಷಕವನ್ನು ಪಡೆದಿದ್ದು ಈಗ ಅಸ್ಥಿತ್ವದಲ್ಲಿಲ್ಲದಿರುವುದು ವಿಷಾದನೀಯ.

ಖಂಡಿಗೆ ಮನೆತನದವರ ಮುಂದಾಳುತ್ವದಲ್ಲಿ 1958ರಲ್ಲಿ KACMS (ಕಾಸರಗೋಡು ಕೃಷಿಕರ ಸಹಕಾರಿ ಮಾರಾಟ ಸಂಘ)ದ ಸ್ಥಾಪನೆ. ಈ ಮೂಲಕ ಕೃಷಿ ಉತ್ಪನ್ನಗಳಾದ ಅಡಿಕೆ, ತೆಂಗು, ಕಾಳುಮೆಣಸು ಇತ್ಯಾದಿಗಳ ಮಾರುಕಟ್ಟೆ ವ್ಯವಸ್ಥೆ ಸೌಲಭ್ಯ ಒದಗಿ ಬಂತು. ಅನಂತರ CAMPCO ಸಂಸ್ಥೆಯ ಬದಿಯಡ್ಕ ಶಾಖೆಯು ಕಾರ್ಯಾರಂಭಗೊಂಡಿತು.

ಕೃಷಿ ಉತ್ಪನ್ನಗಳ ಮಾರಾಟಕ್ಕಾಗಿ ಪ್ರಸಿದ್ಧಿ ಪಡೆದ ಸಂಘಗಳಲ್ಲಿ ಕರ್ನಾಟಕ ವ್ಯವಸಾಯ ವರ್ತಕರ ಸಂಘದ ಶಾಖೆಯು ನೀರ್ಚಾಲಿನಲ್ಲಿ ಉತ್ತಮ ಸೇವೆಯನ್ನು ಒದಗಿಸುತ್ತಿತ್ತು.

ಇನ್ನೂ ಹಲವು ಸಂಘಗಳು ಇತ್ತೀಚೆಗೆ ರೂಪುಗೊಂಡು ಸಹಕಾರಿ ಕ್ಷೇತ್ರದಲ್ಲಿ ಕಾರ್ಯಾಚರಿಸುತ್ತಿವೆ. ಎರಡನೇ ಮಹಾಯುದ್ಧದ ಕಾಲದಲ್ಲಿ (1939) ಪಡಿತರ ರೇಶನಿಂಗ್ ವ್ಯವಸ್ಥೆ ಜಾರಿಗೆ ಬಂತು. ಆ ಬಳಿಕ ಅದು ಸುಧಾರಣೆಗೊಂಡು ಉತ್ತಮ ರೀತಿಯಿಂದ ಕಾರ್ಯ ನಿರ್ವಹಿಸುತ್ತಿದೆ.

**ವಿದ್ಯಾಲಯಗಳು :** 1911ರಲ್ಲಿ ಪೆರಡಾಲ ದೇವಸ್ಥಾನದ ಪರಿಸರದಲ್ಲಿ ಸಂಸ್ಕೃತ ವಿದ್ಯಾಭ್ಯಾಸಕ್ಕಾಗಿ ಪ್ರಾರಂಭಿಸಲ್ಪಟ್ಟ ವಿದ್ಯ ಕೇಂದ್ರವು 1918ರಲ್ಲಿ ಸರಕಾರದ ಅಂಗೀಕಾರದೊಂದಿಗೆ ಸ್ಥಾಪಿಸಲ್ಪಟ್ಟಿತು. ಇದು 1919ಕ್ಕೆ ಸಂಸ್ಕೃತ ಕಾಲೇಜಾಗಿ ರೂಪುಗೊಂಡು ನೀರ್ಚಾಲು ಮಹಾಜನ ಸಂಸ್ಕೃತ ವಿದ್ಯಾಲಯವಾಯಿತು. ಇಲ್ಲಿಗೆ ವಿಶೇಷವಾಗಿ ಊರ ಪರವೂರ ವಿದ್ಯಾರ್ಥಿಗಳು ವಿದ್ಯಾರ್ಜನೆಗಾಗಿ ಬರುತ್ತಿದ್ದುದಲ್ಲದೆ, ವಿದ್ಯಾರ್ಥಿಗಳ ವಾಸ್ತವ್ಯಕ್ಕಾಗಿ ವಿದ್ಯಾರ್ಥಿ ನಿಲಯವೂ ಕಾರ್ಯ ನಿರ್ವಹಿಸುತ್ತಿತ್ತು. ಅನಂತರ ಇದು ಮುಂದೆ ಮಹಾಜನ ಸಂಸ್ಕೃತ ಕಾಲೇಜು ಹೈಸ್ಕೂಲಾಗಿ ಮುಂದುವರೆಯುತ್ತಾ ಇದೆ.

1944ರಲ್ಲಿ ಪೆರಡಾಲ ಎಜುಕೇಶನ್ ಸೊಸೈಟಿಯ ಮೂಲಕ ನವಜೀವನ ಹೈಸ್ಕೂಲಿನ ಸ್ಥಾಪನೆಯಾಯಿತು. ಇಲ್ಲಿ ವಿದ್ಯಾರ್ಥಿ ನಿಲಯದ ಸೌಕರ್ಯವೂ ಇತ್ತು. ಮಾತ್ರವಲ್ಲದೆ ಕೇರಳದಲ್ಲಿಯೇ ವಿಶೇಷವಾದ ವೃತ್ತಿಪರ ಕೋರ್ಸ್‌ಗಳ ಅಧ್ಯಯನ ವಿಭಾಗವೂ ಕಾರ್ಯವೆಸಗುತ್ತಿತ್ತು.

1927ರಲ್ಲಿ ಖಾಸಗಿಯಾಗಿ ಪಂಜರಿಕೆ ಅನಂತ ಭಟ್ಟರ ನೇತೃತ್ವದಲ್ಲಿ ಶ್ರೀನಿವಾಸ ಗಾರ್ಡನಿನ ಸ್ವಂತ ಕಟ್ಟಡದಲ್ಲಿ ಪ್ರಾಥಮಿಕ ಶಾಲೆ ಪ್ರಾರಂಭಗೊಂಡಿತು. ಅದು ಬಡ್ತಿಗೊಂಡು ಸರಕಾರಿ ಹಿರಿಯ ಬುನಾದಿ ಶಾಲೆಯಾಗಿ ಮಾರ್ಪಟ್ಟಿತು. ಶ್ರೀ ಅನಂತ ಭಟ್ಟರ ಸ್ಮಾರಕವಾಗಿ ವಿದ್ಯಾಗಿರಿ ಪಂಚಾಯತು ಶಾಲೆಯು ಸ್ಥಾಪಿಸಲ್ಪಟ್ಟಿತು. ಅದೇ ರೀತಿ ಉದಯಗಿರಿಯಲ್ಲಿ

ಪಂಚಾಯತ್ ಶಾಲೆಯೂ ಇದೆ. ಇತರ ಶಾಲೆಗಳಾಗಿ ಉಕ್ಕಿನಡ್ಕದ ವಸಿಷ್ಠಾಶ್ರಮ, ಕೀರಿಕ್ಕಾಡು ಶಾಲೆ, ಪಳ್ಳತ್ತಡ್ಕ ಹಾಗೂ ಕುಂಟಿಕಾನ ಶಾಲೆಗಳು ಹಳೆಯ ಶಾಲೆಗಳಾಗಿವೆ. ಆ ಕಾಲದಲ್ಲಿ ಉನ್ನತ ಶಿಕ್ಷಣಕ್ಕಾಗಿ ಕಾಸರಗೋಡು ಮತ್ತು ನೀಲೇಶ್ವರದಲ್ಲಿ ವಿದ್ಯಾಭ್ಯಾಸ ಪಡೆಯಬೇಕಿತ್ತು.

1928ರಲ್ಲಿ ಏರ್ಪಕಟ್ಟೆ ಎಂಬಲ್ಲಿ ಮುಂಡೋಡು ನಾಗೋಜಿರಾಯರಿಂದ ಮಾನ್ಯ ಜ್ಞಾನೋದಯ ಶಾಲೆಯ ಸ್ಥಾಪನೆಯಾಯಿತು. ಆ ನಂತರ KSR ಮೈತ್ರೇಯಿ(ಶೇಶೋಜಿ ರಾವ್)ಯವರ ಆಢಳಿತವು ಕುಂಠಿತ ಸ್ಥಿತಿಯಲ್ಲಿತ್ತು. ಆಗ ಕಜಂಪಾಡಿ ಶಾಲೆಯಲ್ಲಿ ಅಧ್ಯಾಪಕರಾಗಿ ದುಡಿಯುತ್ತಿದ್ದ ಅಣ್ಣಯ್ಯ ಶೆಟ್ಟರು 1935ರಲ್ಲಿ ಏರ್ಪಕಟ್ಟೆ ಶಾಲೆಯ ಆಡಳಿತವನ್ನು ನಡೆಸುತ್ತಿದ್ದರು. ಇದನ್ನು ಮಾನ್ಯಕ್ಕೆ ವರ್ಗಾಯಿಸಿ ಉತ್ತಮ ಸೌಕರ್ಯಗಳಿಗೊಳಪಡಿಸಿ 1945ರಲ್ಲಿ ಮಾನ್ಯ ಜ್ಞಾನೋದಯ ಶಾಲೆಯಾಗಿ ರೂಪುಗೊಂಡಿತು.

5.

# ಚಾಲ್ತಿಯಲ್ಲಿರುವ ಸರಕಾರಿ ಸ್ಕೀಮುಗಳು

**ಸಾರ್ವಜನಿಕ ಆರೋಗ್ಯ :**

1. ಕುಟುಂಬ ಕ್ಷೇಮ ಪದ್ಧತಿ ( Family Welfare Programme)
2. ಮಾತೃ ಶಿಶು ಸಂರಕ್ಷಣಾ ಪದ್ಧತಿ
3. ಪೋಲಿಯೋ ನಿರ್ಮೂಲನ ಪದ್ಧತಿ
4. A.I.D.S ನಿಯಂತ್ರಣ ಪದ್ಧತಿ
5. ಮಲೇರಿಯಾ ನಿರ್ಮೂಲನ ಪದ್ಧತಿ
6. ಕುರುಡುತನ ನಿರ್ಮೂಲನ ಪದ್ಧತಿ
7. ಕ್ಷಯ ರೋಗ ನಿವಾರಣಾ ಪದ್ಧತಿ
8. ಕುಷ್ಠ ರೋಗ ನಿವಾರಣಾ ಪದ್ಧತಿ
9. ಶಾಲಾ ಮಕ್ಕಳ ಆರೋಗ್ಯ ಪದ್ಧತಿ
10. ಅಯೋಡಿನ್ ಕೊರತೆ ನಿಯಂತ್ರಣ ಪದ್ಧತಿ.

**ಈ ಮೇಲಿನ ಪದ್ಧತಿಗಳ ಅನುಷ್ಠಾನದಲ್ಲಿ ಇದಿರಾಗುತ್ತಿರುವ ಸಮಸ್ಯೆಗಳು :**

1. ಆರ್ಥಿಕ ಕೊರತೆ
2. ವಾಹನ ಸೌಕರ್ಯಗಳ ಕೊರತೆ
3. ಕುಟುಂಬ ಕ್ಷೇಮ ಪದ್ಧತಿಗಳಿಗೆ ಕಟ್ಟಡಗಳು ಇಲ್ಲದಿರುವುದು
4. ದೂರವಾಣಿ ಸೌಕರ್ಯದ ಕೊರತೆ
5. ಪೀಠೋಪಕರಣಗಳ ಸಮಸ್ಯೆ

**ಪರಿಹಾರೋಪಾಯಗಳು :**

1. ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಜೀಪಿನ ಸೌಕರ್ಯ ಒದಗಿಸುವುದು.
2. ಆವಶ್ಯಕತೆಗೆ ಅನುಸಾರವಾಗಿ ಆರ್ಥಿಕ ಸೌಲಭ್ಯ ಒದಗಿಸುವುದು.
3. ಸಾಂಕ್ರಾಮಿಕ ರೋಗ ಹರಡದಂತೆ ಶುದ್ಧ ಜಲ ವಿತರಣೆ ನಡೆಸುವುದು.
4. ಚರಂಡಿಗಳನ್ನು ನಿರ್ಮಿಸುವುದು.
5. ಪರಿಸರ ಮಲಿನೀಕರಣವನ್ನು ತಡೆಗಟ್ಟುವುದು
6. ಆರೋಗ್ಯಕ್ಕೆ ಸಂಬಂಧಿಸಿದ ತರಗತಿಗಳನ್ನು ಸಾಧ್ಯವಿದ್ದಷ್ಟು ನಡೆಸುವುದು
7. ಪೋಷಕಾಂಶವುಳ್ಳ ಆಹಾರ ವಿತರಣೆಗೆ ಕ್ಯಾಂಪ್‌ಗಳನ್ನು ನಡೆಸುವುದು
8. ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೂವತ್ತು ಹಾಸಿಗೆಗಳ ಸೌಕರ್ಯವಿರುವ ಆಸ್ಪತ್ರೆಯಾಗಿ ಕಾರ್ಯಾರಂಭ ಮಾಡುವಾಗ ಆವಶ್ಯವಿರುವ ಉದ್ಯೋಗಸ್ಥರನ್ನು ನೇಮಿಸುವುದು. x-ray, Blood Bank ಆಂಬ್ಯುಲೆನ್ಸ್, ಶಸ್ತ್ರಕ್ರಿಯಾ ಚಿಕಿತ್ಸೆ ಕೊಠಡಿಯನ್ನು ಹಾಗೂ ವಸತಿ ಸೌಕರ್ಯಗಳನ್ನು ಕಲ್ಪಿಸುವುದು.

**ಮೃಗ ಸಂರಕ್ಷಣೆ :**

**ಸ್ಕೀಮುಗಳು :**

**ಎಂಟನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹಮ್ಮಿಕೊಂಡ ಕಾರ್ಯಕ್ರಮಗಳು :**

1. ಪಂಚಾಯತಿನಲ್ಲಿ ಈಗ ನಡೆಸಲ್ಪಡುವ ಪದ್ಧತಿಗಳಲ್ಲಿ ಪ್ರಧಾನವಾದುದು "**ಕರು ಸಾಕಣಾ ಪದ್ಧತಿ**". ಇದರಲ್ಲಿ

ನಾಲ್ಕರಿಂದ ಒಂಭತ್ತು ತಿಂಗಳು ಪ್ರಾಯದ ಕರುಗಳನ್ನು ಆಯ್ಕೆ ಮಾಡಿ ಅವುಗಳನ್ನು ಇನ್ಶೂರು ಮಾಡಿಸಿ ಶೇಕಡಾ 50ರ ಸಬ್ಸಿಡಿ ದರದಲ್ಲಿ ಪಶು ಆಹಾರವನ್ನು ಕೊಡುವುದು. ಒಮ್ಮೆ ಆಯ್ಕೆ ಮಾಡಿದ ಕರುವಿಗೆ ಗರ್ಭ ನಿಂತು ಕರು ಹಾಕುವವರೆಗೆ ಅಥವಾ ಮೂವತ್ತೆರಡು ತಿಂಗಳುಗಳವರೆಗೆ ಪಶು ಆಹಾರವನ್ನು ಪೂರೈಸಲಾಗುವುದು. ಈ ಸ್ಕೀಮಿನಿಂದ ಕರುಗಳು ಹದಿನೆಂಟು ತಿಂಗಳಿನಲ್ಲಿ ಬೆದೆಗೆ ಬಂದು ಮೂವತ್ತು ತಿಂಗಳುಗಳ ಒಳಗೆ ಕರು ಹಾಕಲು ಸಹಾಯಕವಾಗುತ್ತದೆ. ಹಾಗೂ ಕರುಗಳಿಗೆ ಪೋಷಕಾಂಶಗಳು ಕಡಿಮೆಯಾಗಿ ಆಗುವ ಮರಣವನ್ನು ಕಡಿಮೆ ಮಾಡಲು ಸಹಾಯಕವಾಗುತ್ತದೆ.

ಈ ಪದ್ಧತಿಯ ನ್ಯೂನತೆಗಳೆಂದರೆ ಪಂಚಾಯತಿನ ಎಲ್ಲಾ ಮಿಶ್ರ ತಳಿ ಕರುಗಳಿಗೆ ಈ ಸಹಾಯ ಲಭಿಸುತ್ತಿಲ್ಲ. ಆದುದರಿಂದ ಎಲ್ಲಾ ಮಿಶ್ರತಳಿ ಕರುಗಳಿಗೆ ಈ ಸಹಾಯ ಲಭಿಸುವಂತೆ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಪಶು ಆಹಾರದ ಬೆಲೆ ಏರಿದಂತೆ ಸಬ್ಸಿಡಿಯನ್ನು ಏರಿಸುವುದಿಲ್ಲ. ಆದುದರಿಂದ ಪಶು ಆಹಾರದ ಬೆಲೆ ಏರಿಕೆಗೆ ಅನುಗುಣವಾಗಿ ಸಬ್ಸಿಡಿಯಲ್ಲಿಯೂ ಏರಿಕೆಯಾಗಬೇಕು. ಎಲ್ಲಾ ಸಮಯದಲ್ಲಿಯೂ ಶೇಕಡಾ 50ರಷ್ಟು ಸಬ್ಸಿಡಿ ಸಿಗುವಂತೆ ಮಾಡಬೇಕು.

### 2. ಮೊಟ್ಟೆ ಕೋಳಿ ವಿತರಣಾ ಪದ್ಧತಿ :

ಈ ಪದ್ಧತಿಯ ಪ್ರಕಾರ ಹೆಚ್ಚು ಮೊಟ್ಟೆ ಇಡುವ ಕೋಳಿಗಳನ್ನು ಎಲ್ಲಾ ರೋಗ ಪ್ರತಿರೋಧಕ ಚುಚ್ಚು ಮದ್ದು ಕೊಟ್ಟ ನಂತರ ಶೇಕಡಾ 30 ರ ಸಬ್ಸಿಡಿ ದರದಲ್ಲಿ ವಿತರಿಸಲಾಗುತ್ತಿದೆ. ಈ ಪದ್ಧತಿಯಲ್ಲಿ ಎಲ್ಲಾ ಕೃಷಿಕರಿಗೂ ಕೋಳಿಗಳನ್ನು ವಿತರಿಸಲಾಗುತ್ತಿಲ್ಲ. ಹಾಗೂ ಎರಡು ತಿಂಗಳಿನವರೆಗೆ ಕೋಳಿ ಮರಿಗಳನ್ನು ಬೆಳೆಸಲು ಸಾಕಷ್ಟು ನರ್ಸರಿಗಳು ಇಲ್ಲ. ಆದುದರಿಂದ ಬೇಕಾದಷ್ಟು ಕೋಳಿಗಳನ್ನು ವಿತರಿಸಲು ಸಾಧ್ಯವಾಗುತ್ತಿಲ್ಲ.

### 3. ಆಡು ಸಾಕಣೆ ಪದ್ಧತಿ :

ಆಡುಗಳನ್ನು ವಿತರಿಸಲು ಸ್ಕೀಮುಗಳು ಇದ್ದರೂ ಎಲ್ಲಾ ವಿಭಾಗದ ಜನರಿಗೆ ಇದರ ಪ್ರಯೋಜನ ಸಿಗುತ್ತಿಲ್ಲ. ಏಕೆಂದರೆ, ಕೇವಲ ಒಂದು ಅಥವಾ ಎರಡು ಯುನಿಟುಗಳನ್ನು ಒಂದು ಪಂಚಾಯತಿನಲ್ಲಿ ಕೊಡುವುದರಿಂದ ಸಾಕಷ್ಟು ಜನರಿಗೆ ಇದರ ಪ್ರಯೋಜನ ಲಭಿಸುತ್ತಿಲ್ಲ. ಅತೀ ಹೆಚ್ಚು ಉತ್ಪಾದನಾ ಸಾಮರ್ಥ್ಯವಿರುವ ಮಲಬಾರೀ ಆಡುಗಳ ಕೊರತೆ ಸಹ ಒಂದು ಕಾರಣವಾಗಿದೆ.

### 4. ಹುಚ್ಚು ನಾಯಿ ರೋಗ ನಿಯಂತ್ರಣಾ ಪದ್ಧತಿ :

ಈ ಪದ್ಧತಿ ಪ್ರಕಾರ ಕೇವಲ 100 ನಾಯಿಗಳಿಗೆ ಬೇಕಾದಷ್ಟು ಚುಚ್ಚು ಮದ್ದು ಶೇಕಡಾ 50 ಸಬ್ಸಿಡಿ ದರದಲ್ಲಿ ಬಂದಿರುತ್ತದೆ. ಆದರೆ 3000ದಷ್ಟು ಸಾಕು ನಾಯಿಗಳು ಈ ಪಂಚಾಯತಿನಲ್ಲಿವೆ. ಕಳೆದ ವರ್ಷ ಪಂಚಾಯತಿನಲ್ಲಿ ನಾಯಿಗಳಿಗೆ ಚುಚ್ಚು ಮದ್ದು ಕೊಡುವ ವ್ಯವಸ್ಥೆ ಮಾಡಲಾಗಿದೆ. ಆದರೆ, ಚುಚ್ಚು ಮದ್ದಿಗೆ ಹೆಚ್ಚಿನ ಹಣ ಖರ್ಚಾಗುವುದರಿಂದ ಜನರು ತಮ್ಮ ನಾಯಿಗಳಿಗೆ ಚುಚ್ಚು ಮದ್ದು ಕೊಡಿಸಲು ಹಿಂಜರಿಯುತ್ತಿದ್ದಾರೆ. ಆದ್ದರಿಂದ ಪಂಚಾಯತಿನಲ್ಲಿರುವ ಎಲ್ಲಾ ಸಾಕು ನಾಯಿಗಳಿಗೂ ಉಚಿತವಾಗಿ ಚುಚ್ಚು ಮದ್ದು ಕೊಡಿಸುವ ಏರ್ಪಾಡು ಮಾಡಬೇಕು. ಇದುವರೆಗೆ ಚುಚ್ಚು ಮದ್ದು ಕೊಡಿಸಿದ ನಾಯಿಗಳಿಗೆ ಲೆಸನ್ಸ್ ನೀಡುವ ಏರ್ಪಾಡು ಈ ಪಂಚಾಯತಿನಲ್ಲಿ ಇಲ್ಲದಿರುವುದರಿಂದ ಎಲ್ಲಾ ಸಾಕುನಾಯಿಗಳಿಗೂ ಲೈಸನ್ಸ್‌ನ್ನು ಕಡ್ಡಾಯವಾಗಿ ಮಾಡಬೇಕು.

### 5. ರೋಗ ನಿಯಂತ್ರಣ ಪದ್ಧತಿ :

ಈ ಪದ್ಧತಿ ಪ್ರಕಾರ ಈ ಪಂಚಾಯತಿನಲ್ಲಿ ಸಾಂಕ್ರಾಮಿಕ ರೋಗಗಳಿಗೆ ಚುಚ್ಚು ಮದ್ದು ಕೊಡಿಸಲಾಗುವುದು. ರೆಫ್ರಿಜರೇಟರ್ ಇಲ್ಲದ ಕಾರಣ ಸಾಕಷ್ಟು ಚುಚ್ಚು ಮದ್ದು ಶೇಖರಿಸಿ ಇಡಲು ಸಾಧ್ಯವಾಗುತ್ತಿಲ್ಲ. ಆಸ್ಪತ್ರೆಯಲ್ಲಿ ಸಹಾಯಕ ಉದ್ಯೋಗಸ್ಥರ ಕೊರತೆ ಹಾಗೂ ವಾಹನ ಸೌಕರ್ಯದ ಅಭಾವದಿಂದಾಗಿ ಪಂಚಾಯತಿನ ಎಲ್ಲಾ ಸ್ಥಳಗಳಿಗೂ ಹೋಗಿ ಚುಚ್ಚು ಮದ್ದು ನೀಡಲು ಆಗುತ್ತಿಲ್ಲ.

## 6. ಪ್ರತ್ಯೇಕ ಘಟಕ ಪದ್ಧತಿ ಹಾಗೂ ಗಿರಿಜನ ಸಬ್ ಪದ್ಧತಿ :
## (Special Component plan and Tribal Sub plan)

ಈ ಪದ್ಧತಿ ಪ್ರಕಾರ ಹರಿಜನ ಗಿರಿಜನ ಕಾಲನಿ ನಿವಾಸಿಗಳ ಜೀವನ ಮಟ್ಟ ಸುಧಾರಿಸಲು ಆಡು, ಕೋಳಿ ಮತ್ತು ದನಗಳನ್ನು ವಿತರಿಸಲಾಗುತ್ತಿದೆ. ಈ ಪದ್ಧತಿ ಜಾರಿಗೊಳಿಸುವಾಗ ಇದರ ಪ್ರಯೋಜನ ಪಡೆಯುವ ಕುಟುಂಬದ ಅಭಿರುಚಿ ಹಾಗೂ ಆರ್ಥಿಕ ನೆಲೆಯನ್ನು ಗಣನೆಗೆ ತೆಗೆದು ಕೊಳ್ಳಬೇಕು. ಹಾಗೂ ದನಗಳನ್ನು ವಿತರಿಸುವಾಗ ಪಶು ಆಹಾರವನ್ನೂ ಉಚಿತವಾಗಿ ವಿತರಿಸಬೇಕು.

**ಕೃಷಿ :**

**1.** ***ಭತ್ತದ ಕೃಷಿ :***

i) ಉತ್ಪಾದನಾ ಬೋನಸ್ ಆಗಿ ಹೆಕ್ಟಾರ್‌ಗೆ ರೂ.250/- ಕೊಡಲ್ಪಡುತ್ತಿದೆ.

ii) ಉತ್ತಮ ತಳಿ ಭತ್ತದ ಬೀಜ ವಿತರಿಸಲ್ಪಡುತ್ತಿದೆ

iii) ಗ್ರೂಪ್ ಫಾರ್ಮಿಂಗ್ ನಡೆಸುವ ಸಮಿತಿಗಳಿಗೆ ಟಿಲ್ಲರ್ ಸಬ್ಸಿಡಿ ದರದಲ್ಲಿ ಕೊಡಲ್ಪಡುತ್ತಿದೆ.

**ವಿಕಸನ ಯೋಜನೆಗಳು :**

i) ಹೆಕ್ಟಾರಿಗೆ ರೂ. 1,000/- ನ್ನು ಬೋನಸಾಗಿ ಕೊಡಬೇಕು.

ii) ಅತ್ಯುತ್ಪಾದನಾ ಬೀಜದೊಂದಿಗೆ ಒಳ್ಳೆಯ ತಳಿಯ ಊರ ಬೀಜಗಳನ್ನೂ ವಿತರಿಸಬೇಕು.

iii) ಕೀಟನಾಶಕ, ರಾಸಾಯನಿಕ ಗೊಬ್ಬರ, ಸುಣ್ಣ ಮುಂತಾದವುಗಳನ್ನು ಸಬ್ಸಿಡಿ ದರದಲ್ಲಿ ವಿತರಿಸಬೇಕು.

iv) ಗ್ರೂಪ್ ಫಾರ್ಮಿಂಗ್‌ನ್ನು ಪ್ರೋತ್ಸಾಹಿಸಬೇಕು.

v) ಗದ್ದೆಗಳನ್ನು ಬೇರೆ ಅವಶ್ಯಕತೆಗಳಿಗೆ ಉಪಯೋಗಿಸುವುದನ್ನು ತಡೆಗಟ್ಟಬೇಕು.

**2.** ***ತೆಂಗು ಕೃಷಿ (C.C.D.P) :***

i) ಬಾವಿ ನಿರ್ಮಾಣಕ್ಕೆ ಹಾಗೂ ಪಂಪುಸೆಟ್ಟುಗಳಿಗೆ ಸಬ್ಸಿಡು ಕೊಡಲ್ಪಡುತ್ತಿದೆ. ರೂ. 750/-ಕ್ಕಿಂತ ಕಡಿಮೆ ಖರ್ಚಾದರೆ ಖರ್ಚಾದ ಹಣದ 1/3 ಭಾಗದಷ್ಟು ಹಾಗೂ ರೂ. 750/-ಕ್ಕಿಂತ ಹೆಚ್ಚು ಖರ್ಚಾದರೆ, ರೂ. 2,500/-ರಷ್ಟು ಹಣವನ್ನು ಸಬ್ಸಿಡಿ ರೂಪದಲ್ಲಿ ಕೊಡಲಾಗುತ್ತದೆ.

ii) ತೆಂಗಿನ ಮರ ಹತ್ತುವ ಯಂತ್ರ ಹಾಗೂ ಸ್ಪ್ರೇಯರ್‌ಗಳನ್ನು ವಿತರಿಸಲಾಗುತ್ತಿದೆ.

iii) ಹನಿ ನೀರಾವರಿಗೆ ಸಬ್ಸಿಡಿ ಕೊಡಲಾಗುತ್ತಿದೆ.

iv) ತೆಂಗಿನ ಸಸಿಗಳನ್ನು ವಿತರಿಸಲಾಗುತ್ತದೆ.

**ವಿಕಸನ ಯೋಜನೆಗಳು :**

i) ಸಬ್ಸಿಡಿ ಹಣವನ್ನು ಒಟ್ಟು ಖರ್ಚಿನ 1/3 ಭಾಗದಷ್ಟಾಗಿ ಮಾರ್ಪಡಿಸಬೇಕು.

ii) ಉತ್ಪಾದನಾ ಸಾಮರ್ಥ್ಯವಿರುವ ಊರ ತಳಿಯ ತೆಂಗಿನ ಗಿಡಗಳನ್ನು ವಿತರಿಸಬೇಕು.

iii) ತೆಂಗಿನ ತೋಟಗಳಿಗೆ ಮಣ್ಣು ಹಿಡಿಸುವ ಪದ್ಧತಿಗಳನ್ನು ರೂಪೀಕರಿಸಬೇಕು.

**3.** ***ಅಡಿಕೆ ಕೃಷಿ :***

i) ಮಹಾಳಿ ರೋಗವನ್ನು ನಿಯಂತ್ರಿಸಲು ವಿತರಿಸುವ ಮೈಲುತುತ್ತಿಗೆ ಹೆಕ್ಟಾರಿಗೆ ರೂ. 400/- ಸಬ್ಸಿಡಿ ಕೊಡಲಾಗುವುದು.

ii) ಮದ್ದು ಸಿಂಪಡಿಸಲು ಸ್ಪ್ರೇಯರನ್ನು ವಿತರಿಸಲಾಗುವುದು.

**ವಿಕಸನ ಯೋಜನೆಗಳು :**

i) ಮೈಲು ತುತ್ತಿನ ಸಬ್ಸಿಡಿ ದರವನ್ನು ಶೇಕಡಾ 50ರಷ್ಟಾಗಿ ಹೆಚ್ಚಿಸಬೇಕು.

ii) ಪ್ರತಿ ವರ್ಷ ಕನಿಷ್ಟ 25ಸ್ಪ್ರೇಯರ್‌ಗಳನ್ನು ವಿತರಿಸುವ ವ್ಯವಸ್ಥೆ ಇರಬೇಕು.

iii) ಅಡಿಕೆ ತೋಟಗಳಿಗೆ ಮಣ್ಣು ಹಿಡಿಸುವ ಪದ್ಧತಿಗೆ ಸಬ್ಸಿಡಿ ಕೊಡಬೇಕು.

**4. *ಕಾಳು ಮೆಣಸು:***

i) ಕಾಳುಮೆಣಸಿನ ಬಳ್ಳಿಗಳು ಹಳದಿ ರೋಗದಿಂದ ನಾಶ ಹೊಂದುವುದಕ್ಕೆ ಬೇಕಾದ ಮದ್ದನ್ನು ಉಚಿತವಾಗಿ ವಿತರಿಸಲಾಗುತ್ತಿದೆ.

ii) ಹಳೆಯ ತೋಟಗಳನ್ನು ಪುನಃ ಉತ್ಪಾದನಾ ಯೋಗ್ಯವನ್ನಾಗಿ ಮಾಡಲು ಸಹಾಯಧನ ಕೊಡಲಾಗುತ್ತದೆ.

iii) ಕಾಳುಮೆಣಸಿನ ಬಳ್ಳಿಗಳನ್ನು ಉಚಿತವಾಗಿ ವಿತರಿಸಲಾಗುತ್ತದೆ.

iv) ಸ್ಪ್ರೇಯರ್‌ಗಳನ್ನು ವಿತರಿಸಲಾಗುತ್ತಿದೆ.

**ವಿಕಸನ ಯೋಜನೆಗಳು :**

i) ಶೀಘ್ರ ಸೊರಗು (ಹಳದಿ ರೋಗ) ರೋಗಕ್ಕೆ ತುತ್ತಾಗದ ಉತ್ತಮ ಊರ ತಳಿಯ ಬಳ್ಳಿಗಳನ್ನು ವಿತರಿಸಬೇಕು.

ii) ಪುನರುಜ್ಜೀವನ ಪದ್ಧತಿಯ ಸಬ್ಸಿಡಿಯನ್ನು ಮೊದಲಿನ ವರ್ಷದಷ್ಟೆ ಮುಂದುವರಿಸಿ ಕೊಡಬೇಕು.

iii) ಕಾಳು ಮೆಣಸು ಕೃಷಿಕರಿಗೆ ಸ್ಪ್ರೇಯರುಗಳನ್ನು ಉಚಿತವಾಗಿ ವಿತರಿಸಬೇಕು.

**5. *ಗೇರು ಕೃಷಿ :***

i) ಗೇರು ಸಸಿಗಳನ್ನು ವಿತರಿಸಲಾಗುತ್ತಿದೆ

ii) ಈಗ ಇರುವ ತೋಟಗಳನ್ನು ಪುನರುಜ್ಜೀವನಗೊಳಿಸಲು ಸಹಾಯಧನ ಕೊಡಲ್ಪಡುತ್ತದೆ.

iii) ಕೀಟಾಣುಗಳಿಂದ ಬರುವ ರೋಗ (ತೇಯಿಲ ಕೊದುಗು)ಗಳ ವಿರುದ್ಧ ಸಿಂಪಡಿಸುವ ಮದ್ದನ್ನು ಸಬ್ಸಿಡಿ ದರದಲ್ಲಿ ವಿತರಿಸಲಾಗುತ್ತದೆ.

**ವಿಕಸನ ಯೋಜನೆಗಳು :**

i) ಧಾರಾಳವಾಗಿ ಖಾಲಿ ಸ್ಥಳವಿರುವ ಈ ಪಂಚಾಯತಿನಲ್ಲಿ ಗೇರು ಕೃಷಿ ಮಾಡಲು ಪ್ರೋತ್ಸಾಹ ಕೊಡುವುದು. ಪ್ರತಿ ವರ್ಷ 75 ಹೆಕ್ಟಾರಿಗೆ ಬೇಕಾಗುವಷ್ಟು ಸಸಿಗಳನ್ನು ಉಚಿತವಾಗಿ ಒದಗಿಸುವುದು.

ii) ಪುನರುಜ್ಜೀವನ ಪದ್ಧತಿಯನ್ನು ವ್ಯಾಪಕವಾಗಿ ನಡೆಸಬೇಕು.

iii) ಕೀಟನಾಶಕಗಳ ಸಬ್ಸಿಡಿದರ ಶೇಕಡಾ 75ರಷ್ಟು ಏರಿಸಬೇಕು.

**6. *ಹಣ್ಣು ಹಂಪಲು ಕೃಷಿ :***

i) Nutrition Garderning ಪದ್ಧತಿಯಲ್ಲಿ ಹಣ್ಣು ಹಂಪಲು ಗಿಡಗಳನ್ನು ವಿತರಿಸಲಾಗುತ್ತಿದೆ.

**ವಿಕಸನ ಯೋಜನೆ :**

i) ಈ ಪಂಚಾಯತಿನಲ್ಲಿರುವ ಖಾಲಿ ಸ್ಥಳಗಳಲ್ಲಿ ನೆಡಲು ಕನಿಷ್ಠ ಪಕ್ಷ ಪ್ರತಿ ವರ್ಷ 500 ಕಿಟ್‌ಗಳನ್ನು (ಹಣ್ಣು ಹಂಪಲುಗಳ ಸಸಿಗಳು) ವಿತರಿಸಬೇಕು.

**7. *ಬಾಳೆ ಕೃಷಿ :***

ನೇಂದ್ರ ಬಾಳೆ ಕೃಷಿಗೆ ಮಾತ್ರ ಸಾಲ, ಸಬ್ಸಿಡಿ, ಪರಿಹಾರಗಳು ದೊರೆಯುತ್ತದೆ.

ವಿಕಸನ ಯೋಜನೆ :

i) ಹೂಬಾಳೆ, ಮೈಸೂರು, ಕದಳಿ ಇತ್ಯಾದಿ ಬಾಳೆಗಳಿಗೂ ನೇಂದ್ರ ಬಾಳೆಗೆ ಸಿಗುವ ಅನುಕೂಲತೆಗಳು ಸಿಗಬೇಕು.

ii) ಮಾದರಿ ಬಾಳೆತೋಟಗಳ ನಿರ್ಮಾಣ.

iii) ಉತ್ತಮ ತಳಿಯ ಬಾಳೆ ಗಿಡಗಳನ್ನು ವಿತರಿಸಬೇಕು.

## 8. *ಮರಗೆಣಸು ಕೃಷಿ :*

ಉತ್ತಮ ತಳಿಯ ಮರಗೆಣಸು ಕಾಂಡಗಳನ್ನು ವಿತರಿಸಬೇಕು.

## 9. *ದ್ವಿದಳ ಧಾನ್ಯಗಳು :*

i) ದ್ವಿದಳ ಧಾನ್ಯಗಳು ಸಬ್ಸಿಡಿ ದರದಲ್ಲಿ ವಿತರಿಸಲ್ಪಡುತ್ತವೆ.

ii) ಮಿನಿಕಿಟ್ ಪದ್ಧತಿಯಲ್ಲಿ ಧಾನ್ಯಗಳ ವಿತರಣೆ.

ವಿಕಸನ ಯೋಜನೆಗಳು :

i) ಭತ್ತದ ಕೃಷಿಗೆ ಕೊಡಲಾಗುವ ಉತ್ಪಾದನಾ ಬೋನಸ್ಸನ್ನು ದ್ವಿದಳ ಧಾನ್ಯಗಳ ಕೃಷಿಗೂ ನೀಡಬೇಕು.

ii) ಸುಣ್ಣ ಯಾ ಕುಮ್ಮಾಯಗಳನ್ನು ಸಬ್ಸಿಡಿ ದರದಲ್ಲಿ ವಿತರಿಸಬೇಕು

iii) ಅಗತ್ಯವಿರುವ ಬೀಜಗಳನ್ನು ಸಬ್ಸಿಡಿ ದರದಲ್ಲಿ ನೀಡಬೇಕು.

## 10. *ತರಕಾರಿ ಕೃಷಿ :*

i) ಶಾಲಾ ವಿದ್ಯಾರ್ಥಿಗಳಿಗೆ ತರಕಾರಿ ಬೀಜಗಳನ್ನು ವಿತರಿಸಲಾಗುತ್ತಿದೆ.

ii) ಈ ಪಂಚಾಯತಿನಲ್ಲಿ ಎರಡು ಹೈಸ್ಕೂಲು ಹಾಗೂ 7 ಯು.ಪಿ ಶಾಲೆಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಈ ಬೀಜಗಳನ್ನು ಕೊಡಲಾಗುತ್ತಿದೆ.

ವಿಕಸನ ಯೋಜನೆ :

i) ಪ್ರತಿ ವರ್ಷ ಕನಿಷ್ಠ 2,500 ವಿದ್ಯಾರ್ಥಿಗಳಿಗಾದರೂ ತರಕಾರಿ ಬೀಜಗಳನ್ನು ವಿತರಿಸಬೇಕು.

ii) ಈ ಪಂಚಾಯತಿನಲ್ಲಿ ಧಾರಾಳವಾಗಿ ತರಕಾರಿಗಳು ಆಮದಾಗುವುದರಿಂದ ತರಕಾರಿ ಕೃಷಿಗೆ ಉತ್ತಮ ಭವಿಷ್ಯವಿದೆ. ಆದುದರಿಂದ ಈ ಪಂಚಾಯತಿನಲ್ಲಿ ತರಕಾರಿ ಕೃಷಿಗೆ ಸಮಗ್ರ ಪದ್ಧತಿಯನ್ನು ತಯಾರಿಸಬೇಕಾಗಿದೆ.

## 11. *ಶುಂಠಿ ಮತ್ತು ಅರಶಿನ :*

ಶುಂಠಿ ಮತ್ತು ಅರಶಿನ ಮಾದರಿ ತೋಟವಾಗಿ 5 ಕಳಗಳು ಇವೆ.

ವಿಕಸನ ಯೋಜನೆ : ಈ ಕೃಷಿಗೆ ಇನ್ನೂ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿ ಪ್ರೋತ್ಸಾಹಿಸಬೇಕು.

## 12. *ವೀಳ್ಯದೆಲೆ :*

ಕೆಲವು ಕಡೆಗಳಲ್ಲಿ ಈ ಕೃಷಿಯು ಅಲ್ಪ ಪ್ರಮಾಣದಲ್ಲಿ ಅಸ್ತಿತ್ವದಲ್ಲಿದೆ.

ವಿಕಸನ ಯೋಜನೆ :

i) ಇನ್ನೂ ಹೆಚ್ಚಿನ ಸ್ಥಳಗಳಲ್ಲಿ ವೀಳ್ಯದೆಲೆ ಕೃಷಿ ಮಾಡುವಂತೆ ಪ್ರೋತ್ಸಾಹಿಸಬೇಕು.

ii) ಗೊಬ್ಬರ ಸಬ್ಸಿಡಿ ಇತ್ಯಾದಿಗಳನ್ನು ನೀಡಬೇಕು.

## 13. *ಕೊಕ್ಕೊ ಕೃಷಿ :*

ಇದರ ವಿಕಸನ ಸಾಧ್ಯತೆ ಕಡಿಮೆ. ಕೃಷಿಕರಿಗೆ ಇದರಲ್ಲಿ ಹೆಚ್ಚಿನ ಆಸಕ್ತಿ ಇಲ್ಲ.

**ವಿಕಸನ ಯೋಜನೆಗಳು :**

i) ಕೊಕ್ಕೊ ಕೃಷಿಯನ್ನು ಪ್ರೋತ್ಸಾಹಿಸಬೇಕು.

ii) ಗೊಬ್ಬರ, ಸಬ್ಸಿಡಿ ನೀಡಬೇಕು.

iii) ಉತ್ತಮ ಗಿಡಗಳನ್ನು ವಿತರಿಸಬೇಕು.

**ಸಾಮಾನ್ಯ ನಿರ್ದೇಶನಗಳು :**

i) ಯೂತ್ ಪದ್ಧತಿ ಕಾರ್ಯಕ್ರಮದಿಂದ ಯುವ ಕೃಷಿಕರನ್ನು ಆಯ್ದು ತರಕಾರಿ ಅಂಗಡಿಯನ್ನು ತೆರೆಯಲು ಎಲ್ಲಾ ವಿಧ ಸಹಾಯ ನೀಡಬೇಕು.

ii) ಎಲ್ಲಾ ಕೃಷಿ ಉತ್ಪನ್ನಗಳ ಮಾರಾಟಕ್ಕೆ ಸರಿಯಾದ ಸ್ಥಳ ಹಾಗೂ ಕಟ್ಟಡ ಸೌಕರ್ಯವನ್ನು ನೀಡಬೇಕು.

iii) ಯೂತ್ ಕಾರ್ಯಕ್ರಮ ಪದ್ಧತಿಯಲ್ಲಿ ಯುವ ಜನರಿಗೆ ಆಸಕ್ತಿ ಇರುವ ಕೃಷಿಯನ್ನು ಮಾಡಲು ಧನ ಸಹಾಯ ನೀಡಬೇಕು.

## ಗ್ರಾಮ ವಿಕಸನ :

**I ) I.R.D.P :** ಪ್ರತಿ ವರ್ಷ 50 ಕುಟುಂಬಕ್ಕೆ ಧನ ಸಹಾಯವೂ, ಸಾಲ ಸೌಲಭ್ಯವನ್ನೂ ಕೊಡಲಾಗುತ್ತದೆ. ಪರಿಶಿಷ್ಟ ಜಾತಿ, ವರ್ಗ ಕುಟುಂಬಗಳಿಗೆ ರೂ. 6,000/- ಮತ್ತು ಇತರ ಕುಟುಂಬಗಳಿಗೆ ರೂ. 4,000/- ಧನ ಸಹಾಯ ಕೊಡಲಾಗುತ್ತಿದೆ.

**ವಿಕಸನ ಯೋಜನೆಗಳು :**

i) ಈ ಪದ್ಧತಿಯಲ್ಲಿ ಇತರ ಕುಟುಂಬಗಳಿಗೆ ನೀಡುವ ಧನ ಸಹಾಯವನ್ನು ರೂ. 5,000/-ಕ್ಕೆ ಹೆಚ್ಚಿಸಬೇಕು.

ii) ಬೇಂಕ್ ಬಡ್ಡಿ ದರವನ್ನು ಸೇಕಡಾ 10 ಎಂದು ನಿಗದಿ ಪಡಿಸಬೇಕು.

iii) ಈ ಪ್ರದೇಶವು ಹೆಚ್ಚಾಗಿ ಕೆಂಪು ಕಲ್ಲುಗಳಿಂದ ಆವೃತವಾಗಿರುವುದರಿಂದ ಬಾವಿ ತೋಡಲು ಇರುವ ಯೂನಿಟ್ ಖರ್ಚನ್ನು ರೂ. 20,000/-ಕ್ಕೆ ಹೆಚ್ಚಿಸಬೇಕು.

**II)** ***SF/MF ಸ್ಕೀಮ್:*** i) ಸಣ್ಣ ಹಾಗೂ ಪರಿಮಿತ ಕೃಷಿಕರಿಗೆ ಇದ್ದಂತಹ ಯೋಜನೆಗಳು 1992ರಿಂದ ನಿಲ್ಲಿಸಲ್ಪಟ್ಟಿವೆ.

ii) ಪಂಚಾಯತಿನಲ್ಲಿರುವ ಹೆಚ್ಚಿನ ಜನರು ಕೃಷಿಕರಾದ್ದರಿಂದ ಈ ಯೋಜನೆಯನ್ನು ಪುನಃ ಪ್ರಾರಂಭಿಸಬೇಕಾಗಿದೆ.

**III)** ***TRYSEM :*** IRDP ಸರ್ವೆ ಪ್ರಕಾರ 18-30 ಪ್ರಾಯದವರರೆಗಿನ ಯುವಕ ಯುವತಿಯರಿಗೆ ಯಾವುದಾದರೊಂದು ವಿಭಾಗದಲ್ಲಿ ತರಬೇತಿ ನೀಡಿ ಸ್ವಂತ ಉದ್ಯೋಗವನ್ನು ಪ್ರಾರಂಭಿಸಲು ಸಹಾಯ ಮಾಡುವ ಯೋಜನೆಯನ್ನು ತಯಾರಿಸಬೇಕು. ಈಗ ವೆಲ್ಡಿಂಗ್, ನೇಯುವುದು, ಇಲೆಕ್ಟ್ರಿಷಿಯನ್, ಮುದ್ರಣ, ಎಂಬ್ರೊಯಿಡರಿ ಮುಂತಾದ ವಿಷಯಗಳಲ್ಲಿ ತರಬೇತಿ ನೀಡಲಾಗುತ್ತದೆ. ತರಬೇತಿ ಹೊಂದಿದವರಿಗೆ ರೂ. 350/- ಸ್ಟೈಪೆಂಡ್ ನೀಡಲಾಗುತ್ತದೆ.

***IV) Housing Scheme :***

IAY, JRY, ಪದ್ಧತಿಗಳ ಪ್ರಕಾರ ಈಗ ಮನೆ ಕಟ್ಟಲು ರೂ. 22,000/-ಧನ ಸಹಾಯ ಕೊಡಲಾಗುತ್ತದೆ.

**V)** **CRSP ಶೌಚಾಲಯಗಳು :** ಶೇಕಡಾ 75 ಮನೆಗಳಲ್ಲಿ ಶೌಚಾಲಯಗಳು ಇಲ್ಲದಿರುವುದರಿಂದ ಪರಿಸರ ಮಲಿನೀಕರಣ ಮತ್ತು ಅನಾರೋಗ್ಯ ಹೆಚ್ಚುತ್ತಿವೆ. ಆದುದರಿಂದ ಎಲ್ಲಾ ಮನೆಗಳಲ್ಲಿಯೂ ಶೌಚಾಲಯಗಳನ್ನು ನಿರ್ಮಿಸಲು ಧನಸಹಾಯ ನೀಡಬೇಕು.

**VI )** **ವೃದ್ಧಾಪ್ಯ ವೇತನ :** ಈ ಯೋಜನೆಯ ವರಮಾನನ ಮಿತಿಯನ್ನು ರೂ. 11,000/-ಗಳಿಗೆ ಹೆಚ್ಚಿಸಬೇಕು.

***VII VEO ಕಛೇರಿ :*** ತಿಂಗಳಿಗೆ ರೂ. 50/- ಬಾಡಿಗೆಯ ಯಾವ ಸೌಕರ್ಯವೂ ಇಲ್ಲದ ಬಾಡಿಗೆ ಕಟ್ಟಡದಲ್ಲಿ VEO ಆಫೀಸು ಕಾರ್ಯವೆಸಗುತ್ತದೆ. ಆದುದರಿಂದ VEO ಆಫೀಸನ್ನು ಎಲ್ಲಾ ಸೌಕರ್ಯಗಳೂ ಇರುವ ಕಟ್ಟಡಕ್ಕೆ ವರ್ಗಾಯಿಸಬೇಕು. ಮತ್ತು ಕ್ವಾರ್ಟರ್ಸ್‌ಗಳನ್ನು ನಿರ್ಮಿಸಬೇಕು.

## 6. ಕೃಷಿ ಮತ್ತು ನೀರಾವರಿ

ಕುಂಬಳೆ ಸೀಮೆಯಲ್ಲಿ ಬದಿಯಡ್ಕ ಪಂಚಾಯತ್ ಪ್ರದೇಶವು ತನ್ನದೇ ಆದ ವೈಶಿಷ್ಟ್ಯದಿಂದ ಕೂಡಿದೆ. ಬಹಳ ಹಿಂದಿನ ಕಾಲದಿಂದಲೇ ಈ ಪ್ರದೇಶಕ್ಕೆ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯಿದೆ. ಪ್ರಗತಿಶೀಲ ಕೃಷಿಕರನ್ನೂ ಫಲವತ್ತಾದ ಭೂ ಪ್ರದೇಶವನ್ನೂ ಈ ಕ್ಷೇತ್ರವು ಹೊಂದಿದೆ.

**ಪ್ರಧಾನ ಬೆಳೆಗಳು :** ಭತ್ತ, ಅಡಿಕೆ, ತೆಂಗು, ಬಾಳೆ, ಮರಗೆಣಸು, ತರಕಾರಿ, ಕರಿಮೆಣಸು, ಗೇರು, ಮಾವು, ರಬ್ಬರ್ ಮೊದಲಾದ ಬೆಳೆಗಳು ಇಲ್ಲಿ ಧಾರಾಳ ಬೆಳೆಯುತ್ತದೆ. ಈ ಪ್ರದೇಶವನ್ನು ಭೂ ಸ್ವಭಾವಕ್ಕನುಗುಣವಾಗಿ ನಂಜ, ಕುಂಜ ಮತ್ತು ಭಾಗಾಯಿತು ಎಂದು ವರ್ಗೀಕರಿಸಲಾಗಿದೆ. ನೀರಾವರಿ ಸೌಕರ್ಯಕ್ಕನುಸರಿಸಿ ನಂಜ ವಿಭಾಗದಲ್ಲಿ ಎರಡು ಅಥವಾ ಮೂರು ಭತ್ತದ ಬೆಳೆಯನ್ನು ಮಾಡಲಾಗುವುದು. ಭತ್ತದ ಕೃಷಿಯಲ್ಲಿ ಪ್ರಧಾನವಾಗಿ ಕಯಮೆ, ಜ್ಯೋತಿ, ಕಲ್ಚರ್, ತವಳ ಕಣ್ಣ, ತೆಕ್ಕೆ ಸವ್ವ, ಕುಟ್ಟಿಪುಂಜ, ಐ. ಆರ್. ಎಂಟು, ಗಂಧಸಾಲೆ, ತೊನ್ನೂರು ಮೊದಲಾದ ತಳಿಗಳನ್ನು ಇಲ್ಲಿ ಬೆಳೆಯಲಾಗುತ್ತದೆ. ಈ ಪ್ರದೇಶದಲ್ಲಿ ಅಡಿಕೆಯು ಪ್ರಧಾನ ಆರ್ಥಿಕ ಬೆಳೆಯಾಗಿದೆ. ಇದಕ್ಕಾಗಿಯೇ ಮಾರುಕಟ್ಟೆಯ ವ್ಯವಸ್ಥೆಯನ್ನು ಕ್ಯಾಂಪ್ಕೋದ ಮೂಲಕ ಬದಿಯಡ್ಕದಲ್ಲಿ ರೂಪೀಕರಿಸಲಾಗಿದೆ. ತೆಂಗು ಈ ಪ್ರದೇಶದ ಇನ್ನೊಂದು ಪ್ರಧಾನ ಬೆಳೆಯಾಗಿದೆ . ಬಾಳೆಯ ಕೃಷಿಯಲ್ಲಿ ವಿವಿಧ ತಳಿಗಳು ಪ್ರಚಲಿತದಲ್ಲಿದೆ. ಉತ್ತಮ ಬೆಲೆ ಇರುವುದರಿಂದ ಕರಿಮೆಣಸು ಮತ್ತು ಗೇರು ಕೃಷಿಯಲ್ಲಿಯೂ ಪ್ರಗತಿಯನ್ನು ಕಾಣಬಹುದು.

**ಭೂ ಪ್ರಕೃತಿ :** ಈ ಕ್ಷೇತ್ರದ ಭೂ ಪ್ರಕೃತಿಯ ಬಗ್ಗೆ ಹೇಳುವುದಾದರೆ ಸುಮಾರು ಐದನೇ ಎರಡಂಶ (2/5) ಮುರ ಪಾರೆ ಕಲ್ಲಿನಿಂದ ಆವೃತವಾಗಿದೆ. ಉಳಿದ ಐದನೇ ಎರಡು (2/5) ಅಂಶ ಮಣ್ಣಿನಿಂದ ಕೂಡಿದ ಗುಡ್ಡೆ ಪ್ರದೇಶ ಮತ್ತು ಐದನೇ ಒಂದು (1/5) ಅಂಶ ತಗ್ಗು ಪ್ರದೇಶವಾಗಿ ಈ ಪ್ರದೇಶಗಳಲ್ಲಿ ಮಾತ್ರ ಅಡಿಕೆ, ತೆಂಗು, ಭತ್ತ ಮೊದಲಾದ ಬೆಳೆಗಳು ಬೆಳೆಸಲ್ಪಡುತ್ತವೆ.

ಸುಮಾರು 2/5 ಅಂಶ ಗುಡ್ಡ ಪ್ರದೇಶದ ಮಣ್ಣಿನ ಸ್ವಭಾವ ಹರಳು ಮಿಶ್ರಿತ ಕೆಂಪು ಮಣ್ಣು ಆಗಿರುವುದು. ಉಳಿದ ಪ್ರದೇಶಗಳಲ್ಲಿ ಹರಳು ಅಷ್ಟಾಗಿ ಕಂಡು ಬರುವುದಿಲ್ಲ. ಈ ಪ್ರದೇಶಗಳು ಕೃಷಿ ಯೋಗ್ಯವಾದವುಗಳಾಗಿವೆ. ಗುಡ್ಡ ಪ್ರದೇಶವು ವಿವಿಧ ಜಾತಿಯ ಸಸ್ಯಾದಿಗಳಿಂದ ಕೂಡಿರುತ್ತದೆ. ಜೈವಿಕ ಗೊಬ್ಬರ ಮತ್ತು ಇಂಧನಗಳಿಗಾಗಿ ಕೃಷಿಕರು ಈ ಪ್ರದೇಶವನ್ನವ ಲಂಬಿಸಿರುತ್ತಾರೆ. ಉಳಿದ ಒಂದಂಶ ಹುಲ್ಲುಗಾವಲು ಪ್ರದೇಶವಾಗಿರುತ್ತದೆ. ಕೃಷಿ ಯೋಗ್ಯವಾದ ನಂಜ ಭೂಮಿ ಪ್ರದೇಶದಲ್ಲಿ ನೀರಿನ ಅನುಕೂಲತೆ ಧಾರಾಳವಾಗಿರುತ್ತದೆ. ಉಳಿದ ಪ್ರದೇಶಗಳಲ್ಲಿ ನೀರಿನ ಅಭಾವವಿರುತ್ತದೆ.

**ಅಡಿಕೆ ಕೃಷಿ :** ಈ ಪಂಚಾಯತಿನ ನಾಣ್ಯ ಬೆಳೆಗಳಲ್ಲಿ ಪ್ರಧಾನ ಕೃಷಿ ಅಡಿಕೆ ಬೆಳೆಯಾಗಿದ್ದು ಜನರು ಅದನ್ನೇ ಅವಲಂಬಿಸಿ ಜೀವಿಸುತ್ತಾರೆ. ಕಾರ್ಮಿಕರ ಅಭಾವದಿಂದಾಗಿ ಭತ್ತದ ಕೃಷಿ ಲಾಭವಲ್ಲದ ಕಾರಣ ಭತ್ತದ ಗದ್ದೆಗಳು ಅಡಿಕೆ ತೋಟಗಳಾಗಿ ಮಾರ್ಪಾಡಾದುವು . ಇನ್ನು ಉಳಿದ ಭತ್ತದ ಗದ್ದೆಗಳು ಕೂಡಾ ಇದೇ ರೀತಿ ಮಾರ್ಪಾಡಾಗುವ ಸಾಧ್ಯತೆ ಇದೆ. ಇತ್ತೀಚೆಗೆ ಅಡಿಕೆ ಬೆಳೆಯಲ್ಲಿ ಹಲವು ರೀತಿಯ ಹೊಸ ತಳಿಯನ್ನು ಸಂಶೋಧಿಸಿ ಅದರ ಮೂಲಕ ಅಧಿಕ ಇಳುವರಿಯನ್ನು ಪಡೆಯಲು ಶ್ರಮಿಸುತ್ತಿದ್ದಾರೆ. ಮಧ್ಯ ಬೆಳೆಗಳಾಗಿ ಬಾಳೆ, ಅನನಾಸು, ಕಾಳು ಮೆಣಸು, ಕೊಕ್ಕೊ, ಲವಂಗ, ಶುಂಠಿ ಮೊದಲಾದವುಗಳನ್ನು ಬೆಳೆಸುವ ಪದ್ಧತಿ ಜಾರಿಯಲ್ಲಿದೆ. ಔಷಧ ಸಿಂಪಡಿಕೆ ಮತ್ತು ಅಡಿಕೆ ಕೊಯ್ಯುವ ಕೆಲಸಗಳನ್ನು ಹೊರತು ಪಡಿಸಿದರೆ ಇದಕ್ಕೆ ಕಾರ್ಮಿಕ ಶ್ರಮ ಕಡಿಮೆಯಾಗಿದೆ. ನೀರಾವರಿಗಾಗಿ ಸ್ಪ್ರಿಂಕ್ಲರ್, ಬಬ್ಲರ್‌ಸ ಡ್ರಿಪ್ ಮೊದಲಾದ ಸೌಕರ್ಯಗಳಿವೆ.

ಅಡಿಕೆಯ ಮಾರುಕಟ್ಟೆಗಾಗಿ ಕೆಲವು ಉತ್ತಮ ಸೌಕರ್ಯಗಳಿವೆ. ಖಾಸಗಿ ವಲಯದ ವ್ಯಕ್ತಿಗಳ ಮೂಲಕ ಮಾರುಕಟ್ಟೆ ವ್ಯವಸ್ಥೆ ಇದ್ದರೂ ಕ್ಯಂಪ್ಕೊ ಸಂಸ್ಥೆಯ ಘಟಕವು ಇಲ್ಲಿ ಉತ್ತಮವಾಗಿ ಕಾರ್ಯವೆಸಗುತ್ತಿದೆ. ಇತ್ತೀಚೆಗೆ ಕೊಳೆರೋಗದ ಹಾಳಾವಳಿಯಿಂದಾಗಿ ಅಡಿಕೆ ಇಳುವರಿ ಕುಂಠಿತವಾಗುತ್ತಿದೆ. ಇದರ ನಿರ್ಮೂಲನಕ್ಕಾಗಿ ಸ್ಥಳೀಯ ಕೃಷಿ ಭವನವು ಸಹಕರಿಸುತ್ತದೆ.

**ತೆಂಗು ಕೃಷಿ :** ಈ ಕ್ಷೇತ್ರದ ಮೂರನೇ ಬೆಳೆಯೆಂದು ಗುರುತಿಸಬಹುದು. ಸಾರ್ವತ್ರಿಕವಾಗಿ ಬೆಳೆಸಬಹುದಾದ ಬೆಳೆಯಾಗಿದ್ದು ಕನಿಷ್ಠ ಎರಡು ತೆಂಗುಗಳನ್ನಾದರೂ ಪ್ರತಿ ಕುಟುಂಬದವರು ಹೊಂದಿರುತ್ತಾರೆ. ಕರಾವಳಿ ಪ್ರದೇಶಕ್ಕಿಂತ ಭಿನ್ನವಾದ

ಕ್ಷೇತ್ರವಾದುದರಿಂದ ಈ ಬೆಳೆಗೆ ನೀರಿನ ಕೊರತೆ ಅಲ್ಲಲ್ಲಿ ಸ್ವಾಭಾವಿಕವಾಗಿರುತ್ತದೆ. ಈಗ ಗುಡ್ಡ ಪ್ರದೇಶಗಳಲ್ಲಿಯೂ ಕೊಳವೆ ಬಾವಿಗಳ ಮೂಲಕ ನೀರನ್ನು ಪಡೆದು ತೆಂಗಿನ ಕೃಷಿಯನ್ನು ಫಲಪ್ರದವನ್ನಾಗಿ ಮಾಡಿರುತ್ತಾರೆ. ಇದರಿಂದಾಆಗಿ ಭೂಮಿಯ ಅಂತರ್ಜಲ ಮಟ್ಟ ಕುಸಿದು ಕೆಲವೆಡೆಗಳಲ್ಲಿ ನೀರಿನ ಕೊರತೆಯು ಕಂಡು ಬರುತ್ತದೆ.

ಸಾಮಾನ್ಯವಾಗಿ ತೆಂಗಿಗೆ ಬಾಧಿಸುವ ರೋಗಗಳೆಂದರೆ ರಕ್ತ ಸೋರುವಿಕೆ ಮತ್ತು ಕೆಂಪು ತಲೆಯ ಹುಳದ ಬಾಧೆ. ಕುರುವಾಯಿ ಹಾವಳಿಯಿಂದಾಗುವ ನಷ್ಟವೂ ಅಪಾರ. ಇದರ ಪರಿಹಾರಕ್ಕೆ ಕೃಷಿ ಭವನವು ಶ್ರಮಿಸುತ್ತಿದೆ.

**ಗೇರು ಬೀಜ :** ಮಣ್ಣಿನ ಗುಣ ಮಟ್ಟವನ್ನು ಆಶ್ರಯಿಸದೆ ಎಲ್ಲಾ ಕಡೆಗಳಲ್ಲಿ ಬೆಳೆಯುವ ಒಂದು ನಾಣ್ಯ ಬೆಳೆಯಾಗಿದೆ. ಇದಕ್ಕೆ ಹೆಚ್ಚಿನ ಗಮನವು ದೊರಕದ ಕಾರಣ ರೋಗಗಳಿಂದ ಬಾಧಿತವಾಗಿವೆ. ಕೀಟನಾಶಕಗಳನ್ನು ಉಪಯೋಗಿಸುವ ಪದ್ಧತಿ ಕಡಿಮೆಯಾದ್ದರಿಂದ ಈ ಕುರಿತು ಪ್ರೋತ್ಸಾಹವು ಅಗತ್ಯವಾಗಿದೆ. ಆರ್ಥಿಕವಾಗಿ ಹಿಂದುಳಿದವರಿಗೆ ಕೃಷಿ ಭವನದ ಮೂಲಕ ಇನ್ನೂ ಹೆಚ್ಚಿನ ಸಹಕಾರ, ಸಹಾಯವಿದ್ದರೆ ಪ್ರಗತಿಯನ್ನು ನಿರೀಕ್ಷಿಸಬಹುದು.

**ಕರಿಮೆಣಸು :** ಮಧ್ಯಬೆಳೆಗಳಲ್ಲಿ ಒಂದಾಗಿರುವ ಕರಿಮೆಣಸಿನ ಬೆಳೆಯು ಆಕರ್ಷಕ ಬೆಳೆಯಾಗಿದೆ. ಇದರ ಮೇಲೆಯೂ ರೊಗದ ಪ್ರಭಾವವು ಧಾರಾಳ ಇದೆ. ಇದಕ್ಕೆ ಇನ್ನೂ ತಕ್ಕ ಪರಿಹಾರ ಕಂಡು ಬಂದಿಲ್ಲ. ಲಾಭದಾಯಕ ಬೆಳೆಯಾದರೂ ಇದಕ್ಕೆ ಆಕರ್ಷಣೆ ಕಡಿಮೆಯಾಗಿದೆ. ಗೊಬ್ಬರಗಳನ್ನು ಉಪಯೋಗಿಸಿ ಆಧುನಿಕ ತಳಿಗಳಾದ ಕರಿಮುಂಡ, ಪಗೆಯೂರು ಮೊದಲಾದವುಗಳನ್ನು ಬೆಳೆಸಿ ರೋಗ ಮುಕ್ತಗೊಳಿಸಿದರೆ ಇದು ಲಾಭದಾಯಕವಾಗಬಹುದು.

**ಬಾಳೆ :** ಹೆಚ್ಚಿನ ಆದಾಯವನ್ನು ತರುವ ಮತ್ತು ಮಧ್ಯ ಬೆಳೆಗಳಲ್ಲಿ ಪ್ರಧಾನ ಸ್ಥಾನವನ್ನು ಪಡೆಯುವ ತಳಿ ಕದಳಿಯಾಗಿದೆ. ನೇಂದ್ರ ಮತ್ತು ಇತರ ತಳಿಗಳನ್ನು ಬೆಳೆಸುವಂತಹ ಕ್ರಮವೂ ರೂಢಿಯಲ್ಲಿದೆ. ಇತರ ಆಧುನಿಕ ತಳಿಗಳಾದ ಬೂದಿ ಬಾಳೆ, ಮೈಸೂರು, ಕೇವೆಂಡೀಸ್ ಮೊದಲಾದ ತಳಿಗಳು ಬಳಕೆಯಲ್ಲಿವೆ. ರೋಗಗಳು ಇವುಗಳನ್ನು ಬಾಧಿಸದೆ ಬಿಡುವುದಿಲ್ಲ. ಇದಕ್ಕೆ ಸೂಕ್ತ ಪರಿಹಾರ ಇಂದಿನ ವರೆಗೆ ದೊರೆತಿಲ್ಲ. ಈ ಕುರಿತು ಆಳವಾದ ಅಧ್ಯಯನ ಅಗತ್ಯ.

**ಕೊಕ್ಕೊ :** ಮಧ್ಯ ಬೆಳೆಯಾಗಿರುವ ಈ ಬೆಳೆಯು ಇತ್ತೀಚೆಗೆ ಆಕರ್ಷಣೆಯನ್ನು ಕಳೆದುಕೊಳ್ಳಲಾರಂಭಿಸಿದೆ. ಉತ್ತಮವಾದ ಮಾರುಕಟ್ಟೆಯಿಲ್ಲದೆ ಆಂಶಿಕವಾಗಿ ಪ್ರಧಾನ ಬೆಳೆಗಳಿಗೆ ಪರಿಣಾಮವನ್ನು ಬೀರುವ ಕೊಕ್ಕೊ ಸಸಿಗಳನ್ನು ಹೆಚ್ಚಿನವರು ಕಡಿಯತೊಡಗಿದ್ದಾರೆ. ಅಳಿಲು ಮತ್ತು ಇಲಿಗಳ ಬಾಧೆ ಇದಕ್ಕೆ ಧಾರಾಳ ಇದೆ. ಸದ್ಯ ಈ ಬೆಳೆಗೆ ಹೆಚ್ಚಿನ ಭವಿಷ್ಯವಿಲ್ಲ.

**ರಬ್ಬರ್ :** ಗುಡ್ಡೆಗಳ ಇಳಿಜಾರು ಪ್ರದೇಶಗಳಲ್ಲಿ ಈ ಬೆಳೆಯು ಬೆಳೆಸಲ್ಪಡುತ್ತದೆ. ಇತ್ತೀಚೆಗೆ ಕೇರಳದ ದಕ್ಷಿಣ ಭಾಗದ ಕೆಲವು ಕೃಷಿಕರು ಈ ಪ್ರದೇಶದಲ್ಲಿ ಅನುಕೂಲವಾಗಿರುವ ಸ್ಥಳಗಳನ್ನು ಖರೀದಿಸಿ ರಬ್ಬರ್ ಬೆಳೆಸಲು ತೊಡಗಿದ್ದಾರೆ. ಸುಮಾರು 100 ಎಕ್ರೆಗಳಷ್ಟು ಕೃಷಿಯಿರುವ ಈ ಪ್ರದೇಶದ ಕೆಲವೆಡೆ ರಬ್ಬರ್ ಗಿಡಗಳು ಟೇಪಿಂಗ್‌ಗೆ ಬಂದಿರುತ್ತದೆ. ಹೆಚ್ಚಿನ ಪ್ರೋತ್ಸಾಹ ದೊರಕಿದರೆ ಈ ಕೃಷಿಯು ಆದಾಯಕರವಾಗಿ ಪರಿಣಮಿಸಬಹುದು.

**ಇತರ ಬೆಳೆಗಳು :** ಮಾವು, ಔಷದೀಯ ಸಸ್ಯ, ತರಕಾರಿ ಮುಂತಾದವುಗಳನ್ನು ಮಾರಾಟದ ಉದ್ದೇಶದಿಂದ ಬೆಳೆಸುವಂತಹ ಪದ್ಧತಿ ಕಡಿಮೆ. ಇವುಗಳಿಗೂ ಕೀಟನಾಶಕ ಸಿಂಪಡಿಸುವಿಕೆ, ಗೊಬ್ಬರಗಳು ಕುರಿತು ಮಾಹಿತಿಗಳು ಲಭ್ಯವಿದ್ದರೆ ಇವುಗಳು ವಾಣಿಜ್ಯ ಬೆಳೆಗಳಾಗಿ ಪರಿವರ್ತನೆಗೊಳ್ಳಬಹುದು.

**ನೀರಿನ ಮೂಲಗಳು :** ಪಂಚಾಯತಿನ ತಗ್ಗು ಪ್ರದೇಶಗಳಲ್ಲಿ ಧಾರಾಳವಾದ ನೀರಿನ ಲಭ್ಯತೆ ಕಂಡು ಬರುತ್ತದೆ. ಹಿಂದಿನ ಕಾಲದಲ್ಲಿ ಏತ, ಕೈದಂಬೆ ಮೊದಲಾದ ಮಾನವ ಚೈತನ್ಯಗಳ ಮೂಲಕ ನೀರನ್ನು ಮೇಲೆತ್ತಲಾಗುತ್ತಿತ್ತು. ಇತ್ತೀಚೆಗೆ ಬಂದ ಪಂಪುಸೆಟ್ಟುಗಳ ಪ್ರವೇಶದಿಂದ ಇವುಗಳೆಲ್ಲ ಮೂಲೆ ಪಾಲಾದುವು. ಈ ಕೆಲಸಕ್ಕೆ ಬೇಕಾದ ಚೈತನ್ಯದ ಕೊರತೆ ಕಂಡು ಬರುತ್ತದೆ. ವಿದ್ಯುತ್ ಈ ವಿಭಾಗದ ಪ್ರಮುಖ ಚೈತನ್ಯವಾಗಿದೆ. ಇತ್ತೀಚೆಗೆ ವಿದ್ಯುತ್ ಕೊರತೆಯಿಂದ ಪಂಪುಸೆಟ್ಟುಗಳು ನಿಷ್ಕ್ರಿಯವಾಗುತ್ತಿರುವುದರಿಂದ ಕೃಷಿ ಅಭಿವೃದ್ಧಿಗೆ ಬಹುದೊಡ್ಡ ಆಘಾತವಾಗಿದೆ. ಇದಕ್ಕೆ ಪರಿಹಾರವನ್ನು ಕಂಡು ಹುಡುಕಬೇಕು. ಸೌರಶಕ್ತಿಯ ಬಳಕೆಯು ವಿದ್ಯುತ್ತಿನ ಕೊರತೆಯನ್ನು ಆಂಶಿಕವಾಗಿ ನೀಗಿಸಬಹುದು. ಹೆಚ್ಚಿನ ನೀರಿಗಾಗಿ ಆಳವಾದ ಕೊಳವೆ

ಬಾವಿಗಳನ್ನು ಅಲ್ಲಲ್ಲಿ ನಿರ್ಮಿಸಿದುದರಿಂದ ಭೂಮಿಯ ಅಂತರ್ಜಲಮಟ್ಟ ಕುಸಿದು ಸಮೀಪದ ಕೆರೆ ಬಾವಿಗಳ ಮೇಲೆ ದುಷ್ಪರಿಣಾಮವಾಗುತ್ತಿದೆ. ಇದಕ್ಕೆ ಪರಿಹಾರೋಪಾಯ ಅವಶ್ಯವಾಗಿ ರೂಪಿತವಾಗಬೇಕು. ಈ ಪಂಚಾಯತಿನ ಕೆಲವೆಡೆ ತೋಡುಗಳು ಹರಿಯುತ್ತಿದೆ. ಇವಕ್ಕೆ ಅಲ್ಲಲ್ಲಿ ಕಟ್ಟಗಳನ್ನು ಹಾಕಿ ನೀರಾವರಿ ವ್ಯವಸ್ಥೆ ಮಾಡುವುದಿದೆ. ಪಳ್ಳತಡ್ಕ, ಪೆರಡಾಲ, ಕಲ್ಲಕಳೆಯ ಮೊದಲಾದ ಹೊಳೆಗಳು ನಮ್ಮ ಪಂಚಾಯತಿನ ಪ್ರಾಮುಖ್ಯ ನೀರಾವರಿಯ ಸೆಲೆಗಳಾಗಿವೆ. ಇವುಗಳಿಗೆ ಅಲ್ಲಲ್ಲಿ ಅಣೆಕಟ್ಟುಗಳನ್ನು ನಿರ್ಮಿಸಿ ನೀರಿನ ಸಂಗ್ರಹ ಮಾಡಿ ಕೃಷಿಗೆ ಉಪಯೋಗಿಸಬಹುದು. ಇದೇ ರೀತಿಯ ಇನ್ನೂ ಕೆಲವು ವ್ಯವಸ್ಥೆಗಳು ಕೃಷಿ ಅಭಿವೃದ್ಧಿಗೆ ಕಾರಣವಾಗಬಹುದು.

ನೀರು ಕೃಷಿಗೆ ಅವಶ್ಯವಿರುವ ಒಂದು ಪ್ರಾಮುಖ್ಯ ಘಟಕ. ಇದನ್ನು ದುರುಪಯೋಗವಾಗದಂತೆ ನೋಡಿಕೊಳ್ಳಬೇಕಾದುದು ಪ್ರತಿಯೊಬ್ಬ ಪೌರನ ಕರ್ತವ್ಯವಾಗಿದೆ. ಇದಕ್ಕಾಗಿ ಯೋಗ್ಯ ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ.

## ಬದಿಯಡ್ಕ ಗ್ರಾಮ ಪಂಚಾಯತಿನ ಭೂಮಿಗೆ ಸಂಬಂಧಿಸಿದ ವಿರಗಳು :-

| ವಿಭಾಗ | ವಿಸ್ತೀರ್ಣ (ಹೆಕ್ಟೇರುಗಳಲ್ಲಿ) |
|---|---|
| ಭತ್ತದ ಕೃಷಿ | 1950 |
| ಮನೆ ಮತ್ತು ಪರಿಸರ | 580 |
| ಪರಂಬೋಕು | 187 |
| ಕೃಷಿಯೋಗ್ಯ ಬಂಜರು ಭೂಮಿ | 285 |
| ಕೃಷಿಯೋಗ್ಯವಲ್ಲದ ಭೂಮಿ | 2573 |
| **ಮೊತ್ತ** | **5575** |

ಪಂಚಾಯತು ಕ್ಷೇತ್ರದ ಒಟ್ಟು ಭೂಮಿಯ ಪೈಕಿ ಕೃಷಿಯೋಗ್ಯವಲ್ಲದ ಭೂಮಿಯು ಅರ್ಧಕ್ಕಿಂತ ಜಾಸ್ತಿಯಾಗಿದೆ. ಇದನ್ನು ಸಾಧ್ಯವಿದ್ದಷ್ಟು ಕೃಷಿ ಯೋಗ್ಯ ಭೂಮಿಯನ್ನಾಗಿ ಪರಿವರ್ತಿಸಲು ಪ್ರಯತ್ನಿಸಿದರೆ ಪಂಚಾಯತು ಮಟ್ಟದ ಕೃಷಿಯು ಆದಾಯಕರವಾಗಿ ಪರಿಣಮಿಸ ಬಹುದು.

## ಬದಿಯಡ್ಕ ಪಂಚಾಯತಿನಲ್ಲಿರುವ ತೋಡುಗಳ ವಿವರಗಳು :

| ಕ್ರಮ ಸಂಖ್ಯೆ | ಎಲ್ಲಿಂದ | ಎಲ್ಲಿಗೆ | ದೂರ (ಕಿ.ಮೀ. ಗಳಲ್ಲಿ) |
|---|---|---|---|
| 1. | ಓಡಂಗಲ್ಲು | ಗುಣಾಜೆ | 10 |
| 2. | ಚುಳ್ಳಿಕ್ಕಾನ | ಓಂತಿಚ್ಚಾಲು | 3 |
| 3. | ನೆಕ್ರಾಜೆ | ವಾಂತಿಚ್ಚಾಲು | 3.5 |
| 4. | ದಂಬೆಮೂಲೆ | ಪಳ್ಳತಡ್ಕ | 1.5 |
| 5. | ಪಳ್ಳ | ಗುಣಾಜೆ | 1.5 |
| 6. | ಕಂಗಿಲ | ಪಳ್ಳತಡ್ಕ | 2.5 |
| 7. | ನೀರ್ಚಾಲು | ಕಿಳಿಂಗಾರು | 3 |
| 8. | ಕಟ್ಟತ್ತಂಗಡಿ | ಕುದ್ರೆಪ್ಪಾಡಿ | 5 |

ಮೇಲಿನ ತೋಡು ಅಥವಾ ಹೊಳೆಗಳಲ್ಲಿ ಬೇಸಗೆಯ ಸಮಯದಲ್ಲಿ ನೀರಿನ ಹರಿವು ಇರುವುದಿಲ್ಲ. ಕೊಳವೆ ಬಾವಿಗಳ ಸಂಖ್ಯೆಯು ಹೆಚ್ಚಿದಂತೆ ತೋಡುಗಳಲ್ಲಿ ದೊರಕುವ ನೀರಿನ ಲಭ್ಯತೆ ಕಡಿಮೆಯಾದುದು ಕಂಡು ಬರುತ್ತದೆ. ಈ ವಿಷಯದ ಕುರಿತು ಪ್ರತಿಯೊಬ್ಬರೂ ಜವಾಬ್ದಾರಿಯುತವಾಗಿ ಸಹಕರಿಸಿದರೆ ನೀರಿನ ಸಂಪತ್ತನ್ನು ಉಳಿಸಿಕೊಳ್ಳಬಹುದು. ಭೂಗರ್ಭ ತಜ್ಞರ ಸಲಹೆ ಪಡೆದು ಮಳೆಗಾಲದಲ್ಲಿ ವ್ಯರ್ಥವಾಗುವ ನೀರನ್ನು ಗುಂಡಿ, ಕಲ್ಲುಪಣೆ ಮತ್ತು ಮದಕಗಳಲ್ಲಿ ಸಂಗ್ರಹಿಸುವುದು ಮತ್ತು ಮಳೆಗಾಲದಲ್ಲಿ ಹರಿದು ವ್ಯರ್ಥವಾಗುವ ನೀರನ್ನು ಕೊಳವೆ ಬಾವಿಗಳಿಗೆ ತುಂಬಿಸಿ ಅಂತರ್ಜಲ ಮಟ್ಟವನ್ನು ಉಳಿಸಿಕೊಳ್ಳುವ ಪ್ರಯತ್ನವು ಸ್ವಾಗತಾರ್ಹ.

## ಕೀಟನಾಶಕಗಳು ಮತ್ತು ರಾಸಾಯನಿಕ ಗೊಬ್ಬರ :

ಕೃಷಿ ಭವನದ ಅಧಿಕಾರಿಗಳು ಕೀಟನಾಶಕಗಳ ಮತ್ತು ರಾಸಾಯನಿಕ ಗೊಬ್ಬರಗಳ ಕುರಿತು ಸಂದರ್ಭೋಚಿತ ಮಾಹಿತಿಯನ್ನು ನೀಡುತ್ತಾರೆ. ಬದಿಯಡ್ಕ ಪ್ರದೇಶದಲ್ಲಿ ಎರಡು ಖಾಸಗಿ ವಲಯದ ಮಾರಾಟದ ವ್ಯವಸ್ಥೆಯ ಕೇಂದ್ರಗಳಿವೆ. ಒಂದು ಸಹಕಾರೀ ವ್ಯವಸ್ಥೆಯ ಮಾರಾಟ ಕೇಂದ್ರವಿರುತ್ತದೆ. ಸಾಮಾನ್ಯವಾಗಿ ಹೆಚ್ಚಿನ ರಾಸಾಯನಿಕ ಹಾಗೂ ಜೈವಿಕ ಗೊಬ್ಬರಗಳು ಮತ್ತು ಕೀಟ ನಾಶಕಗಳು ಲಭ್ಯವಿವೆ.

ಮೇಲೆ ಹೇಳಿದ ವಿವರಣೆಗಳ ಹೊರತಾಗಿ ಇನ್ನೂ ಕೆಲವು ಸಮಸ್ಯೆಗಳನ್ನು ನಾವು ಕಾಣಬಹುದು. ಅತಿವೃಷ್ಟಿ ಮತ್ತು ಅನಾವೃಷ್ಟಿಗಳಿಂದ ಸಣ್ಣ ಕೃಷಿಕರಿಗೆ ಹಲವು ತರದ ನಷ್ಟಗಳುಂಟಾಗುತ್ತವೆ. ಸುಳಿಗಾಳಿ ಮತ್ತು ಬಿರುಗಾಳಿಗಳಿಗೆ ಅಡಿಕೆ ಬೆಳೆ ಮತ್ತು ಇತರ ಬೆಳೆಗಳು ನಾಶ ಹೊಂದುತ್ತವೆ. ಅಕಾಲದಲ್ಲಿ ಮಳೆ ಬರುವುದರಿಂದ ಭತ್ತದ ಬೆಳೆಗೆ ಹಾನಿಯುಂಟಾಗುತ್ತದೆ. ಇದಕ್ಕೆ ಇಂತಹ ಸಂದರ್ಭಗಳಲ್ಲಿ ಸೂಕ್ತ ಪರಿಹಾರ ಬೇಕಾಗಿದೆ. ಚೈತನ್ಯದ ಸರಬರಾಜಿನ ಕೊರತೆಯುಂಟಾದಾಗ ಸೀಮೆ ಎಣ್ಣೆ ಮತ್ತು ಡೀಸೆಲ್ ಇವುಗಳ ಸರಬರಾಜಿನ ಸುಗಮ ವ್ಯವಸ್ಥೆಯಾಗಬೇಕು.

## ಸಮಸ್ಯೆಗಳ ನಿವಾರಣೆ

ನಮ್ಮ ಪಂಚಾಯತಿನಲ್ಲಿ ಹಲವು ತರದ ಕೃಷಿ ಮಾಡುವುದಾದರೂ ಪ್ರಾಮುಖ್ಯ ಅಡಿಕೆ, ಭತ್ತ, ತೆಂಗು ಇತ್ಯಾದಿಗಳಾಗಿವೆ.

**ಅಡಿಕೆ :** ಅಡಿಕೆ ಬೆಳೆ ಪ್ರಧಾನವಾಗಿ ಮಹಾಳಿ ರೋಗ ಮತ್ತು ಹಳದಿ ರೋಗ, ಪ್ರಕೃತಿ ವಿಕೋಪ, ನೀರಿನ ಕೊರತೆ ಇತ್ಯಾದಿಗಳಿಂದ ನಷ್ಟ ಹೊಂದುತ್ತದೆ. ಈ ರೀತಿ ಆಗುವ ನಷ್ಟಗಳಿಗೆ ಸೂಕ್ತ ಔಷಧಿಗಳು, ಪರಿಹಾರಗಳು, ಧನ ಸಹಾಯ ಕಡಿಮೆ ಬಡ್ಡಿ ದರದಲ್ಲಿ ಸಾಲದ ಯೋಜನೆಗಳು, ನಿವಾರಣೆಗಾಗಿ ಒಂದು ಸಂಶೋಧನಾ ಕೇಂದ್ರ ಇತ್ಯಾದಿಗಳು ಅಗತ್ಯವಾಗಿವೆ. ಅಡಿಕೆ ತೋಟಗಳಿಗೆ ಮಣ್ಣು ಹಿಡಿಸಲು ಬೇಂಕು ಸಾಲದ ಅಗತ್ಯವಿದೆ, ಕೃಷಿ ಭವನದ ಮೂಲಕ ಈಗಾಗಲೇ ಕೆಲವು ಸೌಲಭ್ಯಗಳು ದೊರೆಯುತ್ತಿವೆಯಾದರೂ ಕ್ಲಪ್ತ ಸಮಯಕ್ಕೆ ದೊರಕುವುದಿಲ್ಲ. ಈ ಸೌಲಭ್ಯವನ್ನು ಪಡೆಯಲು ಕೃಷಿಕರು ಸಿಗುವ ಪರಿಹಾರಕ್ಕಿಂತ ಹೆಚ್ಚಿನ ಖರ್ಚನ್ನು ಮಾಡಬೇಕಾಗುತ್ತದೆ. ಹಲವಾರು ದಿನಗಳನ್ನು ವ್ಯಯಿಸಬೇಕಾಗುತ್ತದೆ. ಈ ಸೌಲಭ್ಯಗಳನ್ನು ಅಲೆದಾಟವಿಲ್ಲದೆ ನೇರವಾಗಿ ಪಡೆಯುವಂತಾಗಬೇಕು. ಆಧುನಿಕ ನೀರಾವರಿ ಪದ್ಧತಿಗಳ ಅನುಷ್ಠಾನಕ್ಕೆ ಧನ ಸಹಾಯ ನೀಡಬೇಕು.

**ಭತ್ತ :** ಕೂಲಿ ಕಾರ್ಮಿಕರ ಕೊರತೆ, ಕ್ರಿಮಿ ಕೀಟಗಳ ಬಾಧೆ ಉತ್ಪಾದನೆಗಿಂತ ಹೆಚ್ಚಿನ ಖರ್ಚು ಮುಂತಾದವುಗಳಿಂದಾಗಿ ಭತ್ತದ ಕೃಷಿಕರು ಈ ವ್ಯವಸಾಯವನ್ನು ಬಿಟ್ಟು ಇತರ ಲಾಭದಾಯಕ ಕೃಷಿಯ ಮರೆಹೋಗುತ್ತಿದ್ದಾರೆ.

ಭತ್ತದ ಕೃಷಿಯನ್ನು ಪ್ರೋತ್ಸಾಹಿಸಲು ಕೃಷಿಕರಿಗೆ ಹೆಚ್ಚಿನ ಆರ್ಥಿಕ ಸಹಾಯ, ಉತ್ತಮ ತಳಿಯ ಭತ್ತದ ಬೀಜಗಳು ಔಷಧಿಗಳ ವ್ಯವಸ್ಥೆ, ಉಳುವ ಯಂತ್ರ, ಬಿತ್ತುವ ಯಂತ್ರ, ಕೊಯ್ಯುವ ಯಂತ್ರ ಇತ್ಯಾದಿಗಳ ಸೌಲಭ್ಯ, ಗ್ರೂಪ್ ಫಾರ್ಮರ್ಸ್ ಸ್ಕೀಂ, ಕೃಷಿಗೆ ಬೇಕಾದ ಎಲ್ಲಾ ಸಲಕರಣೆಗಳು. ನೀರಾವರಿ, ಗೊಬ್ಬರ ಕಳೆ ನಾಶಕಗಳು, ಸಂಶೋಧನಾ ಕೇಂದ್ರ, ಮಣ್ಣಿನ ಪರೀಕ್ಷೆ, ಮಳೆಗಾಲದಲ್ಲಿ ನೀರಿನ ಕೊರತೆವನ್ನು ತಡೆಗಟ್ಟುವುದು ಇತ್ಯಾದಿ ಸೌಲಭ್ಯಗಳನ್ನು ನೀಡಬೇಕು. ಹಾಗೆಯೇ ಧನಸಹಾಯ, ಮತ್ತು ಬಡ್ಡಿ ರಹಿತ ಸಾಲಗಳನ್ನು ನೀಡಬೇಕು.

**ತೆಂಗು :** ತೆಂಗು ಕೃಷಿ ಒಂದು ಸಾರ್ವತ್ರಿಕ ಬೆಳೆಯಾಗಿದೆ. ಇದನ್ನು ಎಡೆ ಬೆಳೆಯಾಗಿ, ಮುಖ್ಯ ಬೆಳೆಯಾಗಿ ಹಾಗೂ ಗುಡ್ಡಗಾಡು ಪ್ರದೇಶದ ಬೆಳೆಯಾಗಿಯೂ ಬೆಳೆಸುತ್ತಾರೆ. ಆಧುನಿಕ ರೀತಿಯ ನೀರಾವರಿ ಪದ್ಧತಿಗಳಾದ ಡ್ರಿಪ್ಸ್, ಬಟ್ಲರ್, ಮುಂತಾದುವುಗಳ ವ್ಯವಸ್ಥೆ, ನಿರಾಶ್ರಯಗಳು, ತರಬೇತಿ, ಸಂಶೋಧನೆ, ಆರ್ಥಿಕ ಸಹಾಯ, ಸಾಲ, ಇನ್ನಷ್ಟು ತೆಂಗಿನ ತೋಟದ ನಿರ್ಮಾಣ, ಔಷಧಿ ಮಾರುಕಟ್ಟೆ ಮುಂತಾದವುಗಳನ್ನು ಕೃಷಿ ಭವನದ ಮುಖಾಂತರ ಜ್ಯಾರಿಗೊಳಿಸಬೇಕು.

**ಎಡೆ ಬೆಳೆಗಳು :** ಬಾಳೆ, ಕೊಕ್ಕೊ, ಅನನಾಸು, ಲವಂಗ, ಜಾಯಿಕಾಯಿ, ಕರಿಮೆಣಸು, ಮುಂತಾದವುಗಳನ್ನು ತೋಟಗಳಲ್ಲಿ ಎಡೆಬೆಳೆಯಾಗಿ ಬೆಳೆಸುತ್ತಾರೆ. ಎಡೆ ಬೆಳೆಗಳ ಬಗ್ಗೆ ಸೂಕ್ತ ಮಾಹಿತಿ, ತರಬೇತಿ ಪ್ರೋತ್ಸಾಹದ ಅಗತ್ಯವಿದೆ. ಉತ್ತಮ ತರದ ಬೀಜ, ಬಳ್ಳಿ, ಸಸಿಗಳನ್ನು ವಿತರಿಸಬೇಕು. ನರ್ಸರಿಯೊಂದನ್ನು ಪಂಚಾಯತ್ ಮಟ್ಟದಲ್ಲಿ ನಿರ್ಮಿಸಬೇಕು. ನಿರುದ್ಯೋಗಿ ಯುವಕ ಯುವತಿಯರಿಗೆ ತರಬೇತಿ ನೀಡಿ ಪ್ರೋತ್ಸಾಹಿಸಬೇಕು.

**ಗೇರು ಬೀಜ :** ಕಾರ್ಮಿಕರ ಸಮಸ್ಯೆ ಕಡಿಮೆ ಇರುವ ಗುಡ್ಡಗಾಡು ಪ್ರದೇಶದ ಬೆಳೆ ಇದಾಗಿದೆ. ಇದಕ್ಕೆ ತಗಲುವ ರೋಗ ಬಾಧೆಯೆಂದರೆ ಮರಕ್ಕೆ ಹುಳ ಹೊಕ್ಕು ಸಾಯುವುದಾಗಿದೆ. ಕೃಷಿ ಇಲಾಖೆಯಿಂದ ಸಂಶೋಧನೆ ಮಾಡಿ ಕೀಟ ನಾಶಕ ಪೂರೈಸುವ ಅಗತ್ಯವಿದೆ. ಖಾಲಿ ಬಿದ್ದಿರುವ ಪ್ರದೇಶಗಳಲ್ಲಿ ಸರಕಾರದಿಂದ ಬೇಲಿ ನಿರ್ಮಿಸಿ ಕೊಟ್ಟು ಉತ್ತಮ ತಳಿಯ ಸಸಿ ವಿತರಿಸಿ ಧನ ಸಹಾಯ, ಒದಗಿಸಿ ಗೇರು ಕೃಷಿಯನ್ನು ಪ್ರೋತ್ಸಾಹಿಸುವುದು ಅಗತ್ಯವಾಗಿದೆ.

**ತರಕಾರಿಗಳು :** ನಮ್ಮ ಪಂಚಾಯತಿನಲ್ಲಿ ದೊಡ್ಡ ಪ್ರಮಾಣದಲ್ಲಿ ಅವಲಂಬಿಸಿದ ಒಂದು ಕೃಷಿ ಇದಾಗಿದೆ. ಇದಕ್ಕೆ ಬಿಸಿಲು ಬೀಳುವ ಮತ್ತು ಸಮತಟ್ಟಾದ ಸ್ಥಳದ ಅಗತ್ಯವಿದೆ. ಕೀಟಗಳು ಪಕ್ಷಿಗಳು, ಮೃಗಗಳು ಮತ್ತು ಹುಳಗಳ ತೊಂದರೆಯಿಂದಾಗಿ ತರಕಾರಿ ಕೃಷಿ ಮಾಡಲು ಎಲ್ಲರೂ ಹಿಂಜರಿಯುತ್ತಾರೆ. ಸೂಕ್ತವಾದ ಸಂಶೋಧನೆಗಳನ್ನು ಮಾಡಿ, ಔಷಧಿಗಳನ್ನು ನೀಡಿ, ಉತ್ತಮ ತಳಿಯ ಬೀಜ, ತರಬೇತಿ, ಅಗತ್ಯವುಳ್ಳ ಕೃಷಿ ಉಪಕರಣಗಳನ್ನು ಒದಗಿಸಬೇಕು. ಸಣ್ಣ ಕೃಷಿಕರಿಗೂ, ಹಿಂದುಳಿದ ವರ್ಗದವರಿಗೂ ನಿರುದ್ಯೋಗಿ ಯುವಕ, ಯುವತಿಯರಿಗೂ ಸೂಕ್ತ ಧನ ಸಹಾಯ ನೀಡಿ ತರಕಾರಿ ಕೃಷಿಯನ್ನು ಒಂದು ಸ್ವ- ಉದ್ಯೋಗವನ್ನಾಗಿ ಮಾಡಲು ಪ್ರೋತ್ಸಾಹಿಸಬೇಕು.

**ಹೂಗಳು :** ಹೂ ಕೃಷಿಯನ್ನು ಅಭಿವೃದ್ಧಿ ಪಡಿಸಿ ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ಪ್ರೋತ್ಸಾಹ ನೀಡಬೇಕು. ಗುಲಾಬಿ, ಮಲ್ಲಿಗೆ, ಸೇವಂತಿಗೆ ಮುಂತಾದ ಹೂಗಳಿಗೆ ಯಾವಾಗಲೂ ಬೇಡಿಕೆಯಿದೆ. ಹೂ ಕೃಷಿಯನ್ನು ಅಭಿವೃದ್ಧಿ ಪಡಿಸಲು ಸೂಕ್ತ ತರಬೇತಿ ಧನ ಸಾಲ ಇತ್ಯಾದಿಗಳನ್ನು ನೀಡಬೇಕು.

**ನೀರಾವರೀ ಸಮಸ್ಯೆಯ ವಿವರಣೆ :**

i) ಎಲ್ಲಾ ಕೃಷಿಗಳಿಗೂ ನೀರುಣಿಸಲು ಇಲ್ಲಿಯ ಜನರು ವಿದ್ಯುತ್ ಮೋಟಾರು, ಡೀಸೆಲ್ ಹಾಗೂ ಚಿಮಣಿ ಎಣ್ಣೆ ಪಂಪುಗಳನ್ನು ಅವಲಂಬಿಸಿರುತ್ತಾಆರೆ. ಇತ್ತೀಚಿನ ದಿನಗಳಲ್ಲಿ ಲೋವೋಲ್ಟೇಜಿನ ಸಮಸ್ಯೆಯಿಂದ ಮೋಟಾರ್‌ಗಳು ಕೆಲಸ ಮಾಡುವುದಿಲ್ಲ. ವಿದ್ಯುತ್ ಸಮಸ್ಯೆಯನ್ನು ಪರಿಹರಿಸಲು ನಮ್ಮ ಪಂಚಾಯತ್ ಪರಿಸರದಲ್ಲಿ ಒಂದು ಸಬ್- ಸ್ಟೇಶನ್ ನಿರ್ಮಿಸಬೇಕು. ಡೀಸೆಲ್ ಮತ್ತು ಚಿ. ಎಣ್ಣೆ ಪಂಪ್‌ಗಳಿಗೆ ಅವಶ್ಯವಿರುವ ಡೀಸೆಲ್ ಮತ್ತು ಚಿ. ಎಣ್ಣೆಯನ್ನು ಸಬ್ಸಿಡಿ ದರದಲ್ಲಿ ಪಂಚಾಯತ್ ಪರಿಸರದಲ್ಲಿ ವಿತರಿಸುವ ವ್ಯವಸ್ಥೆ ಮಾಡಬೇಕು. ಚಾಲ್ತಿಯಲ್ಲಿರುವ ಪರ್ಮಿಟ್ ವ್ಯವಸ್ಥೆಯನ್ನು ಊರ್ಜಿತಗೊಳಿಸಬೇಕು. ಈ ಪರ್ಮಿಟನ್ನು ಪಂಚಾಯತ್ ಪರಿಸರದಲ್ಲಿ ವಿತರಿಸುವಂತೆ ಮತ್ತು ಆರು ತಿಂಗಳ ಬದಲಾಗಿ ದೀರ್ಘಾವಧಿಗೆ ಪರ್ಮಿಟನ್ನು ಕೊಡುವಂತೆ ವ್ಯವಸ್ಥೆ ಮಾಡಬೇಕು. ಹೀಗೆ ಮಾಡಿದರೆ ಕೃಷಿಕರ ಅನಗತ್ಯ ಅಲೆದಾಟ, ಕಷ್ಟ ನಷ್ಟಗಳನ್ನು ತಡೆಗಟ್ಟಬಹುದು.

ii) ಮಳೆಗಾಲದ ನೀರನ್ನು ಶೇಖರಿಸಲು ಈ ಕೆಳಗಿನ ಸ್ಥಳಗಳಲ್ಲಿ ಹೊಳೆ ತೋಡುಗಳಿಗೆ ಅಣೆಕಟ್ಟು, ವಿಯರ್ ಮತ್ತು ಕಟ್ಟಗಳ ವ್ಯವಸ್ಥೆಯನ್ನು ಮಾಡಬೇಕು. ಅಥವಾ ಕೆರೆಗಳನ್ನು ನಿರ್ಮಿಸಬೇಕು.

1. ಅಗ್ರಸಾಲೆಯ ಪಾರೆಕಟ್ಟೆ
2. ನೆಲ್ಲಿಕುಂಜೆಯ ನಡುಮನೆ
3. ಬಳ್ಳಂಬೆಟ್ಟು
4. ಕೋರಿಕ್ಕಾರು
5. ಕಂಗಿಲ
6 ಕಾಂತೀಮಾರು
7. ಚೌಕ್ಕಾರು ಅಣೆಕಟ್ಟು
8. ಮುಚ್ಚಿರ್ ಕಬೆಯಲ್ಲಿ ನಾ ದುರಸ್ತಿಯಲ್ಲಿರುವ ಮದಕ್ಕದ ರಿಪೇರಿ
9. ಬಂಡ್ರಡ್ಕ ಕಾಲನಿಯಲ್ಲಿ ಸಾಮೂಹಿಕ ಕೆರೆ
10. ಏವುಂಜೆ
11. ಕುಕ್ಕಂಕೂಡ್ಲು
12. ಪೆರುಮುಂಡ

13. ಬೈಕುಂಜ
14. ಚಾಳಿತ್ತಡ್ಕದಲ್ಲಿ Dam cum bridge
15. ಕುಂಟಿಕಾನದಲ್ಲಿ ಪೆರಡಾಲ ಹೊಳೆಗೆ Dam cum bridge
16. ಏಳ್ಕಾನದಲ್ಲಿ ಅಣೆಕಟ್ಟು
17. ವಳಕ್ಕುಂಜ ಅಣೆಕಟ್ಟು
18. ಕಡಾರು ಮಾಫಲದಲ್ಲಿ ಅಣೆಕಟ್ಟು

iii) ಹೊಳೆಗಳಲ್ಲಿ ಮತ್ತು ತೋಡುಗಳಲ್ಲಿ ಹಿಂದೆ ಕಟ್ಟುತ್ತಿದ್ದ ಕಟ್ಟಗಳ ನಿವಾರಣ ಕಾರ್ಯ ಹೆಚ್ಚಿನ ಕಡೆ ಹಣದ ಅಡಚಣೆಯಿಂದ, ಕಾರ್ಮಿಕರ ಕೊರತೆಯಿಂದ, ಮಣ್ಣಿನ ಕೊರತೆಯಿಂದ ನಿಂತಿರುತ್ತದೆ. ಇವುಗಳನ್ನು ಕಾಂಕ್ರೀಟಿನ ಅಡಿಪಾಯಗಳ ಕಟ್ಟಗಳಾಗಿ ಯಾ ವಿಯರ್‌ಗಳಾಗಿ ಮಾರ್ಪಡಿಸಬೇಕು. ಇದರಿಂದಾಗಿ ಡಿಸೆಂಬರ್‌ನಿಂದ ಜೂನ್‌ನ ವರೆಗೆ ನೀರು ಶೇಖರಿಸಿಟ್ಟು ಒರತೆಯನ್ನು ತುಂಬಾ ಹೆಚ್ಚಿಸಬಹುದು. ಪ್ರತಿ ವರ್ಷವೂ ಇವುಗಳಿಗೆ ಧನ ಸಹಾಯ ನೀಡಬೇಕು. ಈ ಸ್ಥಳಗಳೆಂದರೆ

| | | | |
|---|---|---|---|
| 1) | ಕಿಳಿಂಗಾರು ಅಗ್ರಸಾಲೆ | I | ವಾರ್ಡ್ |
| 2) | ವಳಕುಂಜ | II | ವಾರ್ಡ್ |
| 3) | ಶಿಮಿಲಡ್ಕ | III | ವಾರ್ಡ್ |
| 4) | ಚೌಕಾರು | VI | ವಾರ್ಡ್ |
| 5) | ಕಳಿಯಂಕಾನ | VI | ವಾರ್ಡ್ |
| 6) | ಚಾಳಿತ್ತಡ್ಕ | IX | ವಾರ್ಡ್ |
| 7) | ನೆಲ್ಲಿಕ್ಕಳೆಯ | IX | ವಾರ್ಡ್ |
| 8) | ಬೈಕುಂಜ | IX | ವಾರ್ಡ್ |
| 9) | ಶೇಂತಾರು | X | ವಾರ್ಡ್ |
| 10) | ಮಕ್ಕಿಕಾನ | X | ವಾರ್ಡ್ |
| 11) | ಮಿಂಚಿನಡ್ಕ | X | ವಾರ್ಡ್ |
| 12) | ಕೈಲಂಕಜೆ | XI | ವಾರ್ಡ್ |
| 13) | ವಾಶೆ | XI | ವಾರ್ಡ್ |
| 14) | ಕುಂಠಿಕಾನ ಮಠ | XI | ವಾರ್ಡ್ |
| 15) | ಶಂಕರ ಮೂಲೆ | XI | ವಾರ್ಡ್ |
| 16) | ವಾಂತಿಚ್ಚಾಲು | XI | ವಾರ್ಡ್ |
| 17) | ಚುಳ್ಳಿಕ್ಕಾನ | V | ವಾರ್ಡ್ |

iv) ಪಂಚಾಯತಿನಲ್ಲಿರುವ ಎಲ್ಲಾ ತೋಡು ಮತ್ತು ಹೊಳೆಗಳ ಬದಿಯಲ್ಲಿರುವ ಜನರಿಗೆ ಮಣ್ಣಿನ ಕೊರೆತವನ್ನು ತಡೆಗಟ್ಟಲು ತಡೆಗೋಡೆಗಳ ನಿರ್ಮಾಣಕ್ಕೆ ಧನ ಸಹಾಯ ಮತ್ತು ಸಾಲಗಳನ್ನು ನೀಡಬೇಕು.

v) ಹೆಚ್ಚಿನ ನೀರಾವರಿ ಸೌಕರ್ಯಕ್ಕಾಗಿ ಕೆರೆ, ಬಾವಿ, ಪಂಪು ಸೆಟ್ಟು, ಗ್ರೂಪ್ ಫಾರ್ಮರ್ಸ್ ಸ್ಕೀಂ ಮುಂತಾದವುಗಳನ್ನು ನೀಡಬೇಕು.

vi) ನೀರಿನ ಸದುಪಯೋಗಕ್ಕಾಗಿ ಆಧುನಿಕ ನೀರಾವರಿ ಕ್ರಮಗಳಾದ ಡ್ರಿಪ್, ಬಬ್ಲರ್ ಸ್ಪಿಂಕ್ಲರ್ ಮುಂತಾದವುಗಳಿಗೆ ಸಬ್ಸಿಡಿ ಧನ ಸಹಾಯ ಮತ್ತು ಸಾಲಗಳನ್ನು ಒದಗಿಸಬೇಕು.

vii) ನೀರಾವರಿ ವ್ಯವಸ್ಥೆಗಳ ಸುವ್ಯವಸ್ಥೆಗಾಗಿ ಕೃಷಿಕರ ಸಂಘಗಳನ್ನು ಅಲ್ಲಲ್ಲಿ ರೂಪೀಕರಿಸಬೇಕು.

viii) ಸುವ್ಯವಸ್ಥಿತ ನೀರಾವರಿ ಪದ್ಧತಿಯನ್ನನುಸರಿಸಲು ಕೃಷಿಕರಿಗೆ ತರಬೇತಿಯನ್ನು ನೀಡಬೇಕಾದುದು ಅತ್ಯಗತ್ಯವಾಗಿದೆ.

ix) ಎಲ್ಲಾ ತರದ ನೀರಾವರಿ ವ್ಯವಸ್ಥೆಗಳಿಗೆ ಧನ ಸಹಾಯ ಮತ್ತು ಪ್ರೋತ್ಸಾಹಗಳನ್ನು ನೀಡಬೇಕು.

# 7. ಮೃಗ ಸಂರಕ್ಷಣೆ ಮತ್ತು ಮೀನುಗಾರಿಕೆ

ಕಳೆದ ದಶಕಗಳಲ್ಲಿ ನಮ್ಮ ರಾಜ್ಯದ ಸಾಮಾಜಿಕ ಹಾಗೂ ಆರ್ಥಿಕ ಬೆಳವಣಿಗೆ ಮೃಗ ಸಂರಕ್ಷಣಾ ವಿಭಾಗದ ಕೊಡುಗೆ ಮಹತ್ತರವಾಗಿದೆ. ಗ್ರಾಮಗಳಲ್ಲಿ ವಾಸಿಸುವ ರೈತಾಪಿ ಜನರ ಆರ್ಥಿಕ ಬೆಳವಣಿಗೆಗೆ ಮೃಗ ಸಂರಕ್ಷಣೆ ಅನಿವಾರ್ಯ. ವಿಕಸನವೆಂದರೆ, ನಮ್ಮ ಜೀವನ ಶೈಲಿಯಲ್ಲಿ ಹಂತ ಹಂತವಾಗಿ ಅಭಿವೃದ್ಧಿ ಹೊಂದುವ ಪ್ರಕ್ರಿಯೆಯಾದುದರಿಂದ. ಮೃಗ ಸಂರಕ್ಷಣಾ ವಿಭಾಗದಲ್ಲಿ ಆಗುವ ಎಲ್ಲಾ ಅಭಿವೃದ್ಧಿಯು ನಮ್ಮ ಗ್ರಾಮೀಣ ಜನರ ಅಭಿವೃದ್ಧಿಗೆ ಸಹಾಯವಾಗುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಪೋಷಕಾಂಶವಿರುವ ಹಾಲು, ಮೊಟ್ಟೆ, ಮಾಂಸಗಳ ಉತ್ಪಾದನೆಯಲ್ಲದೆ, ಕೈಗಾರಿಕಾ ಉತ್ಪಾದನೆಗೆ ಅವಶ್ಯವಾದ ಚರ್ಮ, ಮೂಳೆ, ಜಿಲಾಟಿನ್, ಕೊಬ್ಬುಗಳನ್ನು ಪೂರೈಕೆ ಮಾಡುತ್ತದೆ. ವಿವಿಧ ಔಷಧ, ಹಾರ್ಮೋನು ಹಾಗೂ ರೋಗ ನಿರೋಧಕ ಚುಚ್ಚುಮದ್ದುಗಳ ಉತ್ಪಾದನೆಯು ಮೃಗ ಸಂರಕ್ಷಣಾ ವಿಭಾಗವನ್ನು ಅವಲಂಬಿಸಿರುತ್ತದೆ. ರೈತರಿಗೆ ಭೂಮಿ ಉಳಲು, ಕೃಷಿ ಮಾಡಲು ಹಾಗೂ ಸರಕು ಸಾಗಾಟದಲ್ಲಿ ಎತ್ತುಗಳು ಮಹತ್ತರ ಪಾತ್ರ ವಹಿಸುತ್ತದೆ. ರಾಸಾಯನಿಕ ಗೊಬ್ಬರವನ್ನು ಕಡಿಮೆ ಮಾಡಿ ಜೈವಿಕ ಗೊಬ್ಬರದ ಉಪಯೋಗ ಹೆಚ್ಚಿಸಿ ಕೃಷಿ ಮಾಡಲು ಪ್ರಾಧಾನ್ಯವೀಯುವ ಈ ಕಾಲದಲ್ಲಿ ಪ್ರಾಣಿಗಳ ಗೊಬ್ಬರದ (ಕೋಳಿ ಹಿಕ್ಕೆ, ದನದ ಸೆಗಣಿ, ಆಡಿನ ಹಿಕ್ಕೆ ಹಾಗೂ ಇತರ ಉತ್ಪಾದನೆಗಳು) ಉಪಯೋಗ ಹೆಚ್ಚಿದೆ. ಇವು ನಮ್ಮ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದರಲ್ಲಿ ತುಂಬಾ ಸಹಕಾರಿಯಾಗಿದೆ. ದನದ ಸೆಗಣಿಯಿಂದ ಉತ್ಪಾದಿಸುವ ಗೋಬರ್‌ಗ್ಯಾಸ್ ನಮ್ಮ ಉರುವಲು ಸಮಸ್ಯೆಯನ್ನು ಪರಿಹರಿಸಬಹುದು, ಹಾಗೂ ಪರಿಸರ ಸಂರಕ್ಷಣೆಯನ್ನು ಮಾಡಬಹುದು.

ಮನುಷ್ಯನಲ್ಲಿ ಭೀತಿ ಹುಟ್ಟಿಸುವ ಹುಚ್ಚುನಾಯಿ ರೋಗದ ನಿಯಂತ್ರಣವು ಮೃಗ ಸಂರಕ್ಷಣಾ ವಿಭಾಗದ ಒಂದು ಪ್ರಮುಖ ಜನಹಿತಕಾರಿ ಕಾರ್ಯಕ್ರಮವಾಗಿದೆ. ಮಾನವರಲ್ಲಿ ಆರೋಗ್ಯ ಕಾಪಾಡಲು ಒಳ್ಳೆಯ ಆಹಾರ ಸೇವನೆ ಪ್ರಮುಖ ಪಾತ್ರವಹಿಸುವುದರಿಂದ ಪರಿಶುದ್ಧವಾದ ಮಾಂಸದ ಉತ್ಪಾದನೆ ಹಾಗೂ ಮಾರಾಟಕ್ಕೆ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕಾದುದು ಅಗತ್ಯವಾಗಿದೆ.

ನಿರುದ್ಯೋಗಿ ಯುವಕ ಯುವತಿಯರಿಗೆ ಕಡಿಮೆ ಮೂಲಧನದಲ್ಲಿ ಉದ್ಯೋಗ ಪ್ರಾರಂಭಿಸಲು ಹಾಗೂ ಕಡಿಮೆ ಸಮಯದಲ್ಲಿ ಅದರ ಉತ್ಪಾದನೆಯನ್ನು ಪಡೆಯಲು ಮೃಗ ಸಂರಕ್ಷಣಾ ವಿಭಾಗವು ಸಹಕಾರಿಯಾಗಿದೆ. ಈ ವಿಭಾಗದಲ್ಲಿ 60%ರಷ್ಟು ಕೆಲಸವು ಮಹಿಳೆಯರಿಂದ ನಡೆಸಲ್ಪಡುವುದರಿಂದ ಮಹಿಳೆಯರ ಆರ್ಥಿಕ ಅಭಿವೃದ್ಧಿಗೆ ಸಹಾಯಕವಾಗಬಹುದು. ಮೃಗ ಸಂರಕ್ಷಣೆಯು 94%ದಷ್ಟು ಗ್ರಾಮೀಣ ಪ್ರದೇಶದಲ್ಲಿ ನಡೆಸಲ್ಪಡುವುದರಿಂದ ಗ್ರಾಮೀಣ ಜನರ ಆರ್ಥಿಕ, ಆರೋಗ್ಯ ಹಾಗೂ ಜೀವನ ಮಟ್ಟದ ಅಭಿವೃದ್ಧಿಗೆ ಈ ವಿಭಾಗದ ಕೊಡುಗೆಯು ಅಪಾರವಾಗಿದೆ.

**ಸಾಕು ಪ್ರಾಣಿಗಳ ಸಂಖ್ಯೆ**

| ವಾರ್ಡ್ ನಂಬ್ರ | ಎತ್ತು ಗ್ರಾಮೀಣ ತಳಿ | | ಎತ್ತು ಮಿಶ್ರ ತಳಿ | | ಹಸು ಗ್ರಾಮೀಣ ತಳಿ | | ಹಸು ಮಿಶ್ರ ತಳಿ | | ಎಮ್ಮೆ | | ಕೋಣ | ಆಡು | ನಾಯಿ | ಆನೆ |
|---|---|---|---|---|---|---|---|---|---|---|---|---|---|---|
| | ವಂಶ ವರ್ಧನೆ | ಇತರ | ವಂಶ ವರ್ಧನೆ | ಇತರ | ಕರೆಯುತ್ತಿರುವುದು | ಕರೆಯದಿರುವುದು | ಕರೆಯುತ್ತಿರುವುದು | ಕರೆಯದಿರುವುದು | ಕರೆಯುತ್ತಿರುವುದು | ಕರೆಯದಿರುವುದು | — | — | — | — |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 |
| I ರಿಂದ XI | 7 | 26 | 12 | 6 | 648 | 1022 | 948 | 653 | 48 | 42 | 44 | 412 | 3602 | — |

### ಸಾಕುವ ಪಕ್ಷಿಗಳ ಸಂಖ್ಯೆ

| ವಾರ್ಡ್ ನಂಬ್ರ | ಹುಂಜ | ಹೇಂಟೆ | | ಬಾತುಕೋಳಿ | | ಇತರ |
|---|---|---|---|---|---|---|
| | | ಮೊಟ್ಟೆ ಇಡುವುದು | ಮೊಟ್ಟೆ ಇಡದಿರುವುದು | ಗಂಡು | ಹೆಣ್ಣು | |
| 1 | 2 | 3 | 4 | 5 | 6 | 7 |
| I ರಿಂದ XI | 512 | 980 | 2116 | 8 | 12 | 12 |

ಬದಿಯಡ್ಕ ಪಂಚಾಯತಿನ ಚರಿತ್ರೆಯ ಬಗ್ಗೆ ಅವಲೋಕಿಸಿದಾಗ ಹಿಂದಿನ ಕಾಲದ ಜನರು ಪಶು ಪಾಲನೆಯಲ್ಲಿ ತುಂಬಾ ಆಸಕ್ತಿ ವಹಿಸಿರುವುದು ಕಾಣಿಸುತ್ತದೆ. ಹಿಂದಿನ ಜನರ ದೈನಂದಿನ ಜೀವನದಲ್ಲಿ ಪಶುಗಳ ಅವಶ್ಯಕತೆ ಎದ್ದು ಕಾಣುತ್ತದೆ. ಅದರಲ್ಲೂ ಅವರು ಗೋವುಗಳನ್ನು ದೇವರ ಪ್ರತಿರೂಪವಾಗಿ ಕಾಣುತ್ತಿದ್ದರು. ದೀಪಾವಳಿ ದಿನಗಳಲ್ಲಿ ಗೋಮಾತೆಯನ್ನು ಪೂಜಿಸುತ್ತಿದ್ದುದು ಇದಕ್ಕೆ ಉದಾಹರಣೆಯಾಗಿದೆ. ಹಿಂದಿನ ದಿನಗಳಲ್ಲಿ ಸಣ್ಣ ಲೋಟಗಳಲ್ಲಿ ಹಾಲನ್ನು ಕರೆಯುವುದನ್ನು ಈಗಲೂ ಕೆಲವು ಹಿರಿಯರು ನೆನಪಿಸಿಕೊಳ್ಳುತ್ತಿದ್ದಾರೆ. ಆ ಕಾಲದಲ್ಲಿ ಕೃಷಿ ಕೆಲಸಕ್ಕಾಗಿಯೂ, ಗೊಬ್ಬರಕ್ಕಾಗಿಯೂ, ಸಾಗಾಟಕ್ಕಾಗಿ ಹಾಗೂ ಮನೆಗೆ ಅವಶ್ಯವಿರುವ ಅಲ್ಪ ಹಾಲಿಗಾಗಿಯೂ ಪಶುಗಳನ್ನು ಸಾಕುತ್ತಿದ್ದರು. ಒಂದು ಮನೆಯಲ್ಲಿ ನೂರಾರು ಜಾನುವಾರುಗಳನ್ನು ಗುಡ್ಡೆಗೆ ಹಾಗೂ ಕಾಡಿಗೆ ಮೇಯಲು ಬಿಟ್ಟು ಸಾಕುವ ಸಂಪ್ರದಾಯ ಆ ಕಾಲದಲ್ಲಿತ್ತು. ಆಧುನಿಕ ಚಿಕಿತ್ಸೆ ಹಾಗೂ ರೋಗ ಪ್ರತಿರೋಧಕ ಚುಚ್ಚು ಮದ್ದುಗಳ ಅಭಾವದಿಂದ ವಿವಿಧ ಸಾಂಕ್ರಾಮಿಕ ರೋಗಗಳಿಂದ ಜಾನುವಾರುಗಳು ನಶಿಸಿ ಕೃಷಿಕರಿಗಾದ ಕಷ್ಟ ನಷ್ಟಗಳನ್ನು ಈಗಲೂ ಹಿರಿಯರು ನೆನೆಸಿಕೊಳ್ಳುತ್ತಿದ್ದಾರೆ. ಒಂದೆರಡು ದಶಕಗಳ ಹಿಂದಿನ ವರೆಗೆ ಇದ್ದ ಈ ಅವಸ್ಥೆಯು ಪಶುಪಾಲನಾ ಇಲಾಖೆಯ ಸಮಗ್ರ ಜಾನುವಾರು ಅಭಿವೃದ್ಧಿ ಪದ್ಧತಿಯಿಂದ ಅಲ್ಪಕಾಲದಲ್ಲಿ ಈಗಿನ ಸ್ಥಿತಿಗೆ ಕೊಂಡುಬರಲು ಸಾಧ್ಯವಾಯಿತು. ಅಲ್ಪ ಸ್ವಲ್ಪ ಹಾಲು ಉತ್ಪಾದಿಸುವ ಊರ ದನಗಳು ಅಧಿಕ ಹಾಲನ್ನು ಉತ್ಪಾದಿಸುವ ಕಾಮಧೇನುಗಳಾಗಿ ಬದಲಾಯಿಸಲ್ಪಟ್ಟವು. ಮೇಯಲು ಗುಡ್ಡೆಗಳು ಕಡಿಮೆಯಾದುದರಿಂದ ಕೃಷಿಕರು ದನಗಳನ್ನು ಕಟ್ಟಿ ಹಾಕಿ ಸಾಕುವಂತಾಯಿತು. ಹಾಲು ಉತ್ಪಾದನೆಯು ಅಲ್ಪ ಕಾಲದಲ್ಲಿ ಹತ್ತರಷ್ಟಾಗಿ ವೃದ್ಧಿಯಾಯಿತು. ಅದರಂತೆಯೇ ಕೋಳಿ ಸಾಕಣೆಯಲ್ಲಿ ಈ ಪಂಚಾಯತು ತುಂಬಾ ಪ್ರಗತಿ ಸಾಧಿಸಿದೆ. ವರ್ಷದಲ್ಲಿ ಇನ್ನೂರು ಮೊಟ್ಟೆಗಳಿಗಿಂತ ಹೆಚ್ಚು ಮೊಟ್ಟೆ ಇಡುವ ಕೋಳಿಗಳ ವಿತರಣೆಯಿಂದ ಮೊಟ್ಟೆ ಉತ್ಪಾದನೆಯು ಹೆಚ್ಚಿದೆ. ಮಾಂಸದ ಕೋಳಿಗಳ ಹೊಸ ಹೊಸ ತಳಿಗಳು ಬಂದುದರಿಂದ ಮಾಂಸ ಉತ್ಪಾದನೆಯಲ್ಲೂ, ಮಾರಾಟದಲ್ಲೂ ಅಧಿಕ ಅಭಿವೃದ್ಧಿ ಸಾಧ್ಯವಾಗಿದೆ. ಹೆಚ್ಚು ಹೆಚ್ಚು ಉದ್ಯೋಗ ಸೃಷ್ಟಿಸಲು ಹಾಗೂ ಶುದ್ಧವಾದ ಮಾಂಸದ ಪೂರೈಕೆ ಮಾಡಲು ಇದರಿಂದ ಸಾಧ್ಯವಾಯಿತು ಹಾಗೂ ಈ ವೃತ್ತಿಯು ಕೃಷಿಕರಿಗೆ ಹೆಚ್ಚು ಲಾಭದಾಯಕವಾಯಿತು. ಆಧುನಿಕ ಚಿಕಿತ್ಸೆ ಲಭ್ಯವಾದುದರಿಂದ ಕಾಲು ಬಾಯಿ ಜ್ವರ, ಗಂಟಲು ನೋವು, ದೊಡ್ಡ ರೋಗ ಮುಂತಾದ ರೋಗಗಳನ್ನು ಕಡಿಮೆ ಮಾಡಲು ಸಾಧ್ಯವಾಯಿತು. ಪಶುಗಳಿಗೆ ಇನ್ಶೂರೆನ್ಸ್ (ವಿಮೆ) ಪದ್ಧತಿ ಪ್ರಾರಂಭವಾದುದರಿಂದ, ಆಕಸ್ಮಿಕ ಸಾವಿನಿಂದಾಗಿ ರೈತರಿಗಾಗುವ ಕಷ್ಟ ನಷ್ಟಗಳಿಗೆ ಮುಕ್ತಿ ದೊರೆಯಿತು. ಜನರನ್ನು ನಿರಂತರವಾಗಿ ಭಯ ಭೀತರನ್ನಾಗಿಸುವ ಹುಚ್ಚು ನಾಯಿ ರೋಗದ ಭೀತಿಯನ್ನು ಸಮಗ್ರ ಹುಚ್ಚು ನಾಯಿ ನಿಯಂತ್ರಣ ಕಾರ್ಯಕ್ರಮ ತೊಡಗಿದಂದಿನಿಂದ ಒಂದು ಹಂತದವರೆಗೆ ತಡೆಯಲು ಸಾಧ್ಯವಾಯಿತು. ಈ ಕಾರ್ಯಕ್ರಮದ ಅಂಗವಾಗಿ ಕಳೆದ ವರ್ಷ (1995-96) ಪಂಚಾಯತಿನಲ್ಲಿ 28 ಹುಚ್ಚು ನಾಯಿ ರೋಗ ನಿಯಂತ್ರಣ ಕ್ಯಾಂಪ್‌ಗಳನ್ನು ನಡೆಸಿ 2504 ಸಾಕು ನಾಯಿಗಳಿಗೆ ರೋಗ ಪ್ರತಿರೋಧಕ ಚುಚ್ಚು ಮದ್ದು ಕೊಡಿಸಲು ಸಾಧ್ಯವಾಯಿತು. ಹಾಗೂ ಈ ರೋಗದ ಭೀತಿಗೆ ಕಡಿವಾಣ ಹಾಕಲು ಸಾಧ್ಯವಾಯಿತು. ಇದಲ್ಲದೆ ಪಂಚಾಯತಿನ ವಿವಿಧ ಕೇಂದ್ರಗಳಲ್ಲಿ ತರಬೇತಿ ಶಿಬಿರ, ಬಂಜೆತನ ನಿವಾರಣಾ ಶಿಬಿರ, ಚರ್ಚಾ ಗೋಷ್ಠಿ ಹಾಗೂ ವಿಚಾರ ಸಂಕೀರ್ಣ ನಡೆಸಲಾಯಿತು.

## ರೋಗ ವಿವರಗಳು

| ಕ್ರಮ ಸಂಖ್ಯ | ರೋಗಗಳು | ದನ | ಎಮ್ಮೆ | ಆಡು | ಹಂದಿ | ನಾಯಿ | ಕೋಳಿ | ಬಾತು ಕೋಳಿ | ಬೆಕ್ಕು | ಆನೆ | ಇತರ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 | ಜೀರ್ಣ ಕ್ರಿಯೆಗೆ ಸಂಬಂಧಿಸಿದವು Digestive disorders | 542 | 28 | 48 | - | 301 | 1201 | - | 4 | - | 8 |
| 2 | ಶ್ವಾಸಕೋಶ ಸಂಬಂಧ Respiratory diseases | 68 | 3 | 8 | - | 48 | 8 | - | 1 | - | - |
| 3 | Metabolic diseases | 204 | 6 | 2 | - | 4 | - | - | - | - | - |
| 4 | ಧಾತು ಲವಣಗಳ ಕೊರತೆ Deficiency diseases | 641 | 12 | 28 | - | 262 | 111 | - | 3 | - | - |
| 5 | ಚರ್ಮ ರೋಗಗಳು Skin diseases | 948 | 4 | 2 | - | 301 | - | - | - | - | |
| 6 | ಪರಾವಲಂಬಿ ಜೀವಿಗಳಿಂದ ಬರುವ ರೋಗ parrasitic diseases | 1012 | 18 | 162 | - | 842 | 948 | - | 12 | - | - |
| 7 | ಪ್ರತ್ಯುತ್ಪಾದನಾ ವ್ಯವಸ್ಥೆಗೆ ಸಂಬಂಧಿಸಿದುವು Gynacological disorders | 348 | 12 | 48 | - | 98 | - | - | - | - | - |
| 8 | ಬಂಜೆತನ Infertility | 18 | 4 | 12 | - | 20 | - | - | - | - | - |
| 9 | ಕಾಲು ಬಾಯಿ ರೋಗ Mastitise | 78 | 4 | 8 | - | 2 | - | - | - | - | - |
| 10 | Ephemeral Fever | 648 | 18 | - | - | - | - | - | - | - | - |
| 11 | ಸಾಂಕ್ರಾಮಿಕ ರೋಗಗಳು | 12 | - | - | - | - | 688 | - | - | - | - |

ರ್ಯಾಬಿಸ್ (Rabis) ರೋಗ ಪ್ರತಿರೋಧವೂ ಚಿಕಿತ್ಸೆಯೂ

| ವಿವರ | ದನ | ಎಮ್ಮೆ | ಆಡು | ನಾಯಿ | ಬೆಕ್ಕು | ಇತರ |
|---|---|---|---|---|---|---|
| ಪ್ರತಿರೋಧ ಚುಚ್ಚು ಮದ್ದು ನೀಡಿದವುಗಳ ಸಂಖ್ಯೆ | 6 | - | 2 | 2504 | 2 | - |
| ಕಡಿತಕ್ಕೊಳಗಾದ ಮೇಲೆ ಚುಚ್ಚುಮದ್ದನ್ನು ಪಡೆದವುಗಳ ಸಂಖ್ಯೆ | 12 | - | 4 | 8 | - | - |

ಜಾನುವಾರುಗಳಿಗೆ ಚಿಕಿತ್ಸಾ ಸೌಲಭ್ಯದ ಕುರಿತು ಅವಲೋಕಿಸಿದಾಗ ದಶಕಗಳ ಹಿಂದೆ ಬದಿಯಡ್ಕ ಪಂಚಾಯತಿನಲ್ಲಿ ಈ ಸೌಲಭ್ಯ ದೊರೆಯಲು ಪ್ರಾರಂಭವಾಯಿತು. ಕೇರಳ ರಾಜ್ಯ ರೂಪೀಕೃತವಾದೊಡನೆ ಈ ಪಂಚಾಯತಿನಲ್ಲಿ ( 1958ರಲ್ಲಿ) ಪಶು ಸಂಗೋಪನಾ ಇಲಾಖೆಯ ಸಂಸ್ಥೆ "ಟೂರಿಂಗ್ ಬಿಲ್ಲೆಟ್" ಎಂಬುದಾಗಿ ಪ್ರಾರಂಭವಾಯಿತು. ನಂತರ ಈ ಸಂಸ್ಥೆ ಹಂತ ಹಂತವಾಗಿ ಬೆಳೆದು "ವೆಟರ್ನರಿ ಡಿಸ್ಪೆನ್ಸರಿ"ಯಾಗಿ 1987ರಲ್ಲಿ 'ಬೋಳುಕಟ್ಟೆ' ಎಂಬಲ್ಲಿ ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸಲು ಪ್ರಾರಂಭಿಸಿತು. ಚಿಕಿತ್ಸಾ ರಂಗದಲ್ಲಿಯೂ,, ವಿಜ್ಞಾನ ಪ್ರಸರಣ ರಂಗದಲ್ಲಿಯೂ 39 ವರ್ಷಗಳ ಕಾರ್ಯ ನಿರ್ವಹಣಾ ಹಿನ್ನೆಲೆ ಇರುವ ಈ ಪಂಚಾಯತಿನಲ್ಲಿರುವ ಏಕಮಾತ್ರ ಸರಕಾರೀ ಪಶು ಸಂಗೋಪನಾ ಸಂಸ್ಥೆ ಬೋಳು ಕಟ್ಟೆಯಲ್ಲಿರುವ ವೆಟರ್ನರಿ ಡಿಸ್ಪೆನ್ಸರಿಯಾಗಿದೆ. ಬದಿಯಡ್ಕ ಪೇಟೆಯಿಂದ ಒಂದು ಕಿಲೋಮೀಟರ್ ದೂರದಲ್ಲಿ ನಿರ್ಜನ ಪ್ರದೇಶದಲ್ಲಿ ಈ ವೆಟರ್ನರಿ ಡಿಸ್ಪೆನ್ಸರಿಯನ್ನು ಪ್ರಾರಂಭಿಸುವುದರಿಂದ ಅಲ್ಲಿಯವರೆಗೆ ಹೋಗಲು ಹಾಗೂ ಅದರ ಸಂಪೂರ್ಣ ಉಪಯೋಗ ಪಡೆಯಲು ಜನರು ಈಗಲೂ ಕಷ್ಟ ಪಡುತ್ತಿದ್ದಾರೆ. ಸರಕಾರೀ ಪಶು ಚಿಕಿತ್ಸಾಲಯವಲ್ಲದೆ ಪಂಚಾಯತಿನಲ್ಲಿ ಖಾಸಗಿ ರಂಗದ ಎರಡು ಚಿಕಿತ್ಸಾಲಯಗಳು ಕಾರ್ಯ ನಿರ್ವಹಿಸುತ್ತಿವೆ.

ಈಗಿರುವ ಸರಕಾರಿ ಪಶು ಚಿಕಿತ್ಸಾಲಯದ ಕಟ್ಟಡವು ಸೋರುವುದರಿಂದ ಮದ್ದು ಹಾಗೂ ಕಡತ (File)ಗಳನ್ನಿಡಲು ಕಷ್ಟವಾಗುತ್ತಿದೆ. ಅತ್ಯಾವಶ್ಯಕವಾದ ಮದ್ದುಗಳು, ಪೀಠೋಪಕರಣಗಳು, ಲ್ಯಾಬೋರೋಟರಿ, ಶಸ್ತ್ರ ಚಿಕಿತ್ಸಾ ಕೊಠಡಿ, ಕೃಷಿಕರಿಗೆ ತರಬೇತಿ ನೀಡಲು ಬೇಕಾದ ಕೊಠಡಿ, ರೆಫ್ರಿಜರೇಟರ್, ಸ್ಟೆಬಿಲೈಸರ್, ದೂರವಾಣಿ ಸೌಕರ್ಯಗಳು ಈ ಆಸ್ಪತ್ರೆಯಲ್ಲಿ ಇಲ್ಲದಿರುವುದರಿಂದ ಒಳ್ಳೆಯ ಸೇವೆಯನ್ನೀಯಲು ಸಾಧ್ಯವಾಗುವುದಿಲ್ಲ. ವಾಹನ ಸೌಕರ್ಯ ಇಲ್ಲದಿರುವುದರಿಂದ ದುರ್ಗಮವಾದ ಎಲ್ಲಾ ಸ್ಥಳಗಳಿಗೂ ವಾರ್ಡುಗಳಿಗೂ ಹೋಗಿ 'ಕ್ಯಾಂಪ್ ಡಿಸ್ಪೆನ್ಸರಿ', ಬಂಜೆತನ ನಿವಾರಣಾ ಶಿಬಿರ, ರೋಗ ಪ್ರತಿರೋಧಕ ಚುಚ್ಚು ಮದ್ದು ಶಿಬಿರ, ತರಬೇತಿ ಶಿಬಿರ, ಚಿಕಿತ್ಸಾ ಶಿಬಿರ, ಮುಂತಾದವುಗಳನ್ನು ನಡೆಸಲು ಕಷ್ಟವಾಗುತ್ತದೆ. ಹಾಗಿದ್ದರೂ ಆಸ್ಪತ್ರೆಯಲ್ಲಿ ಚಿಕಿತ್ಸೆ, ಕೃಷಿಕರಿಗೆ ತರಬೇತಿ, ಕೃತಕ ಗರ್ಭಧಾರಣೆ, ಬಂಜೆತನ ನಿವಾರಣೆ, ಹುಚ್ಚು ನಾಯಿ ರೋಗದ ನಿವಾರಣೆಗಾಗಿ ರೋಗ ಪ್ರತಿರೋಧಕ ಚುಚ್ಚುಮದ್ದು ಮುಂತಾದ ಸೇವೆಗಳನ್ನು ಒದಗಿಸುತ್ತಿದ್ದಾರೆ.

ಕೃತಕ ಗರ್ಭಧಾರಣೆ ವಿಷಯಗಳು

| ಸಾಕು ಪ್ರಾಣಿಗಳ ವಿಧ | ಒಟ್ಟು ಸಂಖ್ಯೆ | ಕೃತ್ರಿಮ ಗರ್ಭಧಾರಣೆ ನಡೆಸಿದವುಗಳು | ಗರ್ಭಧಾರಣೆಗಾಗಿ ಎರಡಕ್ಕಿಂತ ಹೆಚ್ಚು ಬಾರಿ ಬೀಜ ಸಂಕಲನವನ್ನು ನಡೆಸಬೇಕಾಗಿ ಬಂದವುಗಳು |
|---|---|---|---|
| ದನ | 2181 | 1302 | 352 |
| ಗಡಸು | 1090 | 502 | 102 |
| ಎಮ್ಮೆ | 90 | 32 | 8 |

ಈ ಮೇಲೆ ಕಾಣಿಸಿದ ಹಲವು ಅಭಿವೃದ್ಧಿ ಕಾರ್ಯಕ್ರಮಗಳು ಈ ಪಂಚಾಯತಿನಲ್ಲಿ ನಡೆದಿದ್ದರೂ ಕೃಷಿಕರಿಗೆ ಹಲವು ಸಮಸ್ಯೆಗಳಿವೆ. ಅವುಗಳಲ್ಲಿ ಪ್ರಾಮುಖ್ಯವಾದುವುಗಳೆಂದರೆ

1. ಪಶು ಆಹಾರ ಮತ್ತು ಮೇವಿನ ಹುಲ್ಲಿನ ಅನಿಯಂತ್ರಿತ ಬೆಲೆ ಏರಿಕೆ ಹಾಗೂ ಪಶು ಆಹಾರದ ಗುಣ ಮಟ್ಟದಲ್ಲಿ ಇಳಿಕೆ.

2. ಹಾಲಿನ ಉತ್ಪಾದನಾ ವೆಚ್ಚ ಹೆಚ್ಚಿದೆ. ಆದರೆ ಅದಕ್ಕನುಗುಣವಾಗಿ ಹಾಲಿನ ಬೆಲೆ ಹೆಚ್ಚಾಗಲಿಲ್ಲ.
3. ಹಾಲು ಉತ್ಪಾದಕರಿಂದ ಖರೀದಿಸಿ ಮಾರಾಟ ಮಾಡುವ ಸಮಗ್ರ ವ್ಯವಸ್ಥೆ ಇಲ್ಲ.
4. ಬೇಂಕುಗಳಿಂದ ಸಾಲ ಸೌಲಭ್ಯದ ಕೊರತೆ.
5. ಇನ್ಶೂರೆನ್ಸ್ ಸೌಲಭ್ಯದ ಕೊರತೆ, ಮೇವಿನ ಹುಲ್ಲಿನ ಕೊರತೆಗಳು ಹಾಲು ಉತ್ಪಾದನೆಗೆ ತಡೆಯುಂಟು ಮಾಡುತ್ತಿದೆ.
6. ಅಶಾಸ್ತ್ರೀಯವಾದ ಮಾಂಸ ಉತ್ಪಾದನೆ ಹಾಗೂ ಮಾರಾಟದ ರೀತಿಗಳು ಮತ್ತೊಂದು ಪ್ರಧಾನ ಸಮಸ್ಯೆಯಾಗಿದೆ.
7. ಹುಚ್ಚು ನಾಯಿ ರೋಗ ನಿಯಂತ್ರಣದ ಕಾರ್ಯಕ್ರಮದಲ್ಲಿ ಸಾಕಷ್ಟು ಚುಚ್ಚು ಮದ್ದು ಸಬ್ಸಿಡಿ ದರದಲ್ಲಿ ಸಿಗದೇ ಇರುವುದು, ಲೆಸನ್ಸನ್ನು ಕಡ್ಡಾಯ ಮಾಡದಿರುವುದು ಹಾಗೂ ಬೀದಿ ನಾಯಿಗಳನ್ನು ನಾಶಮಾಡದೆ ಇರುವುದು ಪ್ರಧಾನ ಹಿನ್ನಡೆಯಾಗಿದೆ.
8. ಕೃಷಿಕರ ಆವಶ್ಯಕತೆಗನುಸಾರವಾಗಿ ಅತಿ ಉತ್ಪಾದನಾ ಶಕ್ತಿಯಿರುವ ಉತ್ತಮ ತಳಿಯ ಕೋಳಿಗಳು, ಮಲಬಾರಿ ಆಡುಗಳು ಲಭಿಸುತ್ತಿಲ್ಲ.
9. ಪಶು ಚಿಕಿತ್ಸಾ ರಂಗದಲ್ಲಿ ಕಾಲಕ್ಕನುಸಾರವಾಗಿ ಆವಶ್ಯಕ ಸೌಕರ್ಯಗಳು ಇಲ್ಲದಿರುವ ಪಶು ಚಿಕಿತ್ಸಾಲಯ, ಪಂಚಾಯತಿನ ವಿವಿಧ ಭಾಗಗಳಲ್ಲಿ ಕೃತಕ ಗರ್ಭಧಾರಣಾ ಕೇಂದ್ರಗಳ ಅಭಾವ, ವಿಜ್ಞಾನದ ಪರಿಜ್ಞಾನವಿಲ್ಲದವರಿಂದ ಚಿಕಿತ್ಸೆ ಮುಂತಾದವುಗಳು ಸಮಸ್ಯೆಗಳಾಗಿವೆ.

## ಸಮಸ್ಯೆಗಳ ಪರಿಹಾರೋಪಾಯಗಳು

I *ಹಾಲು ಉತ್ಪಾದನಾ ರಂಗ:*

A. ಸಣ್ಣ ರೈತರು, ಅತಿ ಸಣ್ಣ ರೈತರು ಹಾಗೂ ಕೃಷಿ ಕೂಲಿಗಾರರನ್ನು ಹೈನುಗಾರಿಕೆಯತ್ತ ಆಕರ್ಷಿಸಲು ವಾರ್ಡ್‌ಗಳಲ್ಲಿ ಕೃಷಿಕರಿಗೆ ಸಬ್ಸಿಡಿ ದರದಲ್ಲಿ ಮಿಶ್ರತಳಿ ಹಸುಗಳನ್ನು ಮತ್ತು ಅವುಗಳಿಗೆ ಬೇಕಾಗುವ ಆಹಾರವನ್ನು ಪೂರೈಸುವುದು.

B. Sc. ಮತ್ತು ST ಕಾಲೋನಿಗಳಲ್ಲಿನ ಜನರ ಜೀವನ ಮಟ್ಟ ಹೆಚ್ಚಿಸಲು ಆಯ್ದ ಕುಟುಂಬದವರಿಗೆ ಆಡು, ಕೋಳಿ, ಪಶುಗಳನ್ನು ವಿತರಿಸುವುದು.

C. ಪಶು ಆಹಾರದ ಯೂನಿಟ್ ಸ್ಥಾಪಿಸುವುದು.

D. ಕರು ಸಾಕಣಾ ಪದ್ಧತಿಯನ್ನು ಎಲ್ಲಾ ಮಿಶ್ರ ತಳಿ ಕರುಗಳನ್ನು ಸೇರಿಸಿ ನಡೆಸುವುದು.

E. ಹಾಲು ಸಂಗ್ರಹಣೆ ಹಾಗೂ ವಿತರಣಾ ಪದ್ಧತಿಯನ್ನು ಸಹಕಾರಿ ಸಂಘ ಪ್ರಾರಂಭಿಸಿ ಅದರ ಮೂಲಕ ನಡೆಸುವುದು.

F. ಹಾಲು ಉತ್ಪಾದನೆ ಹಾಗೂ ಉಪಯೋಗ ಹೆಚ್ಚಿಸಲು ಬೇಕಾಗುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

G. ಗೃಹಿಣಿಯರು ಹಾಗೂ ವಿದ್ಯಾರ್ಥಿಗಳು ಬಿಡುವು ಸಮಯವನ್ನು ಫಲಪ್ರದವಾಗಿ ಉಪಯೋಗಿಸುವಂತಹ ಪದ್ಧತಿಗಳನ್ನು ಆವಿಷ್ಕರಿಸುವುದು.

H. ಮೇವಿನ ಹುಲ್ಲಿನ ಕೃಷಿಯನ್ನು ವ್ಯಾಪಕವಾಗಿ ನೆಲೆಸುವಂತೆ ಮಾಡುವ ಪದ್ಧತಿಗಳನ್ನು ತಯಾರಿಸುವುದು.

I. ದನದ ಹಟ್ಟಿಯನ್ನು ನಿರ್ಮಿಸಲು ಸಹಾಯಧನದ ಪದ್ಧತಿ ತಯಾರಿಸುವುದು.

**II** ***ಮೊಟ್ಟೆ ಉತ್ಪಾದನೆ :***

A. ಅತ್ಯುತ್ಪಾದನಾ ಸಾಮರ್ಥ್ಯವಿರುವ ಕೋಳಿಗಳನ್ನು ವಿತರಿಸುವುದು.

B. ಕೋಳಿ ಮರಿಗಳನ್ನು ಬೆಳೆಸುವ ನರ್ಸರಿಗಳನ್ನು ವಿವಿಧ ವಾರ್ಡ್‌ಗಳಲ್ಲಿ ಸ್ಥಾಪಿಸುವುದು.

C. ಹಿತ್ತಲಿನಲ್ಲಿ ಕೋಳಿ ಬೆಳೆಸುವ ಪದ್ಧತಿಯನ್ನು ಪ್ರೋತ್ಸಾಹಿಸುವುದು.

D. "ಸ್ಕೂಲ್ ಪೌಲ್ಟ್ರಿ ಕ್ಲಬ್" ಪ್ರಾರಂಭಿಸುವುದು.

**III** ***ಮಾಂಸದ ಉತ್ಪಾಆದನೆ :***

A. ಮಾಂಸದ ಕೋಳಿ ಉತ್ಪಾದನೆ ಹೆಚ್ಚಿಸಲು ಪದ್ಧತಿಗಳನ್ನು ತಯಾರಿಸುವುದು.

B. ಆಡು ಸಾಕಣೆಯ ಪದ್ಧತಿಯನ್ನು ತಯಾರಿಸುವುದು.

C. ವಿದೇಶಿ ತಳಿಯ ಹಂದಿಗಳನ್ನು ಸಬ್ಸಿಡಿ ದರದಲ್ಲಿ ವಿತರಿಸುವುದು.

D. ಶಾಸ್ತ್ರೀಯವಾದ ಮಾಂಸದ ಉತ್ಪಾದನೆಗಾಗಿ ಕಸಾಯಿಖಾನೆಗಳನ್ನು ಸ್ಥಾಪಿಸುವುದು, ಹಾಗೂ ಉತ್ಪಾದನೆಯ ಮೊದಲು ಹಾಗೂ ನಂತರದ ಮಾಂಸದ ಪರಿಶೋಧನೆಗೆ ನಿಬಂಧ ಹೇರುವುದು.

**IV** ***ಸೇವಾ ವಿಭಾಗ (Service Sector) :***

A. ಪಂಚಾಯತಿನ ವಿವಿಧ ವಾರ್ಡ್‌ಗಳಲ್ಲಿ ವಿವಿಧ ಕೃತಕ ಗರ್ಭಧಾರಣಾ ಕೇದ್ರಗಳನ್ನು ಸ್ಥಾಪಿಸುವುದು.

B. ಪಶು ಚಿಕಿತ್ಸಾಲಯದಲ್ಲಿರುವ ನ್ಯೂನತೆಗಳನ್ನು ಒಂದೊಂದಾಗಿ ಪರಿಹರಿಸುವುದು.

C. ಸಂಚಾರೀ ಪಶು ಚಿಕಿತ್ಸಾಲಯವನ್ನು ಸ್ಥಾಪಿಸುವುದು.

D. ಪಶು ಸಂಗೋಪನೆಯಲ್ಲಿ ತರಬೇತಿ ನೀಡಲು ಬೇಕಾಗುವ ಎಲ್ಲಾ ಸೌಕರ್ಯಗಳನ್ನು ಏರ್ಪಡಿಸುವುದು.

E. ಹುಚ್ಚುನಾಯಿ ರೋಗದ ನಿಯಂತ್ರಣಕ್ಕೆ ಬೇಕಾಗುವ ಸಮಗ್ರವಾದ ಪದ್ಧತಿಯನ್ನು ರೂಪೀಕರಿಸುವುದು.

F. ಚಿಕಿತ್ಸೆಯನ್ನು ರಿಜಿಸ್ಟ್ರೇಶನ್ ಇರುವವರು ಮಾತ್ರ ಮಾಡುವಂತೆ ನೋಡಿಕೊಳ್ಳಲಾಗುವುದು.

ಬದಿಯಡ್ಕ ಪಂಚಾಯತಿನ ವಾರ್ಡ್‌ಗಳಲ್ಲಿ ಗ್ರಾಮ ಸಭೆಗಳನ್ನು ನಡೆಸಿದಾಗ ಕೆಳಗೆ ಕಾಣಿಸಿದ ಆವಶ್ಯಕತೆಗಳನ್ನು ಕೇಳಿಕೊಳ್ಳಲಾಯಿತು.

*1)* ***ಮೃಗ ಸಂರಕ್ಷಣಾ ಕೇಂದ್ರದ ಘಟಕ ಸ್ಥಾಪಿಸಬೇಕಾದ ಸ್ಥಳಗಳು :***
**ಕಿಳಿಂಗಾರು, ಪಳ್ಳತ್ತಡ್ಕ, ಚೆಡೆಕಲ್ಲು, ಬೇಳ, ಮಾನ್ಯ, ಕನ್ನೆಪ್ಪಾಡಿ, ಪೆಲಮುಂಡ, ಚೆನ್ನೆಗುಳಿ, ವಿದ್ಯಾಗಿರಿ, ನೀರ್ಚಾಲ್**

*2)* ***ಕೋಳಿ ಸಾಕಣಾ ಕೇಂದ್ರ :*** ಕಿಳಿಂಗಾರು, ಚೋಡಿಕ್ಕಾನ, ಮಾನ್ಯ, ಕಾಡಂಬಳ, ಕಾರ್ಮಾಡು, ಕನ್ನೆಪ್ಪಾಡಿ, ಚೆನ್ನೆಗುಳಿ, ವಿದ್ಯಾಗಿರಿ

*3)* ***ಮಿಲ್ಕ್ ಸೊಸೈಟಿ :*** ಪಳ್ಳತ್ತಡ್ಕ, ಚೆಡೆಕಲ್ಲು, ಬದಿಯಡ್ಕ, ವಿದ್ಯಾಗಿರಿ, ಮಾನ್ಯ, ಕಡಂಬಳ, ಚೆನ್ನೆಗುಳಿ, ಕನ್ನೆಪ್ಪಾಡಿ

*4)* ***ಹಂದಿ ಸಾಕಣಾ ಕೇಂದ್ರ :*** ಬೈಕುಂಜ, ಕನ್ನೆಪ್ಪಾಡಿ

5) **ಚಿರ್ಕೂಡ್ಲು ಮಳಿ ಎಂಬಲ್ಲಿ ಆಳವಾದ ಕಂದಕವಿರುವುದರಿಂದಾಗಿ ದನಗಳಿಗೆ ಬರುವ ಅಪಾಯವನ್ನು ತಪ್ಪಿಸಲು ತಡೆಗೋಡೆ ನಿರ್ಮಾಣ.**

## ಮೀನುಗಾರಿಕೆ :

**ಈ ಪಂಚಾಯತು ಕ್ಷೇತ್ರದಲ್ಲಿ ನೀರಿನ ಅಭಾವವು ಅತಿಯಾಗಿ ಇರುವುದರಿಂದ ಮೀನುಗಾರಿಕೆಗೆ ಅವಕಾಶವು ಅತ್ಯಲ್ಪ. ಆದರೂ ಕೊಳಗಳಲ್ಲಿ ಮೀನು ಸಾಕುವವರಿಗೆ ಅಗತ್ಯವಾದ ಅನುಕೂಲತೆಗಳನ್ನು ಒದಗಿಸಬೇಕು.**

| ವಾರ್ಡ್ ನಂಬ್ರ | ಕಡಲು ಮತ್ಸ್ಯ (ಮೀನು) | | | | | ಒಳನಾಡ ಮೀನು | | ಮೀನುಗಾರಿಕಾ ಉಪಕರಣಗಳು | | |
|---|---|---|---|---|---|---|---|---|---|---|
| | ಮೀನುಗಾರಿಕಾ ಕಾರ್ಮಿಕರು | | ಇತರ ಕಾರ್ಮಿಕರು | | | | | | | |
| | ಮುಖ್ಯ ವೃತ್ತಿ | ಭಾಗಿಕ ವೃತ್ತಿ | ಮೀನು ವ್ಯಾಪಾರ | ಬಲೆ ಯನ್ನು ಸರಿಪಡಿಸು ವುದು | ಮೀನು ಸಂಸ್ಕರಣೆ | ವಿಸ್ತೀರ್ಣ | ಕೃಷಿಕರ ಸಂಖ್ಯೆ | ಯಾಂತ್ರಿಕೃತ ಬೋಟುಗಳು | ಯಂತ್ರ ಅಳವಡಿಸಲಾದ ನಾಡ ದೋಣಿಗಳು | ಯಂತ್ರ ಅಳವಡಿಸ ಲಾಗದ ನಾಡ ದೋಣಿಗಳು |
| 1 | 2 | 3 | 4 | 5 | 6 | 7 | 8 | 9 | 10 | 11 |
| 1ರಿಂದ XI | — | — | 4 | — | — | — | — | – | – | — |

# ವಿದ್ಯಾಭ್ಯಾಸ

ವಿದ್ಯಾಭ್ಯಾಸ ಕ್ಷೇತದಲ್ಲಿ ವಿಫುಲ ಅನುಭವಿಗಳಿರುವ ಪಂಚಾಯತು ಇದಾಗಿದೆ. ಹಿಂದಿನ ಕಾಲದಲ್ಲಿ ವಿದ್ಯಾಭ್ಯಾಸಕ್ಕಾಗಿ ಮನೆ ಮನೆಗಳಲ್ಲಿ 'ಗುರುಕುಲ' ಶಿಕ್ಷಣ ಪದ್ಧತಿ ವ್ಯವಸ್ಥೆಯಲ್ಲಿತ್ತು. ಆಮೇಲೆ ಅಭಿವೃದ್ಧಿ ಪಥದಲ್ಲಿ ಮುಂದುವರಿದಂತೆ ಕೆಲವು ಕಡೆ ಆಧುನಿಕ ಶಿಕ್ಷಣ ಸಂಸ್ಥೆಗಳು ಸ್ಥಾಪಿಸಲ್ಪಟ್ಟವು. ಈ ಪಂಚಾಯತಿನಲ್ಲಿ 1911ರಲ್ಲಿ ಒಂದು ವಿದ್ಯಾಲಯವು ಪೆರಡಾಲದಲ್ಲಿ ಸ್ಥಾಪಿಸಲ್ಪಟ್ಟಿತು. 1913ರಲ್ಲಿ ಅಂಗಿಕಾರ ದೊರಕಿತು. 1919ರಲ್ಲಿ ಮಹಾಜನ ಸಂಸ್ಕೃತ ಮಹಾ ವಿದ್ಯಾಲಯ ನೀರ್ಚಾಲಿನಲ್ಲಿ ಸ್ಥಾಪಿಸಲ್ಪಟ್ಟಿತು. ಅದು ಈಗ ಮಹಾಜನ ಸಂಸ್ಕೃತ ಕಾಲೇಜು ಹೈಸ್ಕೂಲಾಗಿ ಪರಿವರ್ತನೆಗೊಂಡಿದೆ.

ಪ್ರಕೃತ ಈ ಪಂಚಾಯತಿನಲ್ಲಿ ಎರಡು ಹೈಸ್ಕೂಲುಗಳೂ, ಆರು ಯು. ಪಿ. ಶಾಲೆಗಳೂ, ಆರು ಎಲ್. ಪಿ. ಶಾಲೆಗಳೂ, ಮಾತ್ರವಲ್ಲದೆ ಅನುದಾನವಿಲ್ಲದ ನರ್ಸರಿ ಶಾಲೆಗಳೂ, ಆಂಗ್ಲ ಮಾಧ್ಯಮ ಶಾಲೆಗಳೂ ಇವೆ. ಪಂಚಾಯತಿನಲ್ಲಿ ಒಂದು ಯು.ಪಿ. ಮತ್ತು ಒಂದು ಎಲ್. ಪಿ. ಶಾಲೆಯು ಸರಕಾರಿ ಶಾಲೆಗಳಾಗಿರುತ್ತದೆ. ಈ ಶಾಲೆಗಳು ಕನ್ನಡ ಮಾಧ್ಯಮದಲ್ಲಿದ್ದರೂ ಕೆಲವು ಶಾಲೆಗಳಲ್ಲಿ ಮಲಯಾಳ ಮಾಧ್ಯಮವೂ, ಸಂಸ್ಕೃತ, ಉರ್ದು, ಅರಬಿ ಭಾಷೆಗಳನ್ನು ಕಲಿಸಲ್ಪಡುತ್ತವೆ. ಬದಿಯಡ್ಕದಲ್ಲಿ ಖಾಸಗೀ ಕ್ಷೇತ್ರದ ಆಂಗ್ಲ ಮಾಧ್ಯಮದ ಎರಡು ಎಲ್.ಪಿ. ಶಾಲೆಗಳು, ಎರಡು ಟೈಪ್‌ರೈಟಿಂಗ್ ಶಾಲೆಗಳು, ನೀರ್ಚಾಲಿನಲ್ಲಿ ವಾಣಿಜ್ಯ ತರಬೇತಿ ಶಾಲೆಯೂ, ಬದಿಯಡ್ಕ ಮೇಲಿನ ಪೇಟೆಯಲ್ಲಿ ನೂಜಿ ಕಾಂಪ್ಲೆಕ್ಸ್‌ನಲ್ಲಿ ಕಂಪ್ಯೂಟರ್ ಸಂಸ್ಥೆಯೂ ಕಾರ್ಯವೆಸಗುತ್ತಿವೆ. ಪಳ್ಳತ್ತಡ್ಕ, ಕುಡುಪಂಗುಯಿ ಮತ್ತು ಮಡತ್ತಡ್ಕಗಳಲ್ಲಿ ಜನವಿದ್ಯಾ ಕೇಂದ್ರಗಳು ಕಾರ್ಯವೆಸಗುತ್ತಿವೆ.

ಪ್ರಚಲಿತ ವರ್ಷ ಈ ಪಂಚಾಯತು ಕ್ಷೇತ್ರಕ್ಕೊಳಪಟ್ಟ ಎಲ್. ಪಿ. ವಿಭಾಗದಲ್ಲಿ 3074 ಮಕ್ಕಳೂ, ಯು. ಪಿ. ವಿಭಾಗದಲ್ಲಿ 2602 ಮಕ್ಕಳೂ ಮತ್ತು ಹೈಸ್ಕೂಲ್ ವಿಭಾಗದಲ್ಲಿ 1438 ಮಕ್ಕಳೂ ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

ಈ ಕೆಳಗಿನ ಪಟ್ಟಿಯು ಶಾಲೆಯ ಮತ್ತು ಮಕ್ಕಳ ಸಂಖ್ಯೆಗಳ ವಿವರವನ್ನು ಸೂಚಿಸುತ್ತದೆ.

| ಕ್ರಮ ಸಂಖ್ಯೆ | ಶಾಲೆಗಳ ಹೆಸರು | ಸ್ಥಾಪನೆ | ಆಢಳಿತ | ವಿದ್ಯಾರ್ಥಿಗಳು | | ಜುಮ್ಲಾ | ಅಧ್ಯಾಪಕರು | |
|---|---|---|---|---|---|---|---|---|
| | | | | ಹುಡುಗ | ಹುಡುಗಿ | | ಅವಶ್ಯಕತೆ | ಇರುವವರು |
| 1. | ಎ.ಎಲ್.ಪಿ. ಶಾಲೆ, ಕಿಳಿಂಗಾರು | 1932 | ಖಾಸಗಿ | 55 | 48 | 103 | 4 | 4 |
| 2. | ಎ.ಯು.ಪಿ. ಶಾಲೆ, ಕುಂಟಿಕಾನ | 1951 | ಖಾಸಗಿ | 168 | 200 | 368 | 15 | 15 |
| 3. | ಎಂ.ಎಸ್.ಸಿ. ಹೈಸ್ಕೂಲ್, ನೀರ್ಚಾಲ್ | 1911 | ಖಾಸಗಿ | 440 | 402 | 842 | 27 | 27 |
| 4. | ಎಂ.ಎಸ್.ಸಿ.ಎಲ್.ಪಿ. ಶಾಲೆ, ನೀರ್ಚಾಲ್ | 1911 | ಖಾಸಗಿ | 170 | 142 | 312 | 8 | 8 |
| 5. | ಎಸ್.ಎಸ್.ಪಿ.ಎ.ಎಲ್.ಪಿ. ಶಾಲೆ, ಉದಯಗಿರಿ | 1964 | ಪಂಚಾಯತ್ | 30 | 43 | 73 | 4 | 4 |
| 6. | ಎಸ್.ಎ.ಬಿ.ಯಂ.ಪಿ.ಯು.ಪಿ. ಶಾಲೆ, ವಿದ್ಯಾಗಿರಿ | 1964 | ಪಂಚಾಯತ್ | 258 | 228 | 486 | 19 | 19 |
| 7. | ಎ.ಎಲ್.ಪಿ. ಶಾಲೆ, ಚೇಡಿಕ್ಕಾನ | 1952 | ಖಾಸಗಿ | 45 | 42 | 87 | 4 | 4 |
| 8. | ಜಿ.ಬಿ.ಯು.ಪಿ. ಶಾಲೆ, ಪೆರಡಾಲ | 1927 | ಸರಕಾರಿ | 887 | 748 | 1635 | 37 | 37 |
| 9. | ಎನ್.ಎಚ್.ಶಾಲೆ, ಪೆರಡಾಲ | 1944 | ಖಾಸಗಿ | 645 | 482 | 1127 | 41 | 41 |
| 10. | ಎ.ಯು.ಪಿ. ಶಾಲೆ, ಪಳ್ಳತಡ್ಕ | 1927 | ಖಾಸಗಿ | 234 | 215 | 449 | 20 | 20 |
| 11. | ಜೆ.ಎ.ಎಸ್.ಬಿ. ಶಾಲೆ, ಮಾನ್ಯ | 1928 | ಖಾಸಗಿ | 357 | 315 | 672 | 26 | 26 |
| 12. | ಜಿ.ಡಬ್ಲ್ಯೂ.ಎಲ್.ಪಿ. ಶಾಲೆ, ಬೇಳ | | ಸರ್ಕಾರಿ | 77 | 75 | 152 | 9 | 9 |
| 13. | ಬಿ.ಎ.ಯು.ಪಿ. ಶಾಲೆ, ಬೇಳ | | ಖಾಸಗಿ | 225 | 291 | 546 | 16 | 16 |
| 14. | ಝುಡ್.ಐ.ಎ.ಎಲ್.ಪಿ. ಶಾಲೆ, ಕುಂಜಾರು | | ಖಾಸಗಿ | 120 | 116 | 238 | 10 | 10 |

ಇಷ್ಟು ಮಾತ್ರವಲ್ಲದೆ ನೆರೆಯ ಪಂಚಾಯತ್ ಮತ್ತು ನೆರೆಯ ರಾಜ್ಯಗಳಲ್ಲೂ ಮಕ್ಕಳು ವಿದ್ಯಾಭ್ಯಾಸ ಪಡೆಯುತ್ತಾರೆ. ಈಗಿನ ವಿದ್ಯಾರ್ಥಿ ವಿದ್ಯಾರ್ಥಿನಿಯರ ನಿಷ್ಪತ್ತಿ 53:47 ಆಗಿದೆ.

## ಪರಿಶಿಷ್ಟ ಜಾತಿ ಮತ್ತು ಪಂಗಡದ ಮಕ್ಕಳ ವಿವರಗಳು

| ಕ್ರಮ ನಂಬ್ರ | ಶಾಲೆಯ ಹೆಸರು | ಹುಡುಗರು | ಹುಡುಗಿಯರು | ಜುಮ್ಲಾ |
|---|---|---|---|---|
| 1. | ಎ.ಎಲ್.ಪಿ. ಶಾಲೆ, ಕೆಳಿಂಗಾರು | 21 | 17 | 38 |
| 2. | ಎ.ಯು.ಪಿ. ಶಾಲೆ, ಕುಂಟಿಕಾನ | 28 | 40 | 68 |
| 3. | ಎಂ.ಎಸ್.ಸಿ, ಹೈಸ್ಕೂಲ್, ನೀರ್ಚಾಲ್ | 112 | 118 | 230 |
| 4. | ಎಂ.ಎಸ್.ಸಿ.ಎಲ್.ಪಿ.ಶಾಲೆ, ನೀರ್ಚಾಲ್ | 59 | 49 | 108 |
| 5. | ಎಸ್.ಎಸ್.ಪಿ.ಎ.ಎಲ್.ಪಿ.ಶಾಲೆ, ಉದಯಗಿರಿ | 12 | 14 | 26 |
| 6. | ಎಸ್.ಎ.ಬಿ.ಎಂ.ಪಿ.ಯು.ಪಿ.ಶಾಲೆ, ವಿದ್ಯಾಗಿರಿ | 22 | 14 | 36 |
| 7. | ಎ.ಎಲ್.ಪಿ. ಶಾಲೆ, ಚೇಡಿಕ್ಕಾನ | 20 | 22 | 42 |
| 8. | ಜಿ.ಬಿ.ಯು.ಪಿ. ಶಾಲೆ, ಪೆರಡಾಲ | 96 | 97 | 193 |
| 9. | ಎನ್.ಎಚ್.ಶಾಲೆ, ಪೆರಡಾಲ | 106 | 112 | 218 |
| 10. | ಎ.ಯು.ಪಿ.ಶಾಲೆ, ಪಳ್ಳತ್ತಡ್ಕ | 51 | 36 | 87 |
| 11. | ಜೆ.ಎ.ಎಸ್.ಬಿ. ಶಾಲೆ, ಮಾನ್ಯ | 107 | 96 | 203 |
| 12. | ಜಿ.ಡಬ್ಲ್ಯೂ.ಎಲ್.ಪಿ. ಶಾಲೆ, ಬೇಳ | 10 | 13 | 28 |
| 13. | ಬಿ.ಎ.ಯು.ಪಿ. ಶಾಲೆ, ಬೇಳ | 69 | 69 | 188 |
| 14. | ರ್‍ಝುಡ್.ಐ.ಎ.ಎಲ್.ಪಿ.ಶಾಲೆ, ಕುಂಜಾರು | 14 | 14 | 28 |

ಈ ಪಂಚಾಯತಿನ ಜನರು ಕೃಷೀಕರೂ, ಬೀಡಿ ಕಾರ್ಮಿಕರೂ, ಪರಿಶಿಷ್ಟ ಜಾತಿ ಹಾಗೂ ಪಂಗಡದವರಾಗಿದ್ದಾರೆ. ತುಲನಾತ್ಮಕವಾಗಿ ಅರ್ಧದಲ್ಲಿ ಕಲಿಯುವಿಕೆ ನಿಲ್ಲಿಸುವವರ ಸಂಖ್ಯೆ ಕಡಿಮೆಯಾಗಿರುತ್ತದೆ.

**1995-96ರ ಶೈಕ್ಷಣಿಕ ವರ್ಷದಲ್ಲಿ ಮಧ್ಯದಲ್ಲಿ ಕಲಿಕೆ ನಿಲ್ಲಿಸಿದವರ ಅಂಕಿ ಅಂಶ**

| ಹುಡುಗರು | ಹುಡುಗಿಯರು | ಜುಮ್ಲಾ | ಶೇಕಡಾ ಮಾನ |
|---|---|---|---|
| 610 | 383 | 993 | 14% |

ಪಂಚಾಯತಿನ ಒಟ್ಟು 14 ಶಾಲೆಗಳಲ್ಲಿರುವ ಅಧ್ಯಾಪಕ ಮತ್ತು ಅಧ್ಯಾಪಿಕೆಯರಲ್ಲಿ 4% ಪರಿಶಿಷ್ಟ ಜಾತಿ ಮತ್ತು ಪಂಗಡದವರಾಗಿದ್ದಾರೆ. ಈ ಪಂಚಾಯತಿನ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲೂ ಮಕ್ಕಳಿಗೆ ಮಧ್ಯಾಹ್ನ ಗಂಜಿ ಊಟ ವ್ಯವಸ್ಥೆ ಇದೆ.

## ಸರಕಾರಿ ಶಾಲೆಗಳ ಅಧ್ಯಾಪಕ ವಿದ್ಯಾರ್ಥಿಗಳ ಲೆಕ್ಕಾಚಾರ

| | |
|---|---|
| ಪಂಚಾಯತಿನ ಒಟ್ಟು ಅಧ್ಯಾಪಕರ ಸಂಖ್ಯೆ | 240 |
| ಸರಕಾರಿ ಅಧ್ಯಾಪಕರು | 46 |
| ಶೇಕಡಾ ಮಾನ ಪಂಚಾಯತಿನ | 19% |
| ವಿದ್ಯಾರ್ಥಿಗಳು | 7114 |
| ಸರಕಾರಿ ಶಾಲಾ ವಿದ್ಯಾರ್ಥಿಗಳು | 1787 |
| ಶೇಕಡಾ ಮಾನ | 25% |

ಪಂಚಾಯತಿನ ಒಟ್ಟು ಅಧ್ಯಾಪಕರಲ್ಲಿ 81% ಖಾಸಗಿ ಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ.

## ಶಾಲೆಗಳ ಶಿಕ್ಷಕ ರಕ್ಷಕ ಸಂಘ ಮತ್ತು ಮಾತೃ ಸಂಘದ ವಿವರಗಳು (PTA ಮತ್ತು MPTA)

| ಕ್ರಮ ಸಂಖ್ಯೆ | ಶಾಲೆಗಳ ಹೆಸರು | PTA | MPTA |
|---|---|---|---|
| 1. | ಎ.ಎಲ್.ಪಿ. ಶಾಲೆ, ಕಿಳಿಂಗಾರು | ಇದೆ | ಇದೆ |
| 2. | ಎ.ಯು.ಪಿ.ಶಾಲೆ, ಕುಂಟಿಕಾನ | " | " |
| 3. | ಎಂ.ಎಸ್.ಸಿ.ಎಚ್. ಶಾಲೆ, ನೀರ್ಚಾಲ್ | " | ಇಲ್ಲ |
| 4. | ಎಂ.ಎಸ್.ಸಿ.ಎಲ್.ಪಿ. ಶಾಲೆ, ನೀರ್ಚಾಲ್ | " | ಇದೆ |
| 5. | ಎಸ್.ಎಸ್.ಪಿ.ಎ.ಎಲ್.ಪಿ. ಶಾಲೆ, ಉದಯಗಿರಿ | " | " |
| 6 | ಎಸ್.ಎ.ಬಿ.ಯಂ.ಪಿ.ಯು.ಪಿ. ಶಾಲೆ, ವಿದ್ಯಾಗಿರಿ | " | " |
| 7. | ಎ.ಎಲ್.ಪಿ. ಶಾಲೆ, ಚೇಡಿಕ್ಕಾನ | " | " |
| 8. | ಜಿ.ಬಿ.ಯು.ಪಿ. ಶಾಲೆ, ಪೆರಡಾಲ | " | " |
| 9. | ಎನ್.ಎಚ್.ಶಾಲೆ ಪೆರಡಾಲ | " | ಇಲ್ಲ |
| 10. | ಎ.ಯು.ಪಿ.ಶಾಲೆ,ಪಳ್ಳತ್ತಡ್ಕ | " | ಇದೆ |
| 11. | ಜೆ.ಎ.ಎಸ್.ಯು.ಪಿ. ಶಾಲೆ, ಮಾನ್ಯ | " | " |
| 12. | ಜಿ.ಡಬ್ಲ್ಯೂ.ಎಲ್.ಪಿ. ಶಾಲೆ, ಬೇಳ | " | " |
| 13. | ಬಿ.ಎ.ಯು.ಪಿ. ಶಾಲೆ, ಬೇಳ | " | " |
| 14. | ಝೊಡ್.ಐ.ಎ.ಎಲ್.ಪಿ. ಶಾಲೆ, ಕುಂಜಾರು | " | " |

ಪಂಚಾಯತಿನ ಎಲ್ಲಾ ಶಾಲೆಗಳಲ್ಲೂ ಮಕ್ಕಳ ವಿದ್ಯಾಭ್ಯಾಸ ಸುಗಮವಾಗಿ ನಡೆಯುವಂತೆ ಮಾಡಲು ಹೆಚ್ಚಿನ PTAಗಳೂ ಶಕ್ತಿ ಮೀರಿ ಶ್ರಮಿಸುತ್ತಿವೆ. ಈ ಪಂಚಾಯತಿನಲ್ಲಿ d PEP ಯ BRC ಸೆಂಟರ್ ಮಕ್ಕಳ ವಿದ್ಯಾಭ್ಯಾಸ ಮಟ್ಟವನ್ನು ಹೆಚ್ಚಿಸುವುದಕ್ಕಾಗಿ ಕಾರ್ಯ ನಿರ್ವಹಿಸುತ್ತದೆ. ಕೆಲವು ಶಾಲೆಗಳಲ್ಲಿ ಮಕ್ಕಳಿಗೆ ವನಮಹೋತ್ಸವ, ನಾಡ ಹಬ್ಬ, ಇನ್ನಿತರ ಹಬ್ಬಗಳ ಬಗ್ಗೆ ತಿಳುವಳಿಕೆ ಮೂಡಿಸುವುದಕ್ಕಾಗಿ ಪ್ರತ್ಯೇಕ ಕಾರ್ಯಕ್ರಮಗಳು ನಡೆಸಲ್ಪಡುತ್ತವೆ.

**ಹೈಸ್ಕೂಲುಗಳ S.S.L.C. ಫಲಿತಾಂಶದ ವಿವರಗಳು:**

| ಕ್ರಮ ಸಂಖ್ಯೆ | ಶಾಲೆಗಳ ಹೆಸರು | 1991-92 | 1992-93 | 1993-94 | 1994-95 | 1995-96 |
|---|---|---|---|---|---|---|
| 1 | ನವಜೀವನ ಹೈಸ್ಕೂಲ್, ಪೆರಡಾಲ | 57% | 42% | 37% | 35% | 27% |
| 2 | ಮಹಾಜನ ಸಂಸ್ಕೃತ ಕಾಲೇಜು ಹೈಸ್ಕೂಲ್, ಪೆರಡಾಲ | 31% | 40% | 47% | 19% | 28% |

ಪಂಚಾಯತಿನಲ್ಲಿ SSLCಯಲ್ಲಿ ಅತ್ಯಧಿಕ ಮಾರ್ಕ್ ಗಳಿಸಿದವರಿಗೆ ಬಹುಮಾನವನ್ನು ವಿತರಿಸಲಾಗುತ್ತದೆ.. ಶಾಲೆಗಳಲ್ಲಿ ಉತ್ತಮ ಫಲಿತಾಂಶ ಬರುವಂತೆ ಪಂಚಾಯತಿನ ಕ್ಷೇತ್ರದಲ್ಲಿರುವ ಕೆಲವು ಸಂಸ್ಥೆಗಳು ವಿಶೇಷ ತರಬೇತಿ ನೀಡುತ್ತಿವೆ.

**ಸಮಸ್ಯೆಗಳು :**

1) ಹೆಚ್ಚಿನ ಶಾಲೆಗಳಿಗೂ ಆವರಣ (Compound wall) ಇಲ್ಲದಿರುವುದರಿಂದ ಮಕ್ಕಳ ಕಲಿಕೆಗೆ ತೊಂದರೆಯಾಗುತ್ತಿದೆ.
2) ಮಕ್ಕಳ ಹೆತ್ತವರ ಆರ್ಥಿಕ ಅಡಚಣೆಯಿಂದ ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂಜರಿಯುತ್ತಾರೆ.
3) ಜನಗಣತಿಯಂತಹ ಸರ್ಕಾರೀ ಕಾರ್ಯಕಲಾಪಗಳಿಗೆ ಅಧ್ಯಾಪಕರನ್ನು ಶಾಲಾ ಸಮಯದಲ್ಲಿ ಉಪಯೋಗಿಸುವುದರಿಂದ ಶಾಲೆಗಳಲ್ಲಿ ಅಧ್ಯಾಪನ ಸರಿಯಾಗಿ ಜರಗುವುದಕ್ಕೆ ಕಷ್ಟವಾಗುತ್ತದೆ.
4) ಶಾಲೆಗಳಲ್ಲಿ ಬೋಧನೋಪಕರಣಗಳ (Teaching Aids) ಕೊರತೆಯಿರುವುದರಿಂದ ಅಧ್ಯಾಪಕರಿಗೆ ಕಲಿಸುವುದಕ್ಕೆ ಕಷ್ಟವಾಗುತ್ತಿದೆ.
5) ಸಕಾಲದಲ್ಲಿ ಪಾಠಪುಸ್ತಕಗಳು ದೊರಕದಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ.
6) ಮಕ್ಕಳ ಪ್ರಾಥಮಿಕ ಅವಶ್ಯಕತೆಗಳಾದ ಕುಡಿನೀರು ಮತ್ತು ಶೌಚಾಲಯಗಳ ಕೊರತೆ ಇರುತ್ತದೆ.
7) ಶಾಲೆಗಳಲ್ಲಿ ಮಕ್ಕಳಿಗೆ ಆಟದ ಬಯಲಿನ ಸೌಕರ್ಯ ಸಮರ್ಪಕವಿರುವುದಿಲ್ಲ ಮತ್ತು ಕಟ್ಟಡ ಸೌಕರ್ಯದ ಕೊರತೆ.
8) ಪೀಠೋಪಕರಣಗಳು ಮತ್ತು ಲ್ಯಾಬೋರೇಟರಿ ಸೌಕರ್ಯ ಕಡಿಮೆ ಇರುತ್ತದೆ.
9) ಹಳ್ಳಿಯಲ್ಲಿನ ಮಕ್ಕಳಿಗೆ ಶಾಲೆಗಳಿಗೆ ಹೋಗಲು ಬಹುದೂರ ನಡೆಯಬೇಕಾಗುತ್ತದೆ.
10) ವಿದ್ಯುತ್ ಸೌಕರ್ಯವಿರುವುದಿಲ್ಲ.

**ಶಾಲೆಗಳಲ್ಲಿನ ವಿವಿಧ ಚಟುವಟಿಕೆಗಳ ವಿವರ**

| | ಸಯನ್ಸ್ ಕ್ಲಬ್ | ಸೋಶಿಯಲ್ ಕ್ಲಬ್ | ಹೆಲ್ತ್ ಕ್ಲಬ್ | ಕೃಷಿ ಕ್ಲಬ್ | ಮೇತ್ಸ್ ಕ್ಲಬ್ | ಸಾಕ್ಷರತಾ ಕ್ಲಬ್ | ಸಾಹಿತ್ಯ ಸಂಘ | ಬಾಲ ಸಮಾಜ |
|---|---|---|---|---|---|---|---|---|
| ಇರುವ ಶಾಲೆಗಳ ಸಂಖ್ಯೆ | 10 | 2 | 8 | 6 | 10 | 7 | 11 | 9 |
| ಇಲ್ಲದೆ ಇರುವ ಶಾಲೆಗಳ ಸಂಖ್ಯೆ | 4 | 12 | 6 | 8 | 4 | 7 | 3 | 5 |

**ಶಾಲೆಗಳ ಶೈಕ್ಷಣಿಕ ಸೌಕರ್ಯಗಳು**

| | ಲೈಬ್ರರಿ | ಲ್ಯಾಬ್(LAB) | ರೇಡಿಯೋ | ಟೇಪ್ | ಪ್ರೊಜೆಕ್ಟರ್ ಸ್ಲೈಡ್ | ಪ್ರೊಜೆಕ್ಟರ್ ಸಿನೆಮಾ | ಮೈಕ್ |
|---|---|---|---|---|---|---|---|
| ಇರುವುದು | 10 | 10 | 6 | 5 | 0 | 0 | 2 |
| ಇಲ್ಲದಿರುವುದು | 4 | 4 | 8 | 9 | 14 | 14 | 12 |

**ಶಾಲೆಗಳ ಭೌತಿಕ ವಿವರಗಳು**

| ಕ್ರ.ನಂಬ್ರ | ಶಾಲೆಯ ಹೆಸರು | ಮಕ್ಕಳ ಸಂಖ್ಯೆ | ಅಧ್ಯಾಪಕರು | ಶಾಲಾವರಣದ ವಿಸ್ತೀರ್ಣ (ಎಕ್ರೆ) | ಕ್ಲಾಸ್‌ರೂಂ ಪ್ರಸಕ್ತ | ಅಗತ್ಯ | ಡಿವಿಜನ್ | ಕಕ್ಕೂಸ್ | ಮೂತ್ರ ದೊಡ್ಡಿ | ಕುಡಿ ನೀರು | ವಿದ್ಯುತ್ |
|---|---|---|---|---|---|---|---|---|---|---|---|
| 1. | ಎ.ಎಲ್.ಪಿ.ಶಾಲೆ, ಕಿಳಿಂಗಾರು | 103 | 4 | 1.00 | 4 | 4 | 4 | ಇಲ್ಲ | ಇಲ್ಲ | ಇದೆ | ಇಲ್ಲ |
| 2. | ಎಂ.ಎಸ್.ಸಿ.ಎಚ್.ಎಸ್, ನೀರ್ಚಾಲ್ | 842 | 27 | 12.28 | 27 | 27 | 18 | 6 | 2 | ಬಾವಿ | ಇದೆ |
| 3. | ಎನ್.ಎಚ್.ಎಸ್. ಪೆರಡಾಲ | 1127 | 41 | 13.00 | 24 | 24 | 24 | 4 | 25 | ನಳ್ಳಿ, ಬಾವಿ | ಇದೆ |
| 4. | ಬಿ.ಎ.ಯು.ಪಿ.ಶಾಲೆ, ಬೇಳ | 546 | 16 | 2.50 | 14 | 14 | 14 | 10 | 10 | ಬಾವಿ | ಇದೆ |
| 5. | ಜಿ.ಎ.ಎಸ್.ಬಿ.ಶಾಲೆ, ಮಾನ್ಯ | 672 | 26 | 3.00 | 22 | 22 | 23 | ಇಲ್ಲ | 8 | ಇಲ್ಲ | ಇದೆ |
| 6. | ಎ.ಯು.ಪಿ.ಶಾಲೆ, ಪಳ್ಳತ್ತಡ್ಕ | 449 | 20 | 1.24 | 18 | 18 | 16 | 2 | 2 | ನಳ್ಳಿ | ಇದೆ |
| 7. | ಎ.ಯು.ಪಿ.ಎಸ್, ಕುಂಟಿಕಾನ | 368 | 15 | 2.00 | 13 | 13 | 13 | 1 | 2 | ಬಾವಿ | ಇದೆ |
| 8. | ಎಸ್.ಎ.ಬಿ.ಯು.ಪಿ.ಶಾಲೆ, ವಿದ್ಯಾಗಿರಿ | 486 | 19 | 5.86 | 18 | 18 | 16 | 1 | 10 | ಇಲ್ಲ | ಇಲ್ಲ |
| 9. | ಜಿ.ಎಸ್.ಬಿ.ಎಸ್, ಪೆರಡಾಲ | 1635 | 37 | 3.06 | 21 | 11 | 32 | 2 | 20 | ಕೊಳವೆ ಬಾವಿ | ಇದೆ |
| 10. | ಎಸ್.ಎಸ್.ಎ.ಎಲ್.ಪಿ.ಎಸ್. ಉದಯಗಿರಿ | 73 | 4 | 2.00 | 4 | 4 | 4 | ಇಲ್ಲ | ಇಲ್ಲ | ಬಾವಿ | ಇಲ್ಲ |
| 11. | ಎ.ಎಲ್.ಪಿ.ಶಾಲೆ, ಚೇಡಿಕ್ಕಾನ | 87 | 4 | 0.50 | 4 | 2 | 4 | ಇಲ್ಲ | ಇಲ್ಲ | ಇಲ್ಲ | ಇಲ್ಲ |
| 12. | ಝುಡ್.ಐ.ಎ.ಎಲ್.ಪಿ.ಶಾಲೆ, ಕುಂಜಾರು | 238 | 10 | 1.56 | 6 | 6 | 9 | 1 | 3 | ಬಾವಿ | ಇಲ್ಲ |
| 13. | ಎಂ.ಎಸ್.ಸಿ.ಎಲ್.ಪಿ.ಶಾಲೆ, ನೀರ್ಚಾಲ್ | 312 | 8 | 2.50 | 8 | 8 | 8 | ಇಲ್ಲ | ಇಲ್ಲ | ಬಾವಿ | ಇದೆ |
| 14. | ಜಿ.ಡಬ್ಲ್ಯೂ.ಎಲ್.ಪಿ.ಶಾಲೆ, ಬೇಳ | 152 | 9 | 2.09 | 8 | 8 | 8 | 1 | 1 | ಬಾವಿ | ಇಲ್ಲ |

ಪರಿಹಾರೋಪಾಯಗಳು :

1. ಎಲ್ಲಾ ಶಾಲೆಗಳಿಗೆ ಆವರಣ ನಿರ್ಮಾಣ.
2. PTA ಮತ್ತು MPTAಗಳನ್ನು ಬಲಪಡಿಸುವುದು.
3. ಬೋಧನೋಪಕರಣಗಳನ್ನು ಒದಗಿಸುವುದು.
4. ಪಠ್ಯ ಪುಸ್ತಕ ಸಕಾಲದಲ್ಲಿ ದೊರಕುವಂತೆ ಮಾಡುವುದು.
5. ಶಾಲೆಗಳಲ್ಲಿ ಅಗತ್ಯವಿದ್ದಷ್ಟು ಶೌಚಾಲಯ ಮತ್ತು ಕುಡಿನರು ಒದಗುವಂತೆ ಮಾಡುವುದು.
6. ಚೇಡಿಕ್ಕಾನ, ಉದಯಗಿರಿ, ಕಿಳಿಂಗಾರು, ಕುಂಜಾರು,ಕಡಂಬಳ ಶಾಲೆಗಳನ್ನು ಯು.ಪಿ.ಶಾಲೆಗಳಾಗಿ ಪರಿವರ್ತಿಸುವುದು.
7. ಪಳ್ಳತ್ತಡ್ಕ, ಪೆರಡಾಲ, ಮಾನ್ಯ, ವಿದ್ಯಾಗಿರಿ, ಮತ್ತು ಕುಂಟಿಕಾನ ಶಾಲೆಗಳನ್ನು ಹೈಸ್ಕೂಲುಗಳಾಗಿ ಪರಿವರ್ತಿಸುವುದು.
8. ನವಜೀವನ ಮತ್ತು ನೀರ್ಚಾಲಿನ ಹೈಸ್ಕೂಲನ್ನು +2 ಆಗಿ ಮಾರ್ಪಡಿಸುವುದು.
9. ಕೆಲವು ಕಡೆ ಎರಡು ಕಿ.ಮೀ.ಗಳಿಗಿಂತಲೂ ಅಧಿಕ ದೂರ ನಡೆಯದೆ ಶಾಲೆಗೆ ಹೋಗಲು ಸಾಧ್ಯವಿಲ್ಲ. ಅಂತಹ ಕಡೆ ಶಾಲೆಗಳ ಸ್ಥಾಪನೆ.
10. ಪಂಚಾಯತಿನಲ್ಲಿ ಪ್ರತಿ ಇನ್ನೂರು ಮನೆಗಳಿಗೊಂದರಂತೆ ಪ್ರಿಪ್ರೈಮರಿ ಶಾಲೆ ಸ್ಥಾಪಿಸುವುದು.
11. ಪಂಚಾಯತಿನ ಎಲ್ಲಾ ಶಾಲೆಗಳನ್ನು ಒಟ್ಟು ಸೇರಿಸಿ ಕಾಂಪ್ಲೆಕ್ಸ್ ರಚಿಸುವುದು. (BRCಯ ಸಹಾಯದಿಂದ)
12. ಶಾಲೆಗಳಲ್ಲಿ ಅಗತ್ಯವಿರುವಷ್ಟು ಅಧ್ಯಾಪಕರ ನೇಮಕ.
13. ಆರ್ಥಿಕವಾಗಿ ಹಿಂದುಳಿದವರಿಗೆ ವಸತಿ ವಿದ್ಯಾಕೇಂದ್ರ (Residential School) ವನ್ನು ತೆರೆಯುವುದು.
14. ಪಂಚಾಯತು ಶಾಲೆಗಳಲ್ಲಿ ಪೀಠೋಪಕರಣಗಳ ಪೂರೈಸುವಿಕೆ.
15. ಪಂಚಾಯತಿನಲ್ಲಿ ಕರಕುಶಲ ಮತ್ತು ತಾಂತ್ರಿಕ ತರಬೇತಿ ಕೇಂದ್ರವನ್ನು ತೆರೆಯುವುದು.
16. ಪಂಚಾಯತು ಕೇಂದ್ರದಲ್ಲಿ ಸಹಕಾರೀ ತರಬೇತಿ ಕೇಂದ್ರವೊಂದರ ಸ್ಥಾಪನೆ.
17. ಬೇಳದಲ್ಲಿ ಮುಚ್ಚುಗಡೆಯಾಗಿರುವ ITCಯನ್ನು ತೆರೆದು ITI ಆಗಿ ಮಾರ್ಪಡಿಸುವಿಕೆ.
18. ನವಜೀವನ ಹೈಸ್ಕೂಲಿನಲ್ಲಿ ನಿರುಪಯೋಗವಾಗಿರುವ ತಾಂತ್ರಿಕ ಉಪಕರಣ, ಕಟ್ಟಡಗಳನ್ನು ಸದುಪಯೋಗ ಪಡಿಸಿ ITI ಅಥವಾ J.T.S. ಸ್ಥಾಪನೆ.
19. ಖಾಸಗೀ ಶಾಲೆಗಳಲ್ಲಿ ಅಧ್ಯಾಪಕರ ನೇಮಕಾತಿ ಮಾಡುವಾಗ ಪ್ರತಿಭೆಗೆ ಮಾತ್ರ ಆದ್ಯತೆಯನ್ನು ನೀಡಿದರೆ ವಿದ್ಯಾಭ್ಯಾಸ ಗುಣಮಟ್ಟವು ಆಂಶಿಕವಾಗಿ ಸುಧಾರಣೆಯಾಗಲು ಸಾಧ್ಯ.

## 9. ಕುಡಿನೀರು ಮತ್ತು ಸಾಮಾಜಿಕ ಆರೋಗ್ಯ

ಮನುಷ್ಯನ ಪ್ರಾಥಮಿಕ ಅನುಕೂಲತೆಗಳಲ್ಲಿ ಒಂದಾದ ಕುಡಿಯುವ ನೀರಿನ ಅವಶ್ಯಕತೆಯನ್ನು ಎಷ್ಟೆಂದು ಹೇಳಲು ಸಾಧ್ಯ. ಬದಿಯಡ್ಕ ಪಂಚಾಯತು ಪ್ರದೇಶವು ಸ್ವಾತಂತ್ರ್ಯ ಸಿಕ್ಕಿದ ದಶಕದಿಂದಲೇ ನೀರಿನ ಮಟ್ಟಿಗೆ ಕ್ಷಾಮವಿರುವ ಪ್ರದೇಶವೆಂದು ಘೋಷಿಸಲಾಗಿದೆ. ಈ ಕ್ಷೇತ್ರದಲ್ಲಿರುವ ಹನ್ನೊಂದು ವಾರ್ಡುಗಳ ಪೈಕಿ ನಾಲ್ಕನೆಯ ವಾರ್ಡಿನಲ್ಲಿ ಬದಿಯಡ್ಕ ಪೇಟೆಯಿದ್ದು ಜನಸಂಖ್ಯೆಯು ಅಧಿಕವಾಗಿದೆ. ಬದಿಯಡ್ಕ ಪೇಟೆಯ ಪರಿಸರಕ್ಕೆ ಹೆಚ್ಚು ನೀರಿನ ಅವಶ್ಯಕತೆಯಿದ್ದು ನೀರಿನ ಕೊರತೆ ಅಧಿಕವಾಗಿ ಬಾಧಿಸುವ ಸ್ಥಳವಾಗಿದೆ. ಇಲ್ಲಿರುವ ಕುಡಿಯುವ ನೀರಿನ ಬಾವಿಗಳು ಸುಮಾರು 60 ಅಡಿಯಿಂದ ಕಡಿಮೆಯಿರುವುದನ್ನು ಕಾಣಲು ಅಲಭ್ಯ. ಈ ಪರಿಸರದಲ್ಲಿ ಕೆಲವು ಕೊಳವೆ ಬಾವಿಗಳು ಪ್ರವರ್ತಿಸುತ್ತಿದ್ದು, ಆಂಶಿಕವಾಗಿ ಕುಡಿಯುವ ನೀರಿನ ಅವಶ್ಯಕತೆಗಳನ್ನು ಪೂರೈಸುತ್ತಿವೆ. ಕೇರಳ ಸರಕಾರದ ವಾಟರ್ ಅಥೋರಿಟಿಯವರು ಈ ನಿಟ್ಟಿನಲ್ಲಿ ಸಾಆಕಷ್ಟು ಶ್ರಮ ವಹಿಸುತ್ತಿದ್ದಾರೆ. ಕೆಲವು ಪ್ರದೇಶಗಳಲ್ಲಿ ಕುಡಿಯುವ ನೀರಿನ ನಳ್ಳಿಯ ವ್ಯವಸ್ಥೆಗಳನ್ನು ಯೋಜಿಸಲಾಗಿದೆ. ಬದಿಯಡ್ಕ ಹೃದಯ ಪ್ರದೇಶದ ಬಂಗ್ಲೆ ಗುಡ್ಡೆಯಲ್ಲಿ ನೀರಿನ ಒಂದು ಬೃಹತ್ ಟ್ಯಾಂಕಿಯೊಂದನ್ನು ರಚಿಸಿ, ಅದರಿಂದ ಪೇಟೆಗೆ ನೀರು ಸರಬರಾಜು ಮಾಡುವ ವ್ಯವಸ್ಥೆಯಿದೆ. ಈ ಟ್ಯಾಂಕಿಗೆ ನೀರನ್ನು ಬಸ್ಸು ನಿಲ್ದಾಣದ ಸಮೀಪದ ಕೊಳವೆ, ಬಾವಿ, ನವಕಾನದ ಸಮೀಪದಲ್ಲಿರುವ ಕೊಳವೆ ಬಾವಿ. ಪೆರಡಾಲ ದೇವಾಲಯದ ಸಮೀಪದ ಬಾವಿಗಳು ನೀರನ್ನೊದಗಿಸುತ್ತವೆ.

| ಕ್ರಮ ನಂಬ್ರ | ವಿಷಯ | ಸಂಖ್ಯೆ | ರಿಮಾರ್ಕ್ |
|---|---|---|---|
| 1 | ಸಾರ್ವಜನಿಕ ಬಾವಿ | 55 | 1991ರ ಪ್ರಕಾರ |
| 2 | ಕೊಳವೆ ಬಾವಿ | 18 | " |
| 3 | ಸಾರ್ವಜನಿಕ ನಳ್ಳಿ | 25 | " |
| 4 | ಸಾರ್ವಜನಿಕ ಕೊಳ | 6 | " |
| 5 | ಜಲನಿಗಮದ ಬಾವಿ | 1 | " |

ಪಳ್ಳತ್ತಡ್ಕದಲ್ಲಿ ಒಂದು ಟ್ಯಾಂಕಿ ಮತ್ತು ಒಂದು ಕೊಳವೆ ಬಾವಿಯ ವ್ಯವಸ್ಥೆಯಿದೆ. ಏಣಿಯಪು ಎಂಬಲ್ಲಿ ಒಂದು ನೀರಿನ ಟ್ಯಾಂಕಿ ಮತ್ತು ಕೊಳವೆ ಬಾವಿಯ ವ್ಯವಸ್ಥೆ ಇರುತ್ತದೆ. ಮಾನ್ಯ ಪ್ರದೇಶಕ್ಕೆ ಒಂದು ಟ್ಯಾಂಕಿಯನ್ನು ರಚಿಸಿ ಕೊಳವೆ ಬಾವಿಯಿಂದ ನೀರನ್ನು ಹಾಯಿಸಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲಾಗಿದೆ. ಪೆರಡಾಲದ ಕೊರಗ ಕಾಲೋನಿಯಲ್ಲಿ ಒಂದು ಟ್ಯಾಂಕಿಯನ್ನು ರಚಿಸಿ ಕೊಳ ಮತ್ತು ಕೊಳವೆ ಬಾವಿಯ ಮೂಲಕ ನೀರನ್ನು ಹಾಯಿಸಿ ತೊಟ್ಟಿಗಳ ಮೂಲಕ ನೀರು ಸರಬರಾಜು ಮಾಡಲಾಗಿದೆ. ಇವುಗಳಲ್ಲದೆ ಇನ್ನೂ ಕೆಲವು ಕೊಳವೆ ಬಾವಿಗಳು ಮತ್ತು ಸಾರ್ವಜನಿಕ ಬಾವಿಗಳು ನೀರಿನ ಪೂರೈಕೆಯನ್ನು ನಡೆಸಿ ಕೊಡುತ್ತವೆ. ಹಿಂದಿನ ಜನಸಂಖ್ಯೆಯಿಂದ ಎಷ್ಟೋ ಪಾಲು ಹೆಚ್ಚು ಜನಸಂಖ್ಯೆ ಈಗ ಇರುವುದರಿಂದ ನೀರಿನ ಬೇಡಿಕೆಯು ಹೆಚ್ಚಾಗಿದೆ. ಜನರ ಅಲ್ಪಮತಿಯಿಂದ ನೀರು ಪೋಲಾಗಿ ಹೋಗುವುದು, ಅಧಿಕಾರಿಗಳ ನಿರ್ಲಕ್ಷ್ಯದಿಂದ ನೀರು ವ್ಯರ್ಥವಾಗಿ ಹರಿದು ಹೋಗುವುದು, ನೀರಿನ ಪೂರೈಕೆ ಹೆಚ್ಚಳಕ್ಕೆ ಒಂದು ಕಾರಣವಾಗಿದೆ. ಆಧುನಿಕ ವ್ಯವಸ್ಥೆಯ ಗೃಹಗಳು, ಶೌಚಾಲಯಗಳು, ಸ್ನಾನಗೃಹಗಳು ನೀರಿನ ಬೇಡಿಕೆಯ ಹೆಚ್ಚಳಕ್ಕೆ ಕಾರಣವಾಗಿದೆ.

ನಾಗರಿಕರು ಈ ವ್ಯವಸ್ಥೆಯ ಸದುಪಯೋಗ ಮಾಡಿದರೆ ನೀರು ಪೋಲಾಗುವಿಕೆಯನ್ನು ತಡೆಗಟ್ಟಬಹುದು. ಕೊಳವೆ ಬಾವಿಗಳು ಈಗಾಗಲೇ 250 ಅಡಿಗಳಿಗಿಂತಲೂ ಆಳಕ್ಕೆ ಇಳಿದುದರಿಂದ ಅಂತರ್ಜಲ ನೀರಿನ ಮಟ್ಟವು ಕುಸಿದಿರುವುದು ಬಹು ದೊಡ್ಡ ಗಂಡಾಂತರವಾಗಿದೆ. ಆದ್ದರಿಂದ ಈ ಪ್ರದೇಶದ ನೀರಿನ ಸರಬರಾಜಿಗೆ ಹೊರಗಿನಿಂದ ನೀರಿನ ಮೂಲದ ಪ್ರತ್ಯೇಕ ವ್ಯವಸ್ಥೆಯನ್ನು ಅವಲಂಬಿಸಬೇಕಾಗಿದೆ. ಗ್ರಾಮ ಸಭೆಗಳಲ್ಲಿ ದೊರಕಿದ ಸಲಹೆಗಳ ಪ್ರಕಾರ ಜಿಲ್ಲೆಯ ಪಯಸ್ವಿನಿ ನದಿಯ ನೀರಿನ ಸಂಪತ್ತನ್ನು ಪ್ರತ್ಯೇಕ ಯೋಜನೆಯನ್ನು ಹಾಕಿ ವಿತರಣೆ ಮಾಡುವುದು ಸೂಕ್ತ. ಸಾರ್ವಜನಿಕ ಜನರ ಅನುಕೂಲದ ಅಭಿವೃದ್ಧಿಯ ದೃಷ್ಟಿಯಿಂದ ಕುಡಿಯುವ ನೀರಿನ ವ್ಯವಸ್ಥೆಯಲ್ಲಿ ಇನ್ನೂ ಕೆಲವು ಯೋಜನೆಗಳು ಅಗತ್ಯ. K.W.A.ಯವರು

ಈ ನಿಟ್ಟಿನಲ್ಲಿ ಸಹಕರಿಸುತ್ತಿದ್ದಾರೆ. ನೀರಿನ ಶುದ್ಧತೆಗೂ ಕೆಲುವು ಕಾರ್ಯಕ್ರಮಗಳು ಊರ್ಜಿತದಲ್ಲಿವೆ.

ಸಾರ್ವಜನಿಕ ಆರೋಗ್ಯಕ್ಕೂ ಕುಡಿಯುವ ನೀರಿಗೂ ನಿಕಟವಾದ ಸಂಬಂಧ ಇರುತ್ತದೆ. ಕುಲುಷಿತವಾದ ನೀರಿನಿಂದ ಜನರ ಆರೋಗ್ಯ ಕೆಳಮಟ್ಟಕ್ಕಿಳಿಯುತ್ತದೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಈ ಕ್ಷೇತ್ರದಲ್ಲಿ 'ಪ್ರೈಮರಿ ಹೆಲ್ತ್ ಸೆಂಟರ್' ಬದಿಯಡ್ಕದಲ್ಲಿ ಕಾರ್ಯವೆಸಗುತ್ತದೆ. ಕೆಲವು ವಾರ್ಡುಗಳಲ್ಲಿ ಕುಟುಂಬ ಕಲ್ಯಾಣ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಬದಿಯಡ್ಕ ಮತ್ತು ಬೇಳಗಳಲ್ಲಿ ಒಂದೊಂದು ಆಯುರ್ವೇದ ಆಸ್ಪತ್ರೆಗಳು ಕಾರ್ಯವೆಸಗುತ್ತಿವೆ. ಪಂಚಾಯತಿನ ವಿವಿಧ ಕ್ಷೇತ್ರಗಳಲ್ಲಿ ಆಗಾಗ ಆರೋಗ್ಯದ ಕುರಿತಾದ ಸೆಮಿನಾರುಗಳನ್ನು, ಬೋಧನಾ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸಲಾಗಿದೆ.

1995ರ ದಶಂಬರ 9 ಮತ್ತು 1996ರ ಜನವರಿ 20 ನೆಯ ತಾರೀಕುಗಳಂದು ನಡೆದ ವಿಶೇಷ 'ಪೋಲಿಯೋ ಇಮ್ಯೂನೈಸೇಶನ್' ಕಾರ್ಯಕ್ರಮಗಳು ಈ ಪಂಚಾಯತು ಕ್ಷೇತ್ರದಲ್ಲಿ ಸಂಪೂರ್ಣ ಯಶಸ್ಸು ಗಳಿಸಿದೆ. ಬದಿಯಡ್ಕದಲ್ಲಿ ಒಂದು ಸುಸಜ್ಜಿತ ಆಸ್ಪತ್ರೆ ಕಟ್ಟಡ ಯೋಜನೆಯು ಕಾರ್ಯವೆಸಗುತ್ತಿದೆ. ವರದಿ ಸಮಯದಲ್ಲಿ P.H.C.ಯಲ್ಲಿ ಸುಮಾರು 15 ನೌಕರರು ಕಾರ್ಯವೆಸಗುತ್ತಿದ್ದಾರೆ. 1990ರ ಜನಗಣತಿಯ ಪ್ರಕಾರ 3644 ಮನೆಗಳೂ 1484 ಶೌಚಾಲಯಗಳೂ ಇರುತ್ತದೆ. ಪಂಚಾಯತಿನಲ್ಲಿ ಒಟ್ಟು 2000ಕ್ಕಿಂತಲೂ ಮೇಲ್ಪಟ್ಟು ಕುಡಿಯುವ ನೀರಿನ ಬಾವಿಗಳಿವೆ. ಅಂಗವಿಕಲರಿಗೆ ಸೌಜನ್ಯಯುತವಾದ ಸೇವೆ ಮಾಡುವುದರೊಂದಿಗೆ ಕುಟುಂಬ ಯೋಜನೆಗೆ ಪ್ರಾಶಸ್ತ್ಯವನ್ನು ನೀಡಲಾಗಿದೆ. ಇವುಗಳಲ್ಲದೆ ಖಾಸಗೀ ಪ್ರಸೂತಿಕ ಗೃಹಗಳು, ಶುಶ್ರೂಷಾಲಯಗಳು ಕಾರ್ಯವೆಸಗುತ್ತಿದೆ. ಜನರು ಹೆಚ್ಚು ಖಾಸಗಿ ಆಸ್ಪತ್ರೆಗಳಿಗೆ ಆಕರ್ಷಿತರಾಗುವುದಕ್ಕೆ ಸರಕಾರಿ ಆಸ್ಪತ್ರೆಗಳಲ್ಲಿ ಅನುಭವವಾಗುವ ಅವ್ಯವಸ್ಥೆಯೇ ಕಾರಣವಾಗಿದೆ. ಕ್ಲಪ್ತ ಸಮಯಕ್ಕೆ ಸರಿಯಾಗಿ ಔಷಧಿಗಳ ಅಲಭ್ಯತೆ, ನೌಕರರ ಕೊರತೆ, ಸೌಕರ್ಯಗಳ ಕೊರತೆ, ಮೊದಲಾದವುಗಳು ಇದಕ್ಕೆ ಕಾರಣವಾಗ ಬಹುದು. ಬದಿಯಡ್ಕ ಪಂಚಾಯತು ಕ್ಷೇತ್ರದಲ್ಲಿ 5 ಅಲೋಪತಿ ಔಷಧಾಲಯಗಳೂ, 8 ಆಯುರ್ವೇದ ಔಷಧಾಲಯಗಳೂ ಕಾರ್ಯವೆಸಗುತ್ತಿದೆ. ಪರಂಪರಾಗತವಾದಂತಹ ನಾಟಿ ವೈದ್ಯರುಗಳೂ, ಹೋಮಿಯೋಪತಿ ವೈದ್ಯರುಗಳೂ, ಪ್ರಾಣಿಕ್ ಹೀಲಿಂಗ್ ವೈದ್ಯರುಗಳೂ ಆರೋಗ್ಯವರ್ಧನೆಗೆ ಶ್ರಮಿಸುತ್ತಿದ್ದಾರೆ. ಅಲೋಪತಿಕ್ ಮತ್ತು ಆಯುರ್ವೇದ ಖಾಸಗಿ ವೈದ್ಯರುಗಳು ಚಿಕಿತ್ಸೆಯನ್ನು ನೀಡುತ್ತಿದ್ದಾರೆ.

ಆರೋಗ್ಯವರ್ಧನೆಗೆ ಇನ್ನೂ ಹೆಚ್ಚು ಯೋಜನೆಗಳು ಬೇಕಾಗಿವೆ. ಗ್ರಾಮಾಂತರಗಳಲ್ಲಿ ವಾರಕ್ಕೊಮ್ಮೆ ಸೇವೆಯನ್ನು ಮಾಡುವ ಘಟಕಗಳ ಅವಶ್ಯವಿದೆ. ಕುಟುಂಬ ಯೋಜನೆಯ ಬಗ್ಗೆ ಇನ್ನೂ ಮಾಹಿತಿ ಬೇಕಾಗಿದೆ. ಶುಚಿತ್ವದ ಬಗ್ಗೆ ಇನ್ನೂ ಹೆಚ್ಚಿನ ಗಮನವನ್ನು ಯೋಜನೆಯಲ್ಲಿ ನೀಡಬೇಕಾಗಿದೆ.

**ಪರಿಹಾರೋಪಾಯಗಳು :**

**A.** **ತೊಟ್ಟಿಗಳ ಮೂಲಕ ಕುಡಿಯುವ ನೀರಿನ ವ್ಯವಸ್ಥೆ :** ಕಿಳಿಂಗಾರು, ಬೇರಿಗೆ, ಅನ್ನ ಪಲ್ಲಡ್ಕ, ಏಣಿಯಪು, ಕೋರಿಕ್ಕಾರು, ಪೆಲತ್ತಡಿ, ಕಾಡಮನೆ, ಚಾಲಕ್ಕೋಡು, ಮಡತ್ತಡ್ಕ, ಕಂಗಿಲ, ಪರ್ತಿಕ್ಕಾರು, ದೈಯಂದ್ರೆ, ಬಿರ್ಮಿನಡ್ಕ, ಕೂವಂಕೋಡ್ಲು, ಕುದುಕ್ಕೋಳಿ, ದಾಸಕಂಡ, ಚೆಡೆಕಲ್ಲು, ಕೆಡೆಂಜಿ ಮಾಡತ್ತಡ್ಕ.

**B.** **ನೀರಿನ ಪೈಪ್‌ಲೈನ್‌ಗಳ ವಿಸ್ತರಣೆ :**

1) ಟೆಲಿಫೋನ್ ಎಕ್ಸ್‌ಚೇಂಜ್ ಕಟ್ಟಡದ ಬಳಿಯಿಂದ ಪೆರಡಾಲ ಜಾರದ ವರೆಗೆ
2) ಬದಿಯಡ್ಕ - ವಳಮಲೆ
3) P.W.D. ಕಛೇರಿ - ಚೇರ್ಕೂಡ್ಲು
4) ಕೈಕ್ಕಂಬ - ಕಿಡೆಂಜಿ ದೇವಾಲಯ
5) ಮಾನ್ಯ - ಕೊಲ್ಲಂಗಾನ
6) ಬೇಳ - ಆಯುರ್ವೇದ ಆಸ್ಪತ್ರೆ, ಬೇಳ
7) ಪಳ್ಳತ್ತಡ್ಕ - ಪೆರುಮುಂಡ
8) ಕನ್ನೆಪ್ಪಾಡಿ - ಮಿಂಚಿನಡ್ಕ, ಮೀಸೆಬೈಲು
9) ಕನ್ನೆಪ್ಪಾಡಿ - ಅಡತ್ತಡ್ಕ
10) ಕನ್ನೆಪ್ಪಾಡಿ - ಪೆರಡಾಲ ದೇವಾಲಯ

C. **ಕೊಳವೆ ಬಾವಿ ನಿರ್ಮಾಣ :** ಕುಡುಪ್ಪುಂಕುಯಿ, ಕೋಳಾರಿ ಮೂಲೆ, ಏನಂಕೂಡ್ಲು, ಚರ್ಲಡ್ಕ, ಚೇರ್ಕೂಡ್ಲು, ಕಡಪ್ಪು, ಪಂಜಿಕಲ್ಲು, ವಿದ್ಯಾಗಿರಿ, ಕಡಾರು, ಕಾಯರ್ಕಾಯ ಭೂತ ಸ್ಥಾನದ ಬಳಿ, ವಜರ್ಪಳ್ಳ, ಧರ್ಬೆತ್ತಡ್ಕ, ಮಾನ್ಯ ಶಾಲೆಯ ಬಳಿ, ಬಿರ್ಮಿನಡ್ಕ ಮಸೀದಿ, ಕುಂಟಾಲು ಮೂಲೆ, ನೆಲ್ಲಿಕ್ಕಳೆಯ, ಗೋಳಿಯಡ್ಕ, ತಲ್ಪಣಾಜೆ, ಕುಂಟಿಕಾನ ಶಾಲೆಯ ಸಮೀಪ, ಬಡಗಮೂಲೆ, ಮಾಡತ್ತಡ್ಕ, ಚುಳ್ಳಿ, ಚೋಯಿಮೂಲೆ, ಬಂಡಾರಡ್ಕ, ಚಾಳಿತ್ತಡ್ಕ ಮತ್ತು ಪಾಡಲಡ್ಕ.

D. **ಟ್ಯಾಂಕ್ ನಿರ್ಮಾಣ ಮತ್ತು ನೀರಿನ ಸರಬರಾಜು :** ಕರಿಂಬಿಲ, ಗೋಳಿಯಡ್ಕ, ಕಾರ್‍ಯಾಡು, ವಿದ್ಯಾಗಿರಿ, ಚೆನ್ನಾರು ಕಟ್ಟೆ, ಮಾಕಂಪಾರೆ, ಕೆಡೆಂಜಿ ಮಾಡತ್ತಡ್ಕ.

E. **ಬಾವಿ ಥವಾ ಕೆರೆ ನಿರ್ಮಾಣ :** ಬೀಜಂತಡ್ಕ, ಕಡಾರು, ಪೆಲತ್ತಡಿ, ಪುಳಿತ್ತಡಿ, ದರ್ಬೆತ್ತಡ್ಕ, ಮೊವಿನ ಕಟ್ಟೆ, ಮಾನ್ಯಕೆರೆ, ದೇವರ ಕೆರೆ, ಕೊಲ್ಲಂಗಾನ, ನೆಲ್ಲಿಕ್ಕಳೆಯ.

F. **ಸಾರ್ವಜನಿಕ ಶೌಚಾಲಯಗಳು :** ನೀರ್ಚಾಲು, ಕಿಳಿಂಗಾರು, ಪೆರಡಾಲ ದೇವಾಲಯದ ಬಳಿ, ಬದಿಯಡ್ಕ ಮೇಲಿನ ಪೇಟೆ, ಬೋಳುಕಟ್ಟೆ ಕ್ರೀಡಾಂಗಣ, ವಿದ್ಯಾಗಿರಿ, ಮಾನ್ಯ, ಬೇಳ.

G. **ಆರೋಗ್ಯ ಘಟಕ :** ಕಿಳಿಂಗಾರು, ಪಳ್ಳತ್ತಡ್ಕ, ಚೆಡೆಕಲ್ಲು, ಪಟ್ಟಾಜೆ, ವಿದ್ಯಾಗಿರಿ, ದರ್ಬೆತ್ತಡ್ಕ, ಮಾನ್ಯ, ಬಿರ್ಮಿನಡ್ಕ, ಗೋಳಿಯಡ್ಕ, ಕಾರ್‍ಯಾಡು, ಚೆನ್ನೆಗುಳಿ, ತಲ್ಪಣಾಜೆ.

H. **ಕುಟುಂಬ ಕಲ್ಯಾಣ ಕೇಂದ್ರ :** ಮಾನ್ಯ, ವಿದ್ಯಾಗಿರಿ, ಪಳ್ಳತ್ತಡ್ಕ, ಕುಂಟಿಕಾನ, ತಲ್ಪಣಾಜೆ, ಉದಯಗಿರಿ.

# ಕೈಗಾರಿಕೆ

ಕಾಸರಗೋಡು ತಾಲೂಕಿನ ಬದಿಯಡ್ಕ ಪಂಚಾಯತು ಕೈಗಾರಿಕೆಯಲ್ಲಿ ತುಂಬಾ ಹಿಂದುಳಿದ ಪ್ರದೇಶವಾಗಿದೆ. ಇಲ್ಲಿ ಪರಿಶಿಷ್ಟ ಜಾತಿ - ಪರಿಶಿಷ್ಟ ವರ್ಗದವರು, ಬಡ ಕೃಷಿಕರು ಮತ್ತು ಇತರ ಕೂಲಿ ಕಾರ್ಮಿಕರು ಅಧಿಕವಾಗಿದ್ದಾರೆ. ಇವರಲ್ಲಿ ವಿದ್ಯಾವಂತ ನಿರುದ್ಯೋಗಿಗಳೂ ಒಳಗೊಂಡಿದ್ದಾರೆ. ಆದುದರಿಂದ ಈ ಪಂಚಾಯತಿನ ಆದಾಯವು ತುಂಬಾ ಕಡಿಮೆಯಾಗಿರುವುದು. ಇವರಿಗೆ ಸ್ವೋದ್ಯೋಗ ನಡೆಸಲು ಸಾಂಪತ್ತಿಕ ಮುಗ್ಗಟ್ಟು ಒಂದು ತಡೆಯಾಗಿದೆ. ಮಹಿಳೆಯರಿಗೆ ಬೀಡಿ ಕೈಗಾರಿಕೆ ಹೊರತು ಬೇರೆ ಯಾವುದೆ ಕೈಗಾರಿಕಾ ಉದ್ಯೋಗಾವಕಾಶ ಇಲ್ಲ. ಆದುದರಿಂದ ಈ ಪ್ರದೇಶದಲ್ಲಿ ಕೈಗಾರಿಕಾ ರಂಗದಲ್ಲಿ ಅಭಿವೃದ್ಧಿಯು ಅಗತ್ಯವಾಗಿದೆ.

**ಪ್ರಸ್ತುತ ಬದಿಯಡ್ಕ ಪಂಚಾಯತಿನಲ್ಲಿ ಅಸ್ತಿತ್ವದಲ್ಲಿರುವ ಕೈಗಾರಿಕಾ ಸಂಸ್ಥೆಗಳ ವಿವರ :**

1) **ವೆಸ್ಟ್ ಇಂಡಿಯಾ ಕಾಸ್ಟಿಂಗ್ಸ್ - ಚೆಡೇಕಲ್ಲು :** ಇಲ್ಲಿ ಕಬ್ಬಿಣದ ಗೃಹೋಪಯೋಗಿ ಸಾಮಗ್ರಿಗಳು ಮತ್ತು ವೆಲ್ಡಿಂಗ್ ಕೆಲಸಗಳು ಮುಖ್ಯವಾಗಿ ನಡೆಯುತ್ತಿವೆ. ಸಾಧಾರಣ 50ರಿಂದ 60 ಜನರಿಗೆ ಇಲ್ಲಿ ಉದ್ಯೋಗಾವಕಾಶವಿದೆ.

2) **ಬದ್ರಿಯಾ ವುಡ್ ಇಂಡಸ್ಟ್ರೀಸ್ - ಬದಿಯಡ್ಕ :** ಇಲ್ಲಿ ಮರ ಸಿಗಿಯುವ ಕೆಲಸವು ನಡೆಯುತ್ತಿರುವುದು. ಸಾಧಾರಣ 15 ಜನರಿಗೆ ಉದ್ಯೋಗಾವಕಾಶವಿದೆ.

3) **ಎ. ಕೆ. ವುಡ್ ಇಂಡಸ್ಟ್ರೀಸ್ - ಮಾನ್ಯ :** ಇಲ್ಲಿ ಮರ ಸಿಗಿಯುವುದು, ಫ್ಲೈವುಡ್‌ನ ತಯಾರಿಕೆಗೆ ಬೇಕಾದ ಫ್ರೇಮ್‌ಗಳಂತಹ ಕೆಲಸವು ನಡೆಯುತ್ತಿದೆ. ಇಲ್ಲಿ ಸಾಧಾರಣ 20 ಜನರಿಗೆ ಉದ್ಯೋಗಾವಕಾಶವಿದೆ.

4) **ಮಿನಾರ್ ಸೋಮಿಲ್ - ಪಿಲಾಂಕಟ್ಟೆ :** ಇಲ್ಲಿ ಮರ ಸಿಗಿಯುವ ಕೆಲಸ ನಡೆಯುತ್ತಿದೆ. ಇಲ್ಲಿ 10 ಜನರಿಗೆ ಉದ್ಯೋಗಾವಕಾಶವಿದೆ.

5) **ದಿನೇಶ್ ಬೀಡಿ ವರ್ಕ್ಸ್ :-** ಈ ಪಂಚಾಯತ್‌ನಲ್ಲಿ ದಿನೇಶ್ ಬೀಡಿ ಸೊಸೈಟಿಯ ನಾಲ್ಕು ಶಾಖೆಗಳು ಕಾರ್ಯ ನಿರ್ವಹಿಸುತ್ತದೆ. i) ಬದಿಯಡ್ಕ ii) ಬೇಳ iii) ಸೀತಾಂಗೋಳಿ iv) ಪಳ್ಳ

6) **ಗಂಧದ ಎಣ್ಣೆ ಕಾರ್ಖಾನೆ :** ನೀರ್ಚಾಲ್

7) **ಹುರಿಹಗ್ಗ ತಯಾರಿ ಕೇಂದ್ರ - ಚೇರ್ಕೂಡ್ಲು :** ಇಲ್ಲಿ 8 ಜನರಿಗೆ ಉದ್ಯೋಗಾವಕಾಶವಿದೆ.

8) **ಕಬ್ಬಿಣದ ಕಪಾಟು ತಯಾರಿ - ಬದಿಯಡ್ಕ -1**

9) **ಬೇಕರಿ ಸಾಮಗ್ರಿ ತಯಾರಿ ಕೇಂದ್ರ - 1**

10) **ಮರದ ಪೀಠೋಪಕರಣಗಳ ತಯಾರಿ ಕೇಂದ್ರ - 6**

**ಪಂಚಾಯತಿನಲ್ಲಿರುವ ಗುಡಿ ಕೈಗಾರಿಕೆಗಳು :**

1) ಬುಟ್ಟಿ ಹೆಣೆಯುವುದು
2) ಚಾಪೆ ಹೆಣೆಯುವುದು
3) ಮಣ್ಣಿನ ಮಡಕೆ ತಯಾರಿ
4) ಮರದ ಕೆಲಸ
5) ಅಕ್ಕ ಸಾಲಿಗ

6) ಕಮ್ಮಾರ

7) ಸಮಗಾರ

8) ತಾಮ್ರದ ಪಾತ್ರೆ ರಿಪೇರಿ

9) ಗಾಣದಿಂದ ಎಣ್ಣೆ ತಯಾರಿ

10) ಅವಲಕ್ಕಿ, ಹುರಿಯಕ್ಕಿ ತಯಾರಿ

11) ಕೈ ಮಗ್ಗ

12) ಸುಣ್ಣ ತಯಾರಿ

ಇವುಗಳಲ್ಲಿ ಕೆಲವು ಉತ್ತಮ ಸ್ಥಿತಿಯಲ್ಲಿ ಕಾರ್ಯವೆಸಗುವುದಿಲ್ಲ. ಇನ್ನು ಕೆಲವು ವಿನಾಶದ ಅಂಚಿನಲ್ಲಿದೆ.

ಯಂತ್ರದಿಂದ ಕೆಂಪುಕಲ್ಲು ಕಡಿಯುವ ಕೆಲಸವು ಸಾಧಾರಣ ಎರಡು ವರ್ಷಗಳಿಂದ ಅಭಿವೃದ್ಧಿ ಹೊಂದಿದೆ. ಈಗ ದಿನವೊಂದಕ್ಕೆ ಒಂದು ಯಂತ್ರವು ಸಾವಿರ ಕಲ್ಲುಗಳನ್ನು ಕಡಿಯ ಬಲ್ಲದು. ಇದು ಹತ್ತು- ಹದಿನೈದು ಮಂದಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿ ಕೊಡುತ್ತದೆ. ಕೆಂಪು ಕಲ್ಲಿಗೆ ಈಗ ತುಂಬಾ ಬೇಡಿಕೆ ಇದೆ. ನಮ್ಮ ಪಂಚಾಯತು ಕ್ಷೇತ್ರದಲ್ಲಿ ಕಲ್ಲು ಕಡಿಯುವ ಯಂತ್ರಗಳು ಸುಮಾರು 200 ರಷ್ಟಿರಬಹುದು.

**ನಮ್ಮ ಪಂಚಾಯತಿನಲ್ಲಿ ಕೈಗಾರಿಕಾ ಉಪಯೋಗಕ್ಕೆ ಲಭ್ಯವಾಗುವ ಕಚ್ಚಾ ವಸ್ತುಗಳು :**

1) ಆವೆ ಮಣ್ಣು : ಆವೆ ಮಣ್ಣಿನ ನಿಕ್ಷೇಪವು ಏಣಿಯಪು, ಮಾನ್ಯ, ಪಡುಮುಂಡೋಡು ಎಂಬೀ ಸ್ಥಳಗಳಲ್ಲಿ ಅಧಿಕವಾಗಿ ಕಂಡು ಬರುತ್ತದೆ.

2) **ಗೇರು ಬೀಜ :** ಗುಡ್ಡ ಪ್ರದೇಶಗಳಲ್ಲಿ ಹೇರಳವಾಗಿ ಬೆಳೆಯುತ್ತದೆ.

3) ಅಡಿಕೆ, ಹಾಳೆ, ಸೋಗೆ, ಅಡಿಕೆ ಸಿಪ್ಪೆ.

4) ತೆಂಗು, ಮಡಲು, ತೆಂಗಿನ ಸಿಪ್ಪೆ, ಗೆರಟೆ, ಕೊಬ್ಬರಿ

5) ರಬ್ಬರು

6) ಭತ್ತ, ಉಮಿ

7) ಚಾಪೆ, ಒಲಿ

8) ಮಾದೆರಿ ಬಳ್ಳಿ............

ಈ ಮೇಲಿನ ಕಚ್ಚಾ ವಸ್ತುಗಳು ಸರಿಯಾದ ವ್ಯವಸ್ಥೆಯಲ್ಲಿ ಉಪಯೋಗಿಸಲ್ಪಡುತ್ತಿಲ್ಲ.

**ಕೈಗಾರಿಕಾ ರಂಗದಲ್ಲಿ ಈಗ ಕಂಡು ಬರುವ ಕೆಲವು ಸಮಸ್ಯೆಗಳು**

1) ಪಂಚಾಯತಿನಲ್ಲಿ ಲಭ್ಯವಾಗುವ ಕಚ್ಚಾ ವಸ್ತುಗಳು ಪೂರ್ಣ ಪ್ರಮಾಣದಲ್ಲಿ ಉಪಯೋಗಿಸಲ್ಪಡುವುದಿಲ್ಲ.

2) ಕೈಗಾರಿಕಾ ರಂಗದಲ್ಲಿ ಮಹಿಳೆಯರ ಪ್ರಾತಿನಿಧ್ಯ ತುಂಬಾ ಕಡಿಮೆಯಾಗಿರುವುದು.

3) ಕೈಗಾರಿಕಾ ಅಭಿವೃದ್ಧಿಗೆ ಸರಕಾರದಿಂದ ಸಕಾಲದಲ್ಲಿ ಆರ್ಥಿಕ ಸಹಾಯವು ಸಿಗದಿರುವುದು.

4) ಹೆಚ್ಚಿನ ಲಾಭದಾಯಕವಲ್ಲದ ಕೈಗಾರಿಕೆಗಳನ್ನು ನಡೆಸಲು ಜನರು ಮುಂದಾಗುವುದಿಲ್ಲ.

5) ಕೈಗಾರಿಕೆಗಳ ಕುರಿತಾದ ಹೆಚ್ಚಿನ ತಿಳುವಳಿಕೆಗಳು ಇಲ್ಲದಿರುವುದು.

6) ಸ್ವಯಂ ಉದ್ಯೋಗವನ್ನು ನಡೆಸಲು ಅಭಿರುಚಿ ಇಲ್ಲದಿರುವುದು.

7) ಪರಂಪರಾಗತ ಗುಡಿ ಕೈಗಾರಿಕೆಗಳಿಗೆ ಸೂಕ್ತ ಪ್ರೋತ್ಸಾಹ ದೊರಕುವುದಿಲ್ಲ.

8) ಕೈಗಾರಿಕಾ ಉತ್ಪನ್ನಗಳ ಮಾರಾಟಕ್ಕಾಗಿ ಸೂಕ್ತ ಮಾರುಕಟ್ಟೆ ಇಲ್ಲದಿರುವುದು.

9) ಉತ್ತಮ ತಾಂತ್ರಿಕ ಜ್ಞಾನದ ಕೊರತೆ.

10) ವಿದ್ಯುತ್ತಿನ ಕೊರತೆ.

11) ಸ್ಥಳಾವಕಾಶಗಳ ಕೊರತೆ

12) ಆರ್ಥಿಕ ಕೊರತೆ

ಪರಿಹಾರಗಳು :

1) ಬುಟ್ಟಿ ಹೆಣೆಯುವುದು, ಮಡಕೆ ಮಾಡುವುದು, ಚಾಪೆ ಹೆಣೆಯುವುದು, ಮರದ ಕೆಲಸ, ಕಬ್ಬಿಣದ ಕೆಲಸ ಇತ್ಯಾದಿಗಳಿಗೆ ಪ್ರೋತ್ಸಾಹ.
2) ಮೇಣದ ಬತ್ತಿ ತಯಾರಿ, ಪ್ಲಾಸ್ಟಿಕ್ ಬ್ಯಾಗ್ ತಯಾರಿ, ಆಗರ್ ಬತ್ತಿ ತಯಾರಿ, ಕಾಗದದ ಲಕೋಟೆ ತಯಾರಿಗೆ ಪ್ರೋತ್ಸಾಹ.
3) ಹುರಿಹಗ್ಗ ತಯಾರಿ, ಸಾಬೂನು ತಯಾರಿ, ಹಾಳೆಯಿಂದ ಪ್ಲೇಟ್ - ಕಪ್ಪುಗಳ ತಯಾರಿಗೆ ಪ್ರೋತ್ಸಾಹ.
4) ಆವೆ ಮಣ್ಣು ಮತ್ತು ಸಿಮೆಂಟ್ ಇಟ್ಟಿಗೆಗಳ ತಯಾರಿ.
5) ರಬ್ಬರ್ ಶೀಟ್ ತಯಾರಿ.
5) ಸುಪಾರಿ, ಪೈಂಟ್, ತಯಾರಿ.
7) ಗೇರು ಬೀಜ ಸಂಸ್ಕರಣಾ ಕೇಂದ್ರ.
8) ಕೋಳಿ ಸಾಕಣಾ ಕೇಂದ್ರ.
9) ಧಾನ್ಯ ಹುಡಿ ಮಾಡುವುದು, ತೆಂಗಿನೆಣ್ಣೆ ತಯಾರಿಸುವ ಮಿಲ್ಲು.
10) ಸೋಲಾರ್ ಚೈತನ್ಯ ಉಪಕರಣಗಳ ತಯಾರಿ ಮತ್ತು ಮಾರಾಟ ಕೇಂದ್ರ.
11) ಆವೆ ಮಣ್ಣಿನ ವಿವಿಧ ಕರಕುಶಲ ಸಾಮಗ್ರಿಗಳ ತಯಾರಿ.
12) ಕೈಮಗ್ಗ, ರೇಶ್ಮೆ ಸಂಸ್ಕರಣಾ ಕೇಂದ್ರ
13) ಕೆಂಪು ಕಲ್ಲು ಕಡಿಯುವವರಿಗೆ ಸಾಲ ಸೌಲಭ್ಯ
14) ಕರಕುಶಲ ವಸ್ತುಗಳ ತಯಾರಿ
15) ಟೈಲರಿಂಗ್ ಮತ್ತು ಎಂಬ್ರೋಯಿಡರಿ ಕೆಲಸ, ಬಳೆ ತಯಾರಿ
16) ಹಪ್ಪಳ, ಸಂಡಿಗೆ, ಚಿಪ್ಸ್, ಉಪ್ಪಿನಕಾಯಿ, ವಿವಿಧ ರೀತಿಯ ಸಂಸ್ಕರಿತ ಆಹಾರ ಪೊಟ್ಟಣಗಳ ತಯಾರಿ.
17) ವಿವಿಧ ಪಾನೀಯಗಳ ತಯಾರಿ.
18) ಪ್ಲಾಸ್ಟಿಕ್ ವಸ್ತುವಿನಿಂದ ಕರಕುಶಲ ವಸ್ತುಗಳ ತಯಾರಿ.
19) ಪಿ.ವಿ.ಸಿ. ಪೈಪುಗಳ ತಯಾರಿ.
20) ಸ್ಕ್ರೀನ್ ಪ್ರಿಂಟಿಂಗ್
21) ಸೂಕ್ತ ಮಾರುಕಟ್ಟೆಗಳ ನಿರ್ಮಾಣ.

# 11 ಸಾರಿಗೆ ಮತ್ತು ಚೈತನ್ಯ

ಬದಿಯಡ್ಕ ಪಂಚಾಯತು ಕೃಷಿ ಪ್ರಧಾನವಾದ ವಿಸ್ತಾರವಾದ ಭೂ ಪ್ರದೇಶವನ್ನು ಹೊಂದಿದೆ. ಮಾತ್ರವಲ್ಲದೆ ಹಲವಾರು ಸಮಸ್ಯೆಗಳ ಆಗರವೂ ಆಗಿದೆ. ಹೆಚ್ಚಿನ ಪ್ರದೇಶಗಳು ಗುಡ್ಡ-ಇಳಿಜಾರುಗಳಿಂದ ಕೂಡಿದ್ದು ಸಮತಲವಾಗಿರುವ ಪ್ರದೇಶಗಳು ಬಹಳ ಕಡಿಮೆ. ರಸ್ತೆಗಳ ನಿರ್ಮಾಣ ತೀರಾ ಕಷ್ಟ ಸಾಧ್ಯವೆನಿಸಿದೆ. ಗ್ರಾಮೀಣ ಪ್ರದೇಶಗಳಲ್ಲಿರುವ ಜನರ ಅನುಕೂಲತೆಯ ಹಿತ ದೃಷ್ಟಿಯಿಂದ ಹೆಚ್ಚಿನ ಪ್ರದೇಶಗಳಿಗೆ ರಸ್ತೆಯ ಸಂಪರ್ಕ ತೀರಾ ಅವಶ್ಯವೆನಿಸಿದೆ.

ಹಿಂದೆ ಸರಕು ಸಾಗಾಟವು ತಲೆ ಹೊರೆಯಿಂದ, ಎತ್ತಿನ ಗಾಡಿಯಿಂದ ನಡೆಯುತ್ತಾ ಇತ್ತು. ಆದರೆ ಇದೀಗ ಪರಿಸ್ಥಿತಿ ತೀರಾ ಬದಲಾಗಿದೆ. ಎತ್ತಿನ ಗಾಡಿಗಳು ಮಾಯವಾಗುತ್ತಿದ್ದು ಅದರ ಬದಲಾಗಿ ಟೆಂಪೋ, ರಿಕ್ಷಾ ಮೊದಲಾದವುಗಳು ಓಡಾಡುವುದನ್ನು ಕಾಣುತ್ತಿದ್ದೇವೆ. ಮನುಷ್ಯ ಜೀವನದ ಪ್ರಮುಖ ಅವಶ್ಯಕತೆಗಳಲ್ಲಿ ರಸ್ತೆಯ ಸಂಪರ್ಕವು ಪ್ರಾಮುಖ್ಯ ಪಾತ್ರವನ್ನು ವಹಿಸುತ್ತದೆ. ಈಗಾಗಲೇ ಸರಕಾರದ ಬಳಿ ಹಲವಾರು ಯೋಜನೆಗಳು ನಿಷ್ಕ್ರಿಯವಾಗಿವೆ. ಕೆಲವು ಯೋಜನೆಗಳು ಆಂಶಿಕವಾಗಿ ಜಾರಿಗೊಳಿಸಲ್ಪಟ್ಟಿವೆ. ಇನ್ನೂ ಹಲವಾರು ಯೋಜನೆಗಳು ಜಾರಿಗೊಳಿಸಲ್ಪಡಬಹುದೆಂದು ನಿರೀಕ್ಷಿಸಬಹುದು. ಇಂತಹ ಯೋಜನೆಗಳಲ್ಲಿ ಡಾಮರೀಕರಣ, ಹೊಸ ರಸ್ತೆ ನಿರ್ಮಾಣ, ಕಾಲು ದಾರಿ ನಿರ್ಮಾಣ, ಸಂಕಗಳು ಮತ್ತು ತಂಗುದಾಣಗಳು ಸೇರಿವೆ. ವಸತಿ ಸೌಕರ್ಯಗಳ ಅಂಕೆ-ಸಂಖ್ಯೆಗಳನ್ನು ಗಮನಿಸಿದರೆ ಈಗ ಪ್ರಸ್ತುತ ಇರುವ ವ್ಯವಸ್ಥೆಗಳು ತೀರಾ ಅಸಮರ್ಪಕ.

ಪಂಚಾಯತು ಕ್ಷೇತ್ರದಲ್ಲಿ ಹಾದುಹೋಗುವ ಪ್ರಧಾನ ರಸ್ತೆಗಳ ಕುರಿತು ಒಂದು ಅವಲೋಕನ ಮಾಡಬಹುದು. 'ಸ್ಟೇಟ್ ಹೈವೆ' ಎಂದು ಕರೆಯಲಾಗುವ ಡಾಮರೀಕೃತ ಮಾರ್ಗವು ಕಲ್ಲಡ್ಕ-ಕಾಂಞಂಗಾಡ್ ಎಂಬ ಹೆಸರಿನಿಂದ ನೆಲ್ಲಿಕಟ್ಟೆಯಿಂದ ಉಕ್ಕಿನಡ್ಕದ ವರೆಗೆ ವ್ಯಾಪಿಸಿಕೊಂಡಿದೆ. P.W.D.ಯಿಂದ ನಿರ್ವಹಿಸಲ್ಪಡುವ ಡಾಮರೀಕೃತ ಪ್ರಧಾನ ರಸ್ತೆಯು ಪಂಜಿಕಲ್ಲಿನಿಂದ ಕುಂಬಳೆವರೆಗೆ ವ್ಯಾಪಿಸಿಕೊಂಡಿದೆ. ಈ ಮಾರ್ಗಗಳಲ್ಲಿ ಧಾರಾಳವಾಗಿ ಖಾಸಗಿ ಬಸ್ಸುಗಳು, ಕೆಲವು ಸಾರಿಗೆ ಇಲಾಖೆಯ ಬಸ್ಸುಗಳೂ ಓಡಾಡುತ್ತಿವೆ. ನೀರ್ಚಾಲಿನಿಂದ ಕೊಲ್ಲಂಗಾನದವರೆಗೆ ವ್ಯಾಪಿಸಿಕೊಂಡಿರುವ ಡಾಮರೀಕೃತ ರಸ್ತೆಗಳಾದ ನೀರ್ಚಾಲು - ಕೊಲ್ಲಂಗಾನ, ಕನ್ನೆಪ್ಪಾಡಿ-ಪಳ್ಳ, ಬದಿಯಡ್ಕ-ಕುಂಬ್ಡಾಜೆ, ಬದಿಯಡ್ಕ-ವಿದ್ಯಾಗಿರಿ ಮಾರ್ಗಗಳಲ್ಲಿ ಖಾಸಗಿ ಬಸ್ಸುಗಳ ಸೇವಾ ವ್ಯವಸ್ಥೆ ಇದೆ. ಪಳ್ಳತ್ತಡ್ಕದಿಂದ ಪುತ್ರಕಳದ ವರೆಗೆ ಇರುವ ಡಾಮರೀಕೃತ ಮಾರ್ಗ, ಬದಿಯಡ್ಕದಿಂದ ಪಿಲಾಂಕಟ್ಟೆಯವರೆಗೆ ಇರುವ ಡಾಮರೀಕೃತ ಮಾರ್ಗಗಳಲ್ಲಿಯೂ ಖಾಸಗಿ ಬಸ್ಸಿನ ವ್ಯವಸ್ಥೆ ಇದೆ. ಈ ರಸ್ತೆಗಳಲ್ಲಿ ಸಾಧ್ಯವಿದ್ದಷ್ಟು ಸ್ಥಳಗಳಲ್ಲಿ ಪ್ರಯಾಣಿಕರ ಅನುಕೂಲತೆಗಾಗಿ ತಂಗುದಾಣಗಳನ್ನು ವ್ಯವಸ್ಥೆಗೊಳಿಸಲಾಗಿದೆ. ಇವುಗಳ ಪೈಕಿ ನೀರ್ಚಾಲಿನಲ್ಲಿ ಇರುವ ತಂಗುದಾಣವೊಂದನ್ನು ಸ್ಥಳೀಯ ಜ್ಯೋತಿ ಸ್ಪೋರ್ಟ್ಸ್ ಮತ್ತು ಆರ್ಟ್ಸ್ ಕ್ಲಬ್ಬಿನವರು ಕಟ್ಟಿಸಿರುತ್ತಾರೆ. ಇನ್ನೂ ಹಲವೆಡೆಗಳಲ್ಲಿ ಪ್ರಯಾಣಿಕರ ಅನುಕಾಲತೆಗಾಗಿ ತಂಗುದಾಣಗಳ ಅವಶ್ಯಕತೆ ಇದೆ. ನೆರೆಯ ಕರ್ನಾಟಕ ರಾಜ್ಯದ ವ್ಯವಸ್ಥೆಯನ್ನು ಹೋಲಿಸಿದರೆ ನಮ್ಮ ರಸ್ತೆಗಳ ಡಾಮರೀಕರಣದ ಗುಣಮಟ್ಟ ಉತ್ತಮವಾಗಿದೆ. ಈ ಕ್ಷೇತ್ರದಲ್ಲಿ ಇನ್ನೂ ಹಲವು ಮಾರ್ಗಗಳ ಡಾಮರೀಕರಣ ಆಗಬೇಕಾಗಿದೆ. ಕರಾವಳಿಯಲ್ಲಿ ರೂಪಿತವಾದ N.H.17ರ ನಿರ್ಮಾಣಕ್ಕೆ ಮೊದಲು ಈ ಪಂಚಾಯತು ಕ್ಷೇತ್ರದಲ್ಲಿ ಹಾದು ಹೋಗುವ ಪ್ರಧಾನ ರಸ್ತೆಯು ಅಂತರ ರಾಜ್ಯ ಸಾರಿಗೆಗೆ ಆಧಾರವಾಗಿತ್ತು. ಆದರೆ ಮೇಲೆ ಹೇಳಿದ ರಸ್ತೆಯ ರೂಪೀಕರಣದ ನಂತರ ವಾಹನ ಸಂಚಾರದ ಸಂಖ್ಯೆಯು ತಾತ್ಕಾಲಿಕವಾಗಿ ಇಳಿಮುಖವಾದರೂ ಕಾಲಕ್ರಮದಲ್ಲಿ ವಾಹನಗಳ ಸಂಖ್ಯೆಯು ಹತ್ತುಪಟ್ಟಿನಷ್ಟು ಜಾಸ್ತಿಯಾಗಿರುವುದು ಸರ್ವವಿದಿತ. ಪಂಚಾಯತಿನ ಸುಮಾರು ಶೇಕಡಾ 10ರಷ್ಟು ಜನರ ಮನೆಗಳಿಗೆ ಸಾರಿಗೆ ವ್ಯವಸ್ಥೆಯಿದೆ. ಅಭಿವೃದ್ಧಿ ಹೊಂದುತ್ತಲಿರುವ ಈ ಪ್ರದೇಶದಲ್ಲಿ ರಸ್ತೆಗಳ ನಿರ್ಮಾಣದ ಅವಶ್ಯಕತೆಗಳನ್ನು ಮನಗಾಣಬಹುದು.

ಸರಕು ತುಂಬಿದ ಲೋರಿಗಳ ಸಂಚಾರದಿಂದ ರಸ್ತೆಗಳ ಗುಣಮಟ್ಟ ಅವನತಿಯ ಕಡೆಗೆ ಸಾಗುತ್ತಿದೆ. ವಾತಾವರಣ ಮಲಿನೀಕರಣದ ದೃಷ್ಟಿಯಿಂದ ಡಾಮರೀಕೃತ ರಸ್ತೆಗಳು ಅತೀ ಅವಶ್ಯ. ಹಳ್ಳಿಗಳ ಮೂಲೆಗಳಿಗೆ ನಡೆದು ಹೋಗುವುದಕ್ಕೆ ಕಾಲು ದಾರಿಗಳ ಅವಶ್ಯಕತೆ ಇದೆ. ಇರುವ ದಾರಿಗಳ ನವೀಕರಣ, ಹೊಸ ದಾರಿಗಳ ನಿರ್ಮಾಣ, ಇತ್ಯಾದಿ ಆಗಲೇ ಬೇಕಾದ ಕಾರ್ಯಗಳಾಗಿವೆ.

**ಪರಿಹಾರೋಪಾಯಗಳು :** ಮೇಲೆ ತಿಳಿಸಿದ ಸಮಸ್ಯೆಗಳಿಗೆ ಕೆಲವು ಯೋಜನೆಗಳನ್ನು ಹಾಕಿ ಪರಿಹಾರವನ್ನು ರೂಪಿಸಲು ಸಾಧ್ಯವಿದೆ. ಈ ಕೆಳಗೆ ಸೂಚಿಸಿದ ಪಟ್ಟಿಯಲ್ಲಿ ಕೆಲವು ರಸ್ತೆ ನಿರ್ಮಾಣಗಳ ಯೋಜನೆಯನ್ನು ನೀಡಲಾಗಿದೆ.

**ಹೊಸ ರಸ್ತೆ ನಿರ್ಮಾಣ ಯೋಜನೆ**

| ಕ್ರಮ ನಂಬ್ರ | ಎಲ್ಲಿಂದ | ಎಲ್ಲಿಗೆ | ದೂರ(ಕಿ.ಮೀ.) | ದಾರಿ |
|---|---|---|---|---|
| 1. | ಗುತ್ತು | ಚಾಲಕ್ಕೋಡು | 2 | — |
| 2. | ಪುತ್ರಕ್ಕಳ | ಕಂಗಿಲ | 2 | — |
| 3. | ಮಾಡತ್ತಡ್ಕ | ಪುಳಿಯಡಿ | 1 | ಕಾಂತಿಮಾರು |
| 4. | ಬನತ್ತಡಿ | ಪೆರಡಾಲ ಮಸೀದಿ | 1 | — |
| 5. | ಚೆಡೆಕಲ್ಲು | ಚುಕ್ಕಿನಡ್ಕ | 2 | ಪಲ್ಲಾಚೆ |
| 6. | ಬೀಜಂತಡ್ಕ | ಚೆಡೆಕಲ್ಲು ಬಾಲವಾಡಿ | 2 | ಇಳಂತೋಡಿ |
| 7. | ಬೋಳುಕಟ್ಟೆ | ಕನಕಪ್ಪಾಡಿ | 1 | — |
| 8. | ದಿನೇಶ್ ಬೀಡಿ ಕಟ್ಟಡ | ಸರಕಾರಿ ಆಸ್ಪತ್ರೆ | 1/2 | — |
| 9. | ಬದಿಯಡ್ಕ ಕೈಕಂಬ | ಕೆಡೆಂಜಿ ದೇವಸ್ಥಾನ | 1/2 | — |
| 10. | ಚುಳ್ಳಿಕ್ಕಾನ | ಉಬ್ರಂಗಳ ದೇವಾಲಯ | 1/2 | — |
| 11. | ದರ್ಬೆತಡ್ಕ ಶಾಲೆ | ಪೆರ್ಡಾಣ ಮೂಲೆ | 1 | — |
| 12. | ಚೌಕಾರು | ಕುಡ್ಪಿನಡ್ಕ | 1 | — |
| 13. | ಚೆಡೆಕಲ್ಲು | ಮಾನ್ಯ | 2 | — |
| 14. | ಕೊಲ್ಲಂಗಾನ | ಏವುಂಜೆ | 2 | — |
| 15. | ಮಾನ್ಯ | ಕಾರ್ಮಾರು | 1 | — |
| 16. | ಏರ್ಪಕಟ್ಟೆ | ಚೆಡೆಕಲ್ಲು | 1 1/2 | ಓಟ್ಟಡ್ಕ |
| 17. | ವಾಂತಿಚ್ಚಾಲು | ಮುಂಡಿತ್ತಡ್ಕ | 1 | ಪಳ್ಳ |
| 18. | ಕರಿಂಬಿಲ | ಕುಂಟಾಲು | 2 | ಗಿರಿಜನ ಕೊಲೋನಿ |
| 19. | ವಾಂತಿಚ್ಚಾಲು | ಬೈಕುಂಜ | 2 | — |
| 20. | ಪಳ್ಳತ್ತಡ್ಕ ವನ | ಬಣ್ಪುತಡ್ಕ | 2 | — |
| 21. | ಕನ್ನೆಪ್ಪಾಡಿ | ಗೋಳಿಯಡ್ಕ | 2 | — |
| 22. | ಮಾಡತ್ತಡ್ಕ | ಚೋಯಿಮೂಲೆ | 1 1/2 | ಕೊಲೋನಿ |
| 23. | ಗೋಳಿಯಡ್ಕ ಕೊಲೊನಿ | ಪೆರಡಾಲ ದೇವಾಲಯ | 3 | — |
| 24. | ಮಂಟಮೆ | ಏಳ್ಕಾನ | 2 | ಬಂಡಾರಡ್ಕ |
| 25. | ಮಂಟಮೆ | ಗುಣಾಜೆ | 1 1/2 | ಕೋಟೆ |
| 26. | ಬಾಪು ಮೂಲೆ | ಕಾಯರ್‌ಕಯ ದೈವಸ್ಥಾನ | 2 | — |
| | ಜುಮ್ಮಾ | | 40 ಕಿ.ಮೀ. | |

ಈಗ ಅಸ್ತಿತ್ವದಲ್ಲಿರುವಂತಹ ಮಾರ್ಗಗಳಲ್ಲಿ ಕೆಲವಂತೂ ತೀರಾ ನಾದುರಸ್ತಿಯಲ್ಲಿವೆ. ಇವುಗಳನ್ನು ಸಂಚಾರ ಯೋಗ್ಯವಾಗುವಂತೆ ಮಾಡಬೇಕಾಗಿದೆ. ಮಳೆಗಾಲದ ನೀರು ಹರಿಯುವಿಕೆಯಿಂದ ಕೆಲವು ಮಾರ್ಗಗಳು ಸಂಚಾರಕ್ಕೆ ಅಯೋಗ್ಯವಾಗುತ್ತವೆ. ಇದಕ್ಕೆ ದುರಸ್ತಿ ಆಗಬೇಕಾಗಿದೆ. ಕೆಲವು ಪ್ರಾಮುಖ್ಯ ರಸ್ತೆಗಳನ್ನು ಗುರುತಿಸಿ ಹೆಚ್ಚಿನ ವಾಹನ ಸಂಚಾರವಿರುವ ವಿಷಯವನ್ನು ಲಕ್ಷಿಸಿ ಸಂಪೂರ್ಣ ಡಾಮರೀಕರಣವಾಗಬೇಕಾದ ವಿವರಗಳ ಯೋಜನೆಯನ್ನು ಕೆಳಗೆ ನಿರೂಪಿಸಲಾಗಿದೆ.

## ಡಾಮರೀಕೃತವಾಗ ಬೇಕಾದ ರಸ್ತೆಗಳ ವಿವರ

| ನಂಬ್ರ | ಎಲ್ಲಿಂದ | ಎಲ್ಲಿಗೆ | ದಾರಿ |
|---|---|---|---|
| 1. | ಉರುಳಿತ್ತಡ್ಕ | ನಿಡಗಳಿ | — |
| 2. | ನೀರ್ಚಾಲು | ಏಣಿಯರ್ಪು | — |
| 3. | ಬಳ್ಳಂಬೆಟ್ಟು | ಪರ್ತಿಕ್ಕಾರು | — |
| 4. | ಕಾಡಮನೆ | ಮಾಡತ್ತಡ್ಕ | — |
| 5. | ಬದಿಯಡ್ಕ | ಪೆರಡಾಲ | ಚಿನ್ಮಯ |
| 6. | ಬದಿಯಡ್ಕ | ಪೆರಡಾಲ | ಪಂಜಿತ್ತಡ್ಕ |
| 7. | ಪಟ್ಟಾಜೆ | ಚೆಡೆಕಲ್ಲು ನರ್ಸರಿ | — |
| 8. | ಬೀಜಂತಡ್ಕ | ಚೆಡೆಕಲ್ಲು ಮಸೀದಿ | — |
| 9. | ಮೂಕಂಪಾರೆ | ಕೂಳಕ್ಕೋಡ್ಳು | — |
| 10. | ಕನ್ನೆಪ್ಪಾಡಿ | ಪಟ್ಟಾಜೆ | ಶಾಂತಿಪಳ್ಳ |
| 11. | ಮೂಕಂಪಾರೆ | ಪಳ್ಳಿಕಂಡ | — |
| 12. | ಮೂಕಂಪಾರೆ | ಮುಳಿಕ್ಕಜೆ ಮೂಲೆ | ಕೊಳಕ್ಕೋಡ್ಳು |
| 13. | ಚರಳಡ್ಕ | ಚೆಡೇಕಲ್ಲು | — |
| 14. | ಬೀಜಂತಡ್ಕ | ಬಾರಡ್ಕ | — |
| 15. | ಬೀಜಂತಡ್ಕ | ಈಳಂತೋಡಿ | — |
| 16. | ಚೆನ್ನಾರೆಕಟ್ಟೆ | ಬದಿಯಡ್ಕ ಮೇಗಿನಪೇಟೆ | ರಿಜಿಸ್ಟ್ರಿ ಆಫೀಸು |
| 17. | ಚೆನ್ನಾರ ಕಟ್ಟೆ | ಚಂಬ್ಲಿತ್ತಿಮಾರು | — |
| 18. | ಮೀನು ಮಾರುಕಟ್ಟೆ | ವಳಮ್ಮಲೆ | — |
| 19. | ಚೆನ್ನಾರೆ ಕಟ್ಟೆ | ವಳಮ್ಮಲೆ | — |
| 20. | ಕಾಡಮನೆ | ವಿದ್ಯಾಗಿರಿ | — |
| 21. | ವಿದ್ಯಾಗಿರಿ | ಕಡಾರು | — |
| 22. | ಕುಂಡೆಪ್ಪಾಡಿ | ಚುಳ್ಳಿಕ್ಕಾನ | — |
| 23. | ಬಾರಡ್ಕ | ಚುಳ್ಳಿಕ್ಕಾನ | — |
| 24. | ವಿದ್ಯಾಗಿರಿ ಬಸ್‌ಸ್ಟೋಪ್ | ವಿದ್ಯಾಗಿರಿ ಶಾಲೆ | — |
| 25. | ಕಟ್ಟೆಯಂಗಡಿ | ಕುಂಜಾರು | — |
| 26. | ಕಟ್ಟೆಯಂಗಡಿ | ಮಜಿರ್ಪಳ್ಳ ಕಟ್ಟೆ | — |
| 27. | ಪೆರಿಯಡ್ಕ | ಲಕ್ಷಂವೀಡು ಕೊಲನಿ | — |
| 28. | ಕುದ್ರೆಪ್ಪಾಡಿ | ಪೆರಡಾನ ಮೂಲೆ | — |
| 29. | ದರ್ಬೆತ್ತಡ್ಕ ಶಾಲೆ | ಪೆರ್ಡಾನ ಮೂಲೆ | — |
| 30. | ಮಾನ್ಯ | ಎರ್ಟೆಕ್ಕಾಯರು | ದಾರಿ ಕಡವು |
| 31. | ಮುಳಿಪರಂಬು | ನೆಲ್ಲಿಕಟ್ಟೆ | ಮುಂಡೋಡು |
| 32. | ಕಲ್ಲಕಟ್ಟ | ಎರ್ಪಕಟ್ಟೆ | — |
| 33. | ಕಡಂಬಳ | ಕುಕ್ಕಂಕೋಡ್ಳು | — |
| 34. | ಬೊಳುಂಬು | ಕುಂಜಾರು | — |

| ನಂಬ್ರ | ಎಲ್ಲಿಂದ | ಎಲ್ಲಿಗೆ | ದಾರಿ |
|---|---|---|---|
| 35. | ಕೊರಂಗ ತೊಟ್ಟಿ | ಬಿರ್ಮನಡ್ಕ | — |
| 36. | ಕುರ್ಪಿನಡ್ಕ | ಕುಂಜಾರು ಮಸೀದಿ | — |
| 37. | ಪೆರ್ಮುಂಡ T.V.ಕೇಂದ್ರ | ಚಾಲಿತ್ತಡ್ಕ | — |
| 38. | ಕುಂಟಾಲು | ನೆಲ್ಲಿಕಳಯ | — |
| 39. | ಉಪ್ಲೇರಿ | ವಾಂತಿಚ್ಚಾಲು | — |
| 40. | ಪಳ್ಳತ್ತಡ್ಕ | ಚೊಟ್ಟೆತ್ತಡ್ಕ ಕೊಲನಿ | — |
| 41. | ಕನ್ನೆಪ್ಪಾಡಿ | ಪೆರಡಾಲ ದೈವಸ್ಥಾನ | ತಲ್ಪಣಾಜೆ |
| 42. | ಮಾಡತಡ್ಕ | ಸೇಡಿಕಟ್ಟೆ ದೇವಾಲಯ | — |
| 43. | ದೇವರಮೆಟ್ಟು | ಕುಂಟಿಕಾನ ಮಠ | — |
| 44. | ಮಾಡತ್ತಡ್ಕ | ಮಿಂಚಿನಡ್ಕ | — |
| 45. | ಪಾಡ್ಯಡ್ಕ | ನಿಡುಗಳ | — |
| 46. | ಮಂಟಮೆ | ಏಳ್ಕಾನ | ಬಂಡಾರಡ್ಕ |
| 47. | ಇಕ್ಕೇರಿ ದೇವಾಲಯ | ಕೊಟ್ರುಂಜ | — |
| 48. | ಚೆನ್ನೆಗುಳಿ | ಕುಂಟಿಕಾನ | — |
| 49. | ಕಾನತ್ತಿಲ | ಗೋಳಿಯಡ್ಕ | — |
| 50. | ಮಾಡತ್ತಡ್ಕ | ಶೇಂತಾರು | — |
| 51. | ಪೆರಡಾಲ | ಮಕ್ಕಿಕಾನ | — |

ಸಾರಿಗೆ ಸಮಸ್ಯೆಯು ಎಷ್ಟು ಗಮನಿಸಿದರೂ ಮುಗಿಯುವಂತಹುದ್ದಲ್ಲ. ಸೌಕರ್ಯಕ್ಕಾಗಿ ಇನ್ನೂ ಕೆಲವು ರಸ್ತೆಗಳ ವಿಸ್ತರಣೆ ತೀರಾ ಅವಶ್ಯಕ ಎನಿಸುತ್ತದೆ. ಕೆಲವು ಪ್ರಾಮುಖ್ಯ ಯೋಜನೆಗಳನ್ನು ಈ ಕೆಳಗೆ ಸೂಚಿಸಲಾಗಿದೆ.

### ರಸ್ತೆಗಳ ವಿಸ್ತರಣೆಯ ವರದಿ

| ನಂಬ್ರ | ಅಸ್ತಿತ್ವದಲ್ಲಿರುವ ರಸ್ತೆ | ಎಲ್ಲಿಂದ | ಎಲ್ಲಿಗೆ | ದಾರಿ |
|---|---|---|---|---|
| 1. | ನೀರ್ಚಾಲ್-ರತ್ನಗಿರಿ | ರತ್ನಗಿರಿ | ಬಿ. ಸಿ. ರೋಡ್ | ನಿಡುಗಳ |
| 2. | ಬಂಟ್ರಡ್ಕ-ಬೇಳ | ಬಂಟ್ರಡ್ಕ | ಮುಗು | — |
| 3. | ಪಳ್ಳತ್ತಡ್ಕ-ಏತಡ್ಕ | ಚಾಲಕ್ಕೋಡು | ಗುತ್ತು | — |
| 4. | ವಿದ್ಯಾಗಿರಿ ಶಾಲೆ-ಕಡಾರು | ವಿದ್ಯಾಗಿರಿ ಶಾಲೆ | ಕೊಲೊನಿ | — |
| 5. | ಬದಿಯಡ್ಕ-ಬಾಂಜತ್ತಡ್ಕ | ಬಾಂಜತ್ತಡ್ಕ | ಕುಂಟಿಕಾನ | — |
| 6. | ವಿದ್ಯಾಗಿರಿ-ಓಡಂಗಲ್ಲು | ವಿದ್ಯಾಗಿರಿ | ಕಾಯರ್‌ಕಯ | — |

ಗ್ರಾಮೀಣ ಪ್ರದೇಶಗಳಲ್ಲಿರುವ ಪುಟ್ಟ ಮಕ್ಕಳಿಗೆ ದೂರದ ವಿದ್ಯಾಲಯಗಳಿಗೆ ನಡೆದು ಹೋಗಲು ಕಾಲುದಾರಿಗಳು ಮತ್ತು ಕಾಲು ಸಂಕಗಳ ಅವಶ್ಯಕತೆಯಿರುತ್ತದೆ. ಗ್ರಾಮೀಣ ನಿವಾಸಿಗಳಿಗೆ ಸಂಪರ್ಕವನ್ನು ಕಲ್ಪಿಸುವ ಮಾಧ್ಯಮಗಳು ಕಾಲುದಾರಿಗಳಾಗಿವೆ. ಕೆಲವು ಕಡೆ ಕಾರಣಾಂತರಗಳಿಂದ ಕಾಮಗಾರಿಗಳಿಗೆ ದುರಸ್ಥಿ ಬೇಕಾಗಬಹುದು. ಇವುಗಳನ್ನು ನಿರ್ಮಿಸುವಲ್ಲಿ ಹಲವು ಸಮಸ್ಯೆಗಳು ಇದಿರಾಗಬಹುದು. ಇವುಗಳ ಪರಿಹಾರಕ್ಕೆ ಸಾರ್ವಜನಿಕ ಸಹಕಾರವು ಅತೀ ಅಗತ್ಯವಾಗಿದೆ. ಖಾಸಗಿ ಪ್ರದೇಶಗಳಲ್ಲಿ ಹಾದು ಹೋಗುವ ಕಾಲುದಾರಿ ಮತ್ತು ಕಾಲು ಸಂಕಗಳಿಗೆ ಪ್ರತ್ಯೇಕ ನಿಯಮಾವಳಿಗಳನ್ನು ರೂಪಿಸಿದರೆ ಸಮಸ್ಯೆಗಳು

ಆಂಶಿಕವಾಗಿ ಪರಿಹಾರವಾಗಬಹುದು. ಕೆಳಗೆ ಸೂಚಿಸಿದ ಯೋಜನಾ ವರದಿಯಲ್ಲಿ ಕೆಲವು ನಿವಾರಣೋಪಾಯವನ್ನು ಕಾಣಬಹುದು.

**ಕಾಲುದಾರಿಗಳ ನಿರ್ಮಾಣದ ಯೋಜನಾ ವಿವರ**

| ನಂಬ್ರ | ಎಲ್ಲಿಂದ | ಎಲ್ಲಿಗೆ | ದೂರ (ಕಿ.ಮೀ) |
|---|---|---|---|
| 1. | ಪುತ್ರಕಳ | ಕಂಗಿಲ | 2 |
| 2. | ಪಳ್ಳತ್ತಡ್ಕ | ನೆಕ್ಕರೆ ಕಳೆಯ | 2 |
| 3. | ಪೆರಡಾಲ ಗುತ್ತು | ಪೆರಡಾಲ ದೇವಾಲಯ | 1 1/2 |
| 4. | ಮಕ್ಕಿಕ್ಕಾನ | ಗೋಳಿಯಡ್ಕ | 2 |
| 5. | ಮಾನ್ಯ ದೇವಾಲಯ | ಪುದುಕೋಳಿ | 8 |
| 6. | ಪಳ್ಳತ್ತಡ್ಕ | ಬೈಕುಂಜೆ | 2 |
| 7. | ವಾಂತಿಚ್ಚಾಲು | ಕರಿಂಬಿಲ | 3 |
| 8. | ಪಳ್ಳತ್ತಡ್ಕ ದೈವಸ್ಥಾನ | ಮಣ್ಣಿಕ್ಕಾನ | 2 |
| 9. | ಬಿರ್ಮಿನಡ್ಕ | ಕೊಲ್ಲಂಗಾನ | 1 |
| 10. | ಪೆರಡಾಲ ಸೇತುವೆ | ಗೋಳಿಯಡ್ಕ | 2 |
| 11. | ಕಾನತ್ತಿಲ | ಮೀಸೆ ಬೈಲು | 1 1/2 |
| 12. | ಚೆನ್ನಾರ್‌ಕಟ್ಟೆ | ವಿದ್ಯಾಗಿರಿ ಶಾಲೆ | 3 |

**ಚೈತನ್ಯ ವಿಭಾಗ :**

ಚೈತನ್ಯಗಳ ಪೈಕಿ ವಿದ್ಯುತ್ ಪ್ರಧಾನ ಪಾತ್ರ ವಹಿಸುತ್ತದೆ. ಆಧುನಿಕ ಯುಗದಲ್ಲಿ ಮನುಷ್ಯನ ನಿತ್ಯ ಜೀವನವು ವಿದ್ಯುತ್ ರಹಿತವಾಗಿ ಮುನ್ನಡೆಯುವುದು ತೀರಾ ದುಸ್ಸಾರ್ಥ. ವಿದ್ಯುತ್ ಚೆತನ್ಯವು ದುರುಪಯೋಗ ಗೊಳ್ಳುತ್ತಿರುವುದು ಸರ್ವವಿದಿತ. ವಿಶಿಷ್ಟವಾದ ಈ ಚೈತನ್ಯ ವಿಶೇಷವನ್ನು ಸದುಪಯೋಗಗೊಳಿಸಿ ಸಮಾಜ ವಿಕಸನಕ್ಕೆ ಸಹಕಾರಿಯಾಗಿ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಈ ಪಂಚಾಯತಿನಲ್ಲಿ ಸುಮಾರು 25 ಟ್ರೇನ್ಸ್‌ಫಾರಮ್‌ಗಳಿದ್ದು ಸುಮಾರು 3,500 ರಷ್ಟು ಬಳಕೆದಾರರಿರುತ್ತಾರೆ. ಈ ಕೆಳಗಿನ ಅಂಕೆ-ಸಂಖ್ಯೆಗಳು ವಿವಿಧ ಬಳಕೆದಾರರ ಮಾಹಿತಿಯನ್ನು ನೀಡಬಹುದು.

| ನಂಬ್ರ | ಬಳಕೆದಾರರು | ಸಂಖ್ಯೆ | ಉಪಯೋಗದ ಸತ್ವ |
|---|---|---|---|
| 1 | ಗೃಹಬಳಕೆ | 2100 | ಸಿಕ್ಕಿಲ್ಲ |
| 2 | ವ್ಯಾಪಾರಿಗಳು | 650 | |
| 3 | ಕೃಷಿಕರು | 710 | |
| 4 | ಇತರ | 40 | |
| | ಒಟ್ಟು ಸಂಖ್ಯೆ - | 3500 | |

ಚೈತನ್ಯ ಮೂಲಗಳು ಹಲವು. ಗೋಬರ್ ಗಾಸ್, ಉರುವಲು, ಸೀಮೆ ಎಣ್ಣೆ, ಗಾಳಿ ಚಕ್ರ, ಡೀಸೆಲ್ ಮೊದಲಾದವುಗಳಿಂದ ಚೈತನ್ಯವನ್ನು ಪಡೆಯಲಾಗುವುದು. ಗಾಳಿ ಚೈತನ್ಯವು ಇತ್ತೀಚೆಗೆ ಪರಿಸರದ ಪರಿಸ್ಥಿತಿಗೆ ಅನುಗುಣವಾಗಿ ರೂಪಿಲ್ಪಡುತ್ತದೆ. ಹಲವು ಕಡೆ ಗೋಬರ್ ಗಾಸ್ ಚೈತನ್ಯವು ಸುಲಭವಾಗಿ ವ್ಯವಸ್ಥೆ ಗೊಳಿಸಲ್ಪಟ್ಟಿದೆ. ಸೋಲಾರ್ ಚೈತನ್ಯವು ಒಂದು ಆಧುನಿಕ ರೀತಿಯ ವ್ಯವಸ್ಥೆ.ಆಗಿದೆ. ಇವುಗಳಿಗೆ ಸಂಬಂಧಿಸಿದ ಸಲಕರಣೆಗಳು ಈಗಾಗಲೇ ಸಬ್ಸಿಡಿ ದರದಲ್ಲಿ ದೊರಕುವ

ವ್ಯವಸ್ಥೆಯಿದೆ. ಇಂತಹ ಸ್ಕೀಂಗಳಿಗೆ ಬ್ಯಾಂಕ್‌ಗಳು ಸಾಲ ನೀಡುತ್ತವೆ. ಸೀಮೆ ಎಣ್ಣೆಯನ್ನು ರಿಯಾಯಿತಿ ದರದಲ್ಲಿ ವಿತರಿಸುವ ವ್ಯವಸ್ಥೆಯಿದ್ದು ಅಡುಗೆ ಮತ್ತು ಕೃಷಿ ಉದ್ದೇಶಗಳಿಗಾಗಿ ಉಪಯೋಗಿಸಲ್ಪಡುತ್ತದೆ. ಇಂತಹ ವ್ಯವಸ್ಥೆಯನ್ನು ಇನ್ನೂ ಸರಳಗೊಳಿಸಬೇಕಾಗಿದೆ. ಕೃಷಿ ಉದ್ದೇಶಕ್ಕೆ ದೊರಕುವ ಪರವಾನಿಗೆಯನ್ನು ಸರಳಗೊಳಿಸುವ ಕುರಿತು ಬೇಡಿಕೆಯಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ವಿದ್ಯುತ್ ಚೈತನ್ಯವನ್ನು ನೀಡುವ ಕುರಿತು ಪ್ರತ್ಯೇಕ ಸ್ಕೀಮುಗಳನ್ನು ಹೆಚ್ಚಿನ ಕಡೆಗಳಲ್ಲಿ ಜಾರಿಗೊಳಿಸಬೇಕಾಗಿದೆ. ನಮ್ಮ ಪಂಚಾಯತು ಕ್ಷೇತ್ರದಲ್ಲಿ ದಾರಿದೀಪದ ವ್ಯವಸ್ಥೆಯು ನಾಗರಿಕ ಪ್ರಾಥಮಿಕ ಆವಶ್ಯಕತೆಗಳಲ್ಲಿ ಒಂದಾಗಿದೆ. ಈಗಾಗಲೇ ಚಾಲ್ತಿಯಲ್ಲಿರುವ ದಾರಿದೀಪಗಳನ್ನು ಸುವ್ಯವಸ್ಥಿತಗೊಳಿಸಬೇಕಾಗಿದೆ.

**ಅತೀ ಅಗತ್ಯವೆನಿಸುವ ಯೋಜನೆಗಳನ್ನು ಕೆಳಗೆ ಕೊಡಲಾಗಿದೆ.**

| ನಂ. | ಬೀದಿದೀಪ ಎಲ್ಲಿಂದ | ಬೀದಿದೀಪ ಎಲ್ಲಿಯವರೆಗೆ | ದೀಪಗಳ ಸಂಖ್ಯೆ | Power(walt) |
|---|---|---|---|---|
| 1. | ಪೆರ್ಮುಖ | ಪೆರಡಾಲ ದೇವಾಲಯ | 15 | 600 |
| 2. | ಬದಿಯಡ್ಕ ಪೇಟೆ | ____ | 5 | 4000 |
| 3. | ಬದಿಯಡ್ಕ | ಚೆನ್ನಾರ್ ಕಟ್ಟೆ | 10 | 400 |
| 4. | ಮೀನು ಮಾರುಕಟ್ಟೆ, | ಒಳಮಲೆ | 3 | 120 |
| 5. | ಬದಿಯಡ್ಕ | ಕಿನ್ನಿಮಾಣಿ-ಪೂಮಾಣಿ ದೈವಸ್ಥಾನ | 2 | 80 |
| 6. | ಬದಿಯಡ್ಕ | ವಿದ್ಯಾಗಿರಿ | 20 | 800 |
| 7. | ಬದಿಯಡ್ಕ PWD ಕಛೇರಿ | ಬೇಂಗ್ರೋಡಿ | 10 | 400 |
| 8. | ಕಟ್ಟೆಯಂಗಡಿ | ದರ್ಬೆತ್ತಡ್ಕ | 5 | 300 |
| 9. | ಪೆರಿಯಡ್ಕ | ಮಜರ್‌ಪಳ್ಳ | 4 | 160 |
| 10. | ಕಟ್ಟೆಯಂಗಡಿ | ಪೆರಿಯಡ್ಕ | 4 | 160 |
| 11. | ಮಾನ್ಯ ದೇವಸ್ಥಾನ | ಮಹಾದ್ವಾರ | 1 | 40 |
| 12. | ಕುಂಜಾರು | ಕುಕ್ಕಂಗೂಡ್ಲು ದೇವಸ್ಥಾನ | 5 | 200 |
| 13. | ಕುಂಜಾರು | ಕುಕ್ಕಂಕೋಡ್ಲು ಮಸೀದಿ | 5 | 200 |
| 14. | ಗೋಳಿಯಡ್ಕ | ಕನ್ನೆಪ್ಪಾಡಿ | 6 | 240 |
| 15. | ಕನ್ನೆಪ್ಪಾಡಿ | ದೇವರ ಮೆಟ್ಟು | 10 | 400 |
| 16. | ಕನ್ನೆಪ್ಪಾಡಿ | ಪೆರಡಾಲ ದೇವಾಲಯ | 20 | 800 |
| 17. | ಬದಿಯಡ್ಕ | ಬಾಂಡ್ಲತ್ತಡ್ಕ | 15 | 600 |
| 18. | ನೀರ್ಚಾಲು | ಮುಂಡೋಡು | 20 | 800 |
| | | ಒಟ್ಟು | **160** | **10300W.<br>10.3 K.W.** |

ಬದಿಯಡ್ಕ ಪಂಚಾಯತು ಕ್ಷೇತ್ರದ ವಿವಿಧೆಡೆಗಳಲ್ಲಿ ಬಸ್ಸು ತಂಗುದಾಣಗಳಿದ್ದರೂ ಇನ್ನೂ ಕೆಲವೆಡೆಗಳಲ್ಲಿ ಅವುಗಳ ಆವಶ್ಯಕತೆ ಇದೆ. ತೀರ ಅಗತ್ಯವಿರುವ ಸ್ಥಳಗಳಲ್ಲಿ ತಂಗುದಾಣದ ಯೋಜನಾ ವರದಿಯನ್ನು ಕೆಳಗೆ ನಮೂದಿಸಲಾಗಿದೆ.

**ಬದಿಯಡ್ಕ ಪಂಚಾಯತು ಕ್ಷೇತ್ರದಲ್ಲಿ ನಿಯೋಜಿತ ಬಸ್ಸು ತಂಗುದಾಣಗಳು**

| ಸಂಖ್ಯೆ | ತಂಗುದಾಣದ ಸ್ಥಳ | Ward No. | ಮಾಡಿನ ಕುರಿತು ಮಾಹಿತಿ | ಸಂಬಂಧಿಸಿದ ರಸ್ತೆ |
|---|---|---|---|---|
| 1. | ಕಾಡಮನೆ | II | R.C.C. | ಬದಿಯಡ್ಕ-ಪೆರ್ಲ |
| 2. | ದಂಬೆಮೂಲೆ | II | Tiled | ಬದಿಯಡ್ಕ-ಪೆರ್ಲ |
| 3. | ಗೋಳಿಯಡಿ | II | R.C.C. | ಬದಿಯಡ್ಕ-ಪೆರ್ಲ |
| 4. | ಬಳ್ಳಂಬೆಟ್ಟು | II | Tiled | ಏತಡ್ಕ-ಪಳ್ಳತ್ತಡ್ಕ |

| ಸಂಖ್ಯೆ | ತಂಗುದಾಣದ ಸ್ಥಳ | Ward No. | ಮಾಡಿನ ಕುರಿತು ಮಾಹಿತಿ | ಸಂಬಂಧಿಸಿದ ರಸ್ತೆ |
|---|---|---|---|---|
| 5. | ಚಾಲಕ್ಕೋಡು II | | Tiled | ಏತಡ್ಕ-ಪಳ್ಳತ್ತಡ್ಕ |
| 6. | ಬೀಜಂತ್ತಡ್ಕ | IV | R.C.C. | ಚೆರ್ಕಳ-ಕಲ್ಲಡ್ಕ |
| 7. | N.H. ಸ್ಕೂಲು | IV | R.C.C. | ಬದಿಯಡ್ಕ-ಕುಂಬಳೆ |
| 8. | ಕೆಡಂಜಿ | IV | R.C.C. | ಪೆರ್ಲ-ಕಾಸರಗೋಡು |
| 9. | ಬೀಜಂತ್ತಡ್ಕII | IV | R.C.C. | ಬದಿಯಡ್ಕ-ಕಾಸರಗೋಡು |
| 10. | ಪೆರಡಾಲರೋಡ್ | IV | R.C.C. | ಬದಿಯಡ್ಕ-ಕಾಸರಗೋಡು |
| 11. | ಪಿಲಾಂಕಟ್ಟೆ ಜಂಕ್ಷನ್ | V | R.C.C | ಬದಿಯಡ್ಕ-ಮುಳ್ಳೇರಿಯಾ |
| 12. | ದರ್ಬೆತ್ತಡ್ಕ | VI | R.C.C | ಬದಿಯಡ್ಕ-ಕುಂಬಳೆ |
| 13. | ಕಟ್ಟೆಯಂಗಡಿ | VI | R.C.C . | ಬದಿಯಡ್ಕ-ಕುಂಬಳೆ |
| 14. | ಬೇಳ ಕೋನ್‌ವೆಂಟ್ | VI | R.C.C | ಬದಿಯಡ್ಕ-ಕುಂಬಳೆ |
| 15. | ವಿಷ್ಣುಮೂರ್ತಿ ನಗರ | VI | R.C.C. | ಬದಿಯಡ್ಕ-ಕುಂಬಳೆ |
| 16. | ದೇವರ ಕೆರೆ | VII | R.C.C | ನೀರ್ಚಾಲು-ವಿದ್ಯಾನಗರ |
| 17. | ಚುಕ್ಕಿನಡ್ಕ | VII | R.C.C | ನೀರ್ಚಾಲು-ವಿದ್ಯಾನಗರ |
| 18. | ಬೇಳ ವಿಲ್ಲೇಜ್ ಆಫೀಸು | VIII | R.C.C | ನೀರ್ಚಾಲು-ವಿದ್ಯಾನಗರ |
| 19. | ಕಾನತ್ತಿಲ | X | R.C.C | ಬದಿಯಡ್ಕ-ಕುಂಬಳೆ |
| 20. | ದೇವರ ಮೆಟ್ಟು | X | R.C.C. | ಕನ್ನೆಪ್ಪಾಡಿ-ಮುಂಡಿತ್ತಡ್ಕ |
| 21. | ಕರಿಂಬಿಲ | XI | R.C.C . | ಬದಿಯಡ್ಕ-ಪೆರ್ಲ |
| 22. | ಚೆನ್ನೆಗುಳಿ | XI | R.C.C . | ಕನ್ನೆಪ್ಪಾಡಿ-ಮುಂಡ್ಯತ್ತಡ್ಕ |
| 23. | B.C.ರೋಡು | XI | R.C.C . | ಕನ್ನೆಪ್ಪಾಡಿ-ಮುಂಡ್ಯತ್ತಡ್ಕ |
| | ಒಟ್ಟು | 23 | | |

12

# ವಸತಿ ಮತ್ತು ಸಾಮಾಜಿಕ ಕ್ಷೇಮ

ಬದಿಯಡ್ಕ ಪಂಚಾಯತು ಕ್ಷೇತ್ರದೊಳಗೆ ವಸತಿ ಸಮಸ್ಯೆಯು ದಿನೇ ದಿನೇ ವೃದ್ಧಿಸುತ್ತಿರುವುದು ಕಂಡು ಬರುತ್ತಿದೆ. ಸುಮಾರು 30ವರ್ಷಗಳ ಹಿಂದೆ ಬದಿಯಡ್ಕ ಮತ್ತು ನೀರ್ಚಾಲು ಪ್ರದೇಶಗಳು ಬಹಳ ಚಿಕ್ಕ ಪೇಟೆಗಳಾಗಿದ್ದುವು. ಈಗ ಸುಮಾರು ಆರು ಏಳು ಪಟ್ಟು ಬೆಳವಣಿಗೆ ಹೊಂದಿರುವುದು ಕಂಡು ಬರುತ್ತಿದೆ. ಕೂಲಿಗಾಗಿ ತಮಿಳರು ಪಶ್ಚಿಮ ಘಟ್ಟದಿಂದ ಮೇಲಿನವರು ಇಲ್ಲಿ ಬಂದು ನೆಲೆಸಿರುತ್ತಾರೆ. ವಿದ್ಯಾಲಯಗಳು ಖಾಸಗಿ ಸಂಸ್ಥೆಗಳು ಕೈಗಾರಿಕಾ ಸಂಸ್ಥೆಗಳು ಸರಕಾರಿ ಸಂಬಂಧಿತ ಕಚೇರಿಗಳು ವ್ಯಾಪಾರ ಸಂಸ್ಥೆಗಳು ಮೊದಲಾದವುಗಳು ಸಂಖ್ಯೆಗಳಲ್ಲಿ ಹೆಚ್ಚಳವಾದುದರಿಂದ ವಾಸಿಸುತ್ತಿರುವ ಕುಟುಂಬಗಳ ಸಂಖ್ಯೆಯು ಅಧಿಕವಾಗಿರುತ್ತದೆ. ಆರ್ಥಿಕ ಅನುಕೂಲವಿರುವವರು ಸ್ವಂತ ವಸತಿ ಸಂಚಯಗಳು ನಿರ್ಮಿಸಲ್ಪಟ್ಟಿವೆ. ಬಡತನದ ರೇಖೆಯ ಅಡಿಯಲ್ಲಿರುವವರಿಗೆ ವಸತಿ ಒಂದು ಬೃಹತ್ ಸಮಸ್ಯೆಯಾಗಿದೆ. ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಸಂಬಂಧಿಸಿದ ಕೊಲಿನಿಗಳಲ್ಲಿ ಸರಕಾರದ ಆರ್ಥಿಕ ಸಹಾಯದಿಂದ ವಸತಿ ಕೇಂದ್ರಗಳು ರೂಪಿಸಲ್ಪಟ್ಟಿದೆ. ಬಡತನದ ರೇಖೆಯ ಕೆಳಗಿನ ಸರಕಾರಿ ವಿಭಾಗದ ಸ್ಕೀಮುಗಳ ಮೂಲಕ ಕೆಲವು ವಸತಿಗಳು ರೂಪಿಸಲ್ಪಟ್ಟಿದೆ. ಸಾರ್ವಜನಿಕ ವಿತರಣೆಯ ಮೂಲಕ 12 ರೇಶನ್ ಅಂಗಡಿಗಳು ಕಾರ್ಯವೆಸಗುತ್ತಲಿವೆ. ನಿಯಮಾನುಸಾರ ವಿವಿಧ ತರದ ಪಿಂಚಣಿಗಳ ವಿತರಣಾ ವ್ಯವಸ್ಥೆ ನಡೆಯುತ್ತಲಿದೆ. ಸಾರ್ವಜನಿಕ ಕ್ರೀಡೆಗಳಿಗೆ ಪ್ರೋತ್ಸಾಹವನ್ನು ನೀಡುವ ಸಲುವಾಗಿ ಬದಿಯಡ್ಕದ ಬೋಳುಕಟ್ಟೆಯಲ್ಲಿ ಒಂದು ಮಿನಿ ಸ್ಟೇಡಿಯಂನ್ನು ರಚಿಸಲಾಗಿದೆ. ಬಹು ಸಮಯದಿಂದ ಈ ಕೇತ್ರಕ್ಕೆ ಒಂದು ಅನಾಥಾಶ್ರಮದ ಬೇಡಿಕೆ ಇದೆ. ಸುಮಾರು 25 ವರ್ಷಗಳ ಹಿಂದೆ ಪ್ರವಾಸಿಗಳ ವಸತಿ ಕೇಂದ್ರವಾಗಿದ್ದ ಬಂಗಲೆ ಕಟ್ಟಡದಲ್ಲಿ ಪ್ರಾಥಮಿಕ ಅರೋಗ್ಯ ಕೇಂದ್ರವು ತಾತ್ಕಾಲಿವಾಗಿ ಕಾರ್ಯವೆಸಗುತ್ತಲಿದೆ.

ಕೃಷಿಗೆ ಮತ್ತು ಮನೆವಾರ್ತೆಯ ಉದ್ದೇಶಕ್ಕೆ ಪರವಾನಿಗೆ ಹೊಂದಿರುವವರಿಗೆ ರೇಶನ್ ಅಂಗಡಿಗಳ ಮೂಲಕ ತಿ. ಎಣ್ಣೆ ವಿತರಣೆಗೈಯಲಾಗುತ್ತಿದೆ. ರೇಶನ್ ಅಂಗಡಿಗಳಲ್ಲಿ ದೊರಕುವ ಅಕ್ಕಿ ಮತ್ತು ಗೋಧಿಗಳಲ್ಲಿ ಗುಣಮಟ್ಟದ ಕೊರತೆ ವಿಶೇಷವಾಗಿ ಎದ್ದು ಕಾಣುತ್ತಿದೆ. ಕ್ಷೇತ್ರದ ಕೆಲವು ಮೂಲೆಗಳಲ್ಲಿ ಕೃಷಿ ಕಾರ್ಮಿಕರ ಸೌಕರ್ಯಕ್ಕಾಗಿ ಇನ್ನೂ ಕೆಲವು ಮೂಲೆಗಳಲ್ಲಿ ಕೃಷಿ ಕಾರ್ಮಿಕರ ಸೌಕರ್ಯಕ್ಕಾಗಿ ಇನ್ನೂ ಕೆಲವು ವಿತರಣಾ ಕೇಂದ್ರಗಳು ಅವಶ್ಯವಿರುತ್ತದೆ.

ಗರ್ಭಿಣಿಯರ ಮತ್ತು ಶಿಶುಗಳ ಆರೋಗ್ಯ ಪಾಲನೆಯ ದೃಷ್ಟಿಯಲ್ಲಿ ಅಂಗನವಾಡಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಸಕಾಲದಲ್ಲಿ ಚುಚ್ಚು ಮದ್ದು ಪೌಷ್ಠಿಕ ಆಹಾರದ ವಿತರಣಾ ವ್ಯವಸ್ಥೆ ಗಣನೀಯವಾಗಿ ಮುಂದುವರಿಯುತ್ತಿದೆ. ಹೀಗಿದ್ದರೂ ಕೆಲವೊಂದು ಅಜ್ಞಾನದ ದಿಸೆಯಿಂದ ಜನರು ಇದರ ಸದುಪಯೋಗವನ್ನು ಪಡೆಯಲು ವಿಫಲರಾಗುತ್ತಾರೆ. ಈ ಬಗ್ಗೆ ಇನ್ನೂ ಹೆಚ್ಚಿನ ಪ್ರಚಾರ ಸಂಬಂಧವಾದ ಕಾರ್ಯಗಳು ಜರಗ ಬೇಕಾಗಿರುತ್ತದೆ. ಪಂಚಾಯತು ಕ್ಷೇತ್ರದ ಇನ್ನೂ ಕೆಲವು ಸ್ಥಳಗಳಲ್ಲಿ ಬಡಜನರಿಗೆ ಅಂಗನವಾಡಿಯ ಸೌಲಭ್ಯ ದೊರಕ ಬೇಕಾಗಿದೆ. ಶಿಶುಗಳ ಸಂರಕ್ಷಣೆಯಿಂದ ಶಿಶು ಮರಣದ ಸಂಖ್ಯೆ ಈಗ ಕಡಿಮೆಯಾಗಿದೆ ಎನ್ನಲಾಗುತ್ತಿದೆ. ಇದಕ್ಕೆ ಇನ್ನೂ ಒಂದು ಕಾರಣವಿದೆ. ಹೆರಿಗೆಯ ಏರ್ಪಾಡು ಈಗ ಹೆಚ್ಚಾಗಿ ಚಿಕಿತ್ಸಾಲಯಗಳಲ್ಲಿ ಜರಗುವುದರಿಂದ ಜನಿಸಿದ ಶಿಶುಗಳಿಗೆ ಕೂಡಲೇ ವೈದ್ಯಕೀಯ ಶುಶ್ರೂಷೆ ದೊರಕುತ್ತದೆ.

ಪಡಿತರ ವಿತರಣಾ ವ್ಯವಸ್ಥೆಯಲ್ಲಿ ವಿತರಿಸಲ್ಪಡುವ ಕೆಲವು ವಸ್ತುಗಳು ಕೆಲವೊಮ್ಮೆ ಸಮರ್ಪಕವಾಗಿಲ್ಲದಿರುವುದು ಉಲ್ಲೇಖಾರ್ಹ. ಕೆಲವು ಕಡೆಗಳಲ್ಲಿ ವಸ್ತುಗಳ ಕೊರತೆಯು ಕಾಣುತ್ತಿದೆ. ನೌಕರರ ಕೊರತೆಯಿಂದಾಗಿ ಕೂಲಿ ಕಾರ್ಮಿಕರು ತಮ್ಮ ಸಮಯವನ್ನು ಕಾಯುವುದರಲ್ಲಿ ಕಳೆಯ ಬೇಕಾಗುತ್ತದೆ. ಉತ್ತಮ ಆರೋಗ್ಯಕ್ಕೆ ಅತೀ ಅವಶ್ಯ ಆಹಾರವಸ್ತು ತಯಾರಿಕೆಯಾಗಿದೆ. ಇವುಗಳ ಬೆಲೆ ಗಗನಕ್ಕೇರುತ್ತಿದೆ. ತರಕಾರಿಯು ಸುಲಭ ದರದಲ್ಲಿ ದೊರಕುವಂತಾಗಲು ಬದಿಯಡ್ಕ ಮತ್ತು ನೀರ್ಚಾಲುಗಳಲ್ಲಿ ವಾರದ ಸಂತೆಗಳನ್ನು ಏರ್ಪಡಿಸುವುದಕ್ಕೆ ಬೇಡಿಕೆಯಿದೆ. ಇದರಿಂದ ಗ್ರಾಮಾಂತರ ಪ್ರದೇಶದ ಕೂಲಿಕಾರ್ಮಿಕರು ಬಡವರು ಹಿಂದುಳಿದವರು ತುಂಬಾ ಪ್ರಯೋಜನವನ್ನು ಪಡೆಯಬಹುದಾಗಿದೆ. ಸರಕಾರಿ ಮೂಲದಿಂದ ರಚಿಸುವ ವಸತಿ ಗೃಹಗಳ ಗುಣ ಮಟ್ಟವು ತರ ಕಳಪೆಯಾಗಿದೆ. ಕಟ್ಟಿಸಿದ ವಸತಿಯನ್ನು ಹೊಂದಿದವರು ಮನೆಯೊಳಗೆ ವಾಸಿಸುವುದೇ ಕಷ್ಟಕರವಾಗಿದೆ. ಸಂಬಂಧಿತ ಅಧಿಕಾರಿಗಳ ನಿರ್ಲಕ್ಷ್ಯವೂ ಮಧ್ಯವರ್ತಿಗಳ ಧನದ ಆಮಿಷವೂ ಇದಕ್ಕೆ ಕಾರಣವಾಗಿದೆ ಎನ್ನಬಹುದು. ಈ ಕುರಿತು ಕೆಲವು ಕಟ್ಟು ನಿಟ್ಟಾದ ಕ್ರಮಗಳನ್ನು ಕೈಗೊಂಡರೆ ಅಪೇಕ್ಷಣೀಯ ಫಲ ದೊರಕಬಹುದು.

**ಪರಿಹಾರಗಳು :** ಸರಳವಾದ ಕ್ರಮದಲ್ಲಿ ವಸತಿ ಸಮುಚ್ಚಯಗಳನ್ನು ನಿರ್ಮಿಸಿದರೆ ಈ ಸಮಸ್ಯೆಗಳನ್ನು ಆಂಶಿಕವಾಗಿ ನಿವಾರಿಸಬಹುದು. ಶೌಚಾಲಯಗಳ ಆವಶ್ಯಕತೆಯ ಕುರಿತಾದ ಮಾಹಿತಿಯನ್ನು ನೀಡಿ ಬಡಜನರಲ್ಲಿ ಈ ಕುರಿತು ಸದಭಿಪ್ರಾಯ ಮೂಡುವಂತೆ ಮಾಡುವುದು ಒಂದು ಅಭಿವೃದ್ಧಿಪರ ಕಾರ್ಯವಾಗಿದೆ. ಅಲೆಮಾರಿ ಜಾನುವಾರುಗಳನ್ನು ಸ್ವತಂತ್ರವಾಗಿ ತಿರುಗಲು ಬಿಡದೆ ನಿಯಂತ್ರಣದಲ್ಲಿರಿಸುವಂತೆ ಸಹಕರಿಸುವ ಮನೋಭಾವನೆಯನ್ನು ಪ್ರತಿಯೊಬ್ಬರಲ್ಲೂ ಮೂಡಿಸಬೇಕು. ಪೇಟೆ ಪ್ರದೇಶಗಳಲ್ಲಿ ಸಾಮಾಜಿಕ ಕ್ಷೇಮಕ್ಕೆ ಧಕ್ಕೆ ತರುವ ರೀತಿಯಲ್ಲಿ ಕೊಳಕು ನೀರನ್ನು ಚರಂಡಿಗೆ ಬಿಡುವ ವ್ಯವಸ್ಥೆ ಕೊನೆಗಾಣಿಸಬೇಕು. ಶುಚಿತ್ವದ ಬಗ್ಗೆ ಪೂರ್ಣ ಮಾಹಿತಿಯನ್ನು ಪ್ರತಿಯೊಬ್ಬರೂ ಪಾಲಿಸುವಂತಾಗಬೇಕು. ಶಾಶ್ವತ ರೋಗಿಗಳು ವೃದ್ಧರ, ಮಾನಸಿಕ ಅಸ್ವಸ್ಥರ ಬಗ್ಗೆ ಅನುಕಂಪ ಮೂಡುವಂತಾಗಬೇಕು. ಕೆಲವು ಪರಿಹಾರಕ್ರಮಗಳನ್ನು ಈ ಕೆಳಗೆ ನಮೂದಿಸಲಾಗಿದೆ.

| | | | |
|---|---|---|---|
| 1. | ಸಾರ್ವಜನಿಕ ಶೌಚಾಲಯ | : | ಬದಿಯಡ್ಕ ಮೇಲಿನ ಪೇಟೆ, ನೀರ್ಚಾಲು, ಕಿಳಿಂಗಾರು, ವಿದ್ಯಾಗಿರಿ, ಗೋಳಿಯಡ್ಕ, ಪಳ್ಳತ್ತಡ್ಕ, ಮಾನ್ಯ, ಕನ್ನೆಪ್ಪಾಡಿ. |
| 2. | ಪಡಿತರ ವಿತರಣಾ ಕೇಂದ್ರ | : | ಕಿಳಿಂಗಾರು, ವಿದ್ಯಾಗಿರಿ, ಗೋಳಿಯಡ್ಕ |
| 3. | ರುದ್ರಭೂಮಿ | : | ಪೊಯ್ಯಕಂಡ, ಅನ್ನೆ ಪಳ್ಳಿಡ್ಕ, ವಿದ್ಯಾಗಿರಿ |
| 4. | ವಾಚನಾಲಯ | : | ಉಕ್ಕಿನಡ್ಕ, ಮಾನ್ಯ, ತಲ್ಪಣಾಜೆ, ವಿದ್ಯಾಗಿರಿ, ಪಳ್ಳತ್ತಡ್ಕ, ದೇವರಮೆಟ್ಟು |
| 5. | ಸಾರ್ವಜನಿಕ ಮಾರುಕಟ್ಟೆ | : | ಬದಿಯಡ್ಕ, ನೀರ್ಚಾಲು |
| 6. | ಚರಂಡಿ ವ್ಯವಸ್ಥೆ | : | ಬದಿಯಡ್ಕ ಪೇಟೆ, ನೀರ್ಚಾಲು |
| 7. | ದೊಡ್ಡಿ | : | ಮಾನ್ಯ, ಬದಿಯಡ್ಕ |
| 8. | ಸಾಂಸ್ಕೃತಿಕ ನಿಲಯ | : | ಬದಿಯಡ್ಕ, ಮಾನ್ಯ, ಬಣ್ಪುತ್ತಡ್ಕ |
| 9. | ಮಿನಿ ಸ್ಟೇಡಿಯಂ | : | ನೀರ್ಚಾಲು, ಮಾನ್ಯ |

13

# ಸಾಂಸ್ಕೃತಿಕ

ನೀರ್ಚಾಲು ಮತ್ತು ಬದಿಯಡ್ಕ ಸ್ಥಳಗಳು ಸ್ವಾತಂತ್ರ್ಯಪೂರ್ವದಿಂದಲೇ ಸಾಂಸ್ಕೃತಿಕ ವಿಕಾಸ ಕೇಂದ್ರಗಳಾಗಿದ್ದವು. ಬದಿಯಡ್ಕದಲ್ಲಿ ಸುಮಾರು 1950ರ ಕಾಲದಲ್ಲಿ 'ಪ್ರೇಮ ಕೂಟ'ವೆಂಬ ಕಲಾಸಂಸ್ಥೆಯೊಂದು ಸಮರ್ಪಕವಾಗಿ ಕಾರ್ಯವೆಸಗುತ್ತಿತ್ತು. ನಾಟಕಗಳ ದಿಗ್ದರ್ಶನ, ವರ್ಣ ತರಬೇತಿ, ಜಲವರ್ಣ ಚಿತ್ರಗಳ ತಯಾರಿ ಮೊದಲಾದವುಗಳು ಮುಖ್ಯ ಚಟುವಟಿಕೆಗಳಾಗಿದ್ದವು. ಕೇಂದ್ರಕ್ಕೆ ಮುಖ್ಯ ಚಾಲನೆಯನ್ನು ಒದಗಿಸಿದ ದಿ. ಕೋರಿಕ್ಕಾರು ಶಾಮ ಭಟ್ಟರ ಸೇವೆಯು ಅವಿಸ್ಮರಣೀಯ. ಶ್ರೀಯುತರು ಸುಮಾರು 30 ವರ್ಷಗಳ ಅನುಪಮ ಸೇವೆಯನ್ನು ಪೆರಡಾಲದ ನವಜೀವನ ಹೈಸ್ಕೂಲಲ್ಲಿ ಸಲ್ಲಿಸಿದ್ದರು. ಇದೇ ರೀತಿಯಲ್ಲಿ ನೀರ್ಚಾಲಿನಲ್ಲಿ ದಿ. ವಿಶ್ವನಾಥ ಭಟ್ಟರ ನೇತೃತ್ವದಲ್ಲಿ ಶ್ರೇಷ್ಠಮಟ್ಟದ ಹವ್ಯಾಸಿ ಕಲಾವಿದರ ನಾಟಕ ಸಂಸ್ಥೆಯೊಂದು ಪ್ರಥಮ ದರ್ಜೆಯ ಕಲಾ ಚಟುವಟಿಕೆಗಳನ್ನು ನಡೆಸುತ್ತಿತ್ತು. ಈ ಚಟುವಟಿಕೆಗಳಿಗೆ ನೀರ್ಚಾಲಿನ ಮಹಾಜನ ಸಂಸ್ಕೃತ ಕಾಲೇಜಿನ ಆಡಳಿತ ವೃಂದ ಮತ್ತು ಶಿಕ್ಷಕ ವೃಂದ ಮೇಲ್ವಿಚಾರಣೆಯನ್ನು ನಡೆಸುತ್ತಿದ್ದವು. ತಮ್ಮ ಮನೆತನದ ಭಾಗಶಃ ಸಂಪತ್ತನ್ನು ವಿದ್ಯಾಲಯಗಳಿಗೂ ಕಲಾ ಸಂಸ್ಥೆಗಳಿಗೂ ದಾನ ಮಾಡಿದ ಖಂಡಿಗೆ ಮನೆತನದ ಹಿರಿಯರು ಈ ದೃಷ್ಟಿಯಿಂದ ಸ್ಮರಣೀಯರಾಗಿದ್ದಾರೆ. ಕಾಲಕ್ರಮೇಣ ಜನರ ಕಲಾಭಿರುಚಿ ಸ್ಥಗಿತಗೊಂಡು ಇಂತಹ ಕಾರ್ಯಕ್ರಮಗಳೂ, ಚಟುವಟಿಕೆಗಳೂ ಅದೃಶ್ಯವಾದುವು. ಜನರ ಬಿಡುವಿಲ್ಲದ ದುಡಿತ, ಕೌಟುಂಬಿಕ ಸಮಸ್ಯೆಗಳು, ಅಧ್ಯಾಪಕರ ಕೆಲಸದ ಒತ್ತಡ, ಜನರ ಕಲಾಭಿರುಚಿಯಲ್ಲಿ ಆದ ಬದಲಾವಣೆ, ಆರ್ಥಿಕ ಕೊರತೆ ಇದಕ್ಕೆ ಕಾರಣವಾಗಿರಬಹುದು. ಇಷ್ಟೇ ಅಲ್ಲದೆ, ಆಧುನಿಕ ದೂರದರ್ಶನ ಮಾಧ್ಯಮ, ಸಿನಿಮಾ, ಕಳಪೆ ಮಟ್ಟದ ಸಂಸ್ಕೃತಿಯ ಕಲಾ ಕಾರ್ಯಕ್ರಮಗಳು ಇಂದಿನ ಯುವ ಜನಾಂಗವನ್ನು ಕೀಳು ಅಭಿರುಚಿಗೆ ಸೆಳೆಯುತ್ತಿರುವುದು ದುರದೃಷ್ಟಕರ. ಶಾಲೆಗಳಲ್ಲಿ ಹಿಂದಿನ ದಿನಗಳಲ್ಲಿ ತಿಂಗಳು ಹಬ್ಬ, ವರ್ಧಂತಿ ಉತ್ಸವ ಮೊದಲಾದವುಗಳ ಆಚರಣೆಯ ಸಮಯದಲ್ಲಿ ಬಾಲಕ-ಬಾಲಕಿಯರಲ್ಲಿ ಸುಪ್ತವಾದ ಕಲಾ ಚೈತನ್ಯವನ್ನು ಅಭಿವ್ಯಕ್ತಗೊಳಿಸುವ ಹಲವು ಸಂದರ್ಭಗಳು ಸಿಗುತ್ತಿದ್ದವು. ಆದರೆ ಈಗಿನ ದಿನಗಳಲ್ಲಿ ಯುವಜನೋತ್ಸವ, ವರ್ಣಚಿತ್ರ ಸ್ಪರ್ಧೆ, ಸ್ಕೌಟು ಮೊದಲಾದ ಚಟುವಟಿಕೆಗಳು ಬಾಲಕರ ಮನೋಭಾವನೆಯನ್ನು ಬದಲಾಯಿಸಿ ಬಿಟ್ಟಿವೆ. ತರಗತಿಯ ಪಾಠಗಳಿಗೆ ಗಮನವನ್ನು ಕೊಡುವುದರೊಂದಿಗೆ ಹೆಚ್ಚಿನ ಒತ್ತಿಗೆ ವಿಜ್ಞಾನ ಮೇಳ, ಗಣಿತ ಮೇಳ, ಸಾಹಿತ್ಯ ಮೇಳ, ವೃತ್ತಿ ಪರಿಚಯ ಮೇಳ ಮೊದಲಾದವುಗಳು ವಿದ್ಯಾರ್ಥಿಗಳ ಕಲಾ ಪ್ರತಿಭೆಯನ್ನು ಹೊರಹೊಮ್ಮಿಸಲು ಕಾರಣವಾಗಿರಬಹುದು.

ಸುಮಾರು 35 ವರ್ಷಗಳ ಹಿಂದೆ ಬದಿಯಡ್ಕದ ದಿ. ಉಂಡೆಮನೆ ರಾಮಕೃಷ್ಣ ಭಟ್ಟರ ಕಲಾ ಮಂದಿರದಲ್ಲಿ ಶ್ರೀ ಬಡನೇಶ್ವರ ಕೃಪಾಪೋಷಿತ ನಾಟಕ ಮಂಡಳಿಯ ಹೆಸರಿನಿಂದ ಒಂದು ಹವ್ಯಾಸಿ ತಂಡವು ಆಗಾಗ ಸಾಂಸ್ಕೃತಿಕ ಅಭಿವೃದ್ಧಿಪರ ಕಾರ್ಯಕ್ರಮಗಳನ್ನು ಉತ್ತಮ ಮಟ್ಟದಲ್ಲಿ ನೀಡಲು ಯಶಸ್ವಿಯಾಗಿತ್ತು. ಇಂತಹ ಕಾರ್ಯಕ್ರಮಗಳಿಗೆ ಕಲಾಪೋಷಕರ ಧನ ಸಹಾಯ ದೊರಕುತ್ತಿತ್ತು. ಊರು ಮತ್ತು ಪರವೂರುಗಳಲ್ಲಿ ವಿಜೃಂಭಿಸುತ್ತಿದ್ದ ಈ ಕಲಾ ಸಂಸ್ಥೆಯ ಭವಿಷ್ಯವು ಊರಿನ ಕಳಪೆ ರಾಜಕೀಯದಿಂದ ನಿರ್ನಾಮವಾಗಿ ಹೋದುದು ದುರದೃಷ್ಟಕರ. ಈ ಸಂಸ್ಥೆಯು ನಾಟಕ, ಸಂಗೀತ ಯಕ್ಷಗಾನ, ಶಾಸ್ತ್ರೀಯ ನೃತ್ಯ ಮೊದಲಾದ ಕಲಾಪ್ರಕಾರಗಳಿಗೆ ಮೊದಲ ಸ್ಥಾನವನ್ನಿತ್ತಿತ್ತು. ಆದರೆ ಇದರ ಅವಶೇಷವಾಗಿ ಇಂದು ಸಭಾಭವನದ ರಂಗಮಂಟಪದ ಭಾಗವೊಂದು ಶಿಥಿಲವಾಗಿ ಮೂಕಸಾಕ್ಷಿಯಾಗಿ ನಿಂತಿರುವುದು ಬೇಸರದ ವಿಷಯವಾಗಿದೆ.

ಇತ್ತೀಚೆಗಿನ ದಿನಗಳಲ್ಲಿ ಯಕ್ಷಗಾನದ ಮೇಳಗಳು ಈ ಪ್ರದೇಶಗಳಲ್ಲಿ ತಮ್ಮ ಪ್ರದರ್ಶನಗಳನ್ನು ನೀಡುತ್ತಿರುವುದು ಕಲಾಭಿಮಾನಿಗಳ ಮನ ಮುಟ್ಟುವ ಕಾರ್ಯಕ್ರಮವೆನಿಸುತ್ತದೆ. ಇವುಗಳಿಗೆ ವಿಶೇಷ ಪ್ರೋತ್ಸಾಹ ಅಗತ್ಯ. ಹಿಂದಿನ ಕಾಲದಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸಂಗೀತಶಾಲೆ, ನೃತ್ಯಶಾಲೆ ಚಿತ್ರಶಾಲೆಗಳು ಕಾರ್ಯವೆಸಗುತ್ತಿದ್ದುವು. ಆಧುನಿಕ ದಿನಗಳಲ್ಲಿ ಇಂತಹ ವ್ಯವಸ್ಥೆಗಳು ಕಡಿಮೆಯಿದ್ದು ಸುಧಾರಿತ ಮಟ್ಟದ್ದಾಗಿದ್ದರೆ, ಬಹಳಷ್ಟು ದುಬಾರಿಯೂ ಆಗಿದೆ. ಕಲಾ ಸಂಸ್ಕೃತಿಗಳಿಗೆ ಉನ್ನತ ಸ್ಥಾನವನ್ನು ನೀಡುವ ಯೋಜನೆಯ ಸಲುವಾಗಿ ಸಾಂಸ್ಕೃತಿಕ ಕಲಾ ಕೇಂದ್ರವೊಂದನ್ನು ಸಭಾಭವನದೊಂದಿಗೆ ನಿರ್ಮಿಸುವ ಆವಶ್ಯಕತೆಯು ಎದ್ದು ಕಾಣುತ್ತಿದೆ. ಇಂತಹ ಸಭಾಭವನಗಳು ಕಲ್ಯಾಣ ಮಂದಿರಗಳಾಗಿ ಭಿನ್ನ ಉದ್ದೇಶಗಳನ್ನು ಪೂರೆಸಬಲ್ಲುದು. ಬದಿಯಡ್ಕದಲ್ಲಿರುವ ಗಣೇಶ ಮಂದಿರ, ಪಳ್ಳತ್ತಡ್ಕದಲ್ಲಿರುವ ಮುದ್ದು ಮಂಟಪ ಮೊದಲಾದವುಗಳು ಈ ಉದ್ದೇಶವನ್ನು ಪ್ರಕೃತ ಪೂರೈಸುತ್ತಿವೆ. ಕೆಲವು ವರುಷಗಳ ಹಿಂದೆ ಮುಸ್ಲಿಂ ಸಂಸ್ಕೃತಿಯ ವೈವಿಧ್ಯಗಳಾದ ದಫ್‌ಮುಟ್, ಕೋಲ್ಕಳಿ, ಒಪ್ಪನ ಮೊದಲಾದ ಕಲೆಗಳು ತೆರೆಯ ಮರೆಯಲ್ಲಿ ಅಡಗಿದ್ದು, ಆದರೆ ಇತ್ತೀಚೆಗೆ ಇಂತಹ ಕಾರ್ಯಕ್ರಮಗಳು ರಂಗಮಂದಿರಗಳಲ್ಲಿ

ಮತ್ತು ಸಮಾರಂಭಗಳಲ್ಲಿ ವಿಜೃಂಭಿಸಲಾರಂಭಿಸಿವೆ. ಇದು ಸಂಸ್ಕೃತಿಯ ಬೆಳವಣಿಗೆಗೆ ಆರೋಗ್ಯಕರವಾದ ವಿಷಯವಾಗಿದ್ದು ಈ ನಿಟ್ಟಿನಲ್ಲಿ ಸರ್ವವಿಧ ಪ್ರೋತ್ಸಾಹ ಅಗತ್ಯ.

ಸಂಸ್ಕೃತಿಯ ಅಭಿವೃದ್ಧಿ ದೃಷ್ಟಿಯಿಂದ ಕೈಗೊಳ್ಳಬಹುದಾದ ಕಾರ್ಯಕ್ರಮಗಳು :

**ಅಭಿವೃದ್ಧಿ ಕಾರ್ಯಕ್ರಮಗಳು :**

1) ಬದಿಯಡ್ಕದಲ್ಲಿ ಸಾಂಸ್ಕೃತಿಕ ಕಲಾಭವನದ ನಿರ್ಮಾಣ.
2) ಪಳ್ಳತ್ತಡ್ಕ, ಚೆನ್ನೆಗುಳಿ, ವಿದ್ಯಾಗಿರಿ, ವಳಕುಂಜೆಗಳಲ್ಲಿ ಸಂಗೀತ ಶಾಲೆಗಳ ಸ್ಥಾಪನೆ.
3) ಗೋಳಿಯಡ್ಕ, ತಲ್ಪನಾಜೆ, ಚೆನ್ನೆಗುಳಿಗಳಲ್ಲಿ ಸಾಂಸ್ಕೃತಿಕ ಕ್ಲಬ್ಬುಗಳ ರೂಪೀಕರಣ.
4) ನೀರ್ಚಾಲಿನಲ್ಲಿ ವ್ಯಾಯಾಮ ಶಾಲೆಯ ಸ್ಥಾಪನೆ.

# ವನಿತಾ

1991ರ ಜನಗಣತಿ ಪ್ರಕಾರ ಬದಿಯಡ್ಕ ಪಂಚಾಯತಿನ ಜನಗಣತಿಯು 27,265. ಇದರಲ್ಲಿ 13,391 ಮಹಿಳೆಯರಾಗಿದ್ದಾರೆ. ಗ್ರಾಮ ಪ್ರದೇಶಗಳಲ್ಲಿರುವ ಮಹಿಳೆಯರು ಕಾರ್ಖಾನೆ ಹಾಗೂ ಇತರ ಉದ್ಯೋಗಗಳಿಗಾಗಿ ಪಟ್ಟಣಗಳಿಗೆ ಹೋಗುವುದರಿಂದ ಹಳ್ಳಿಯ ಹೊಲಗಳಲ್ಲಿ ದುಡಿಯುವ ವನಿತೆಯರ ಸಂಖ್ಯೆ ಕಡಿಮೆಯಾಗಿದೆ. ಇದರಿಂದಾಗಿ, ಗದ್ದೆಗಳನ್ನೆಲ್ಲಾ ಜನರು ತೋಟಗಳನ್ನಾಗಿ ಮಾರ್ಪಡಿಸುವಂತಾಯಿತು. ಈ ಕಾರಣದಿಂದಾಗಿ ಧಾನ್ಯಗಳ ಹಾಗೂ ತರಕಾರಿಗಳ ಬೆಲೆ ಹೆಚ್ಚುವಂತಾಯಿತು.

ಹಗಲಿಡೀ ದುಡಿದ ಕೆಲವು ಮಂದಿ ಪುರುಷರು ಸಂಜೆ ತಮ್ಮ ಆದಾಯದ ಹೆಚ್ಚಿನ ಪಾಲು ಹಣವನ್ನು ಮಧ್ಯದಂಗಡಿಗೆ ಸುರಿದು ಬಂದು ಮನೆಯಲ್ಲಿರುವ ಸ್ತ್ರೀಯರಿಗೆ ಹೊಡೆಯುತ್ತಾರೆ. ಮಕ್ಕಳ ವಿದ್ಯಾಭ್ಯಾಸ, ಆಹಾರಗಳ ಕಡೆಗೆ ಗಮನ ಕೊಡುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಬೆಳೆದ ಮಕ್ಕಳು ಕೆಟ್ಟ ನಡತೆಗಳಿಂದ ಕೂಡಿ ಸಮಾಜಕ್ಕೆ ಭಾರವಾಗಿರುತ್ತಾರೆ. ಸ್ತ್ರೀಯರಿಗೆ ಜೀವನ ಸಾಗಿಸುವುದು ಕಷ್ಟವಾಗುತ್ತದೆ. ಕೆಲವೊಮ್ಮೆ ಪರನಿಂದೆಗೆ ಗುರಿಯಾಗಿ ಜೀವನದಲ್ಲಿ ಜುಗುಪ್ಸೆ ಬಂದು ಆತ್ಮಹತ್ಯೆ ಮಾಡುವ ಸಂಭವವೂ ಕಂಡು ಬರುತ್ತದೆ.

ಸ್ತ್ರೀಯು ಮುಂಜಾನೆ ಬೇಗನೆದ್ದು ಮನೆಯನ್ನೆಲ್ಲಾ ಶುಚಿಗೊಳಿಸಿ ಉದ್ಯೋಗಕ್ಕಾಗಿ ದೂರಕ್ಕೆ ತೆರಳಲಿರುವ ಪುರುಷರಿಗೆ ಬೇಕಾದ ಆಹಾರ ವಸ್ತುಗಳನ್ನು ತಯಾರಿಸುವ ಕಾರ್ಯದಲ್ಲಿ ತೊಡಗುತ್ತಾಳೆ. ಸಮಯಕ್ಕೆ ಸರಿಯಾಗಿ ಆಹಾರವನ್ನು ಕೊಟ್ಟು ಮನೆಯಿಂದ ಕಳುಹಿಸಿ ಕೊಡುವ ಜವಾಬ್ದಾರಿಯು ಮಹಿಳೆಯದ್ದಾಗಿದೆ. ಅಲ್ಲದೆ ಚಿಕ್ಕ ಮಕ್ಕಳನ್ನು ಸ್ನಾನ ಮಾಡಿಸಿ ಉಡುಪು ತೊಡಿಸಿ, ಹೊಟ್ಟೆ ತುಂಬಿಸಿ ಶಾಲೆಯವರೆಗೆ ತಲಪಿಸುವ ಕೆಲಸವೂ ಅವಳದ್ದಾಗಿದೆ. ಅಷ್ಟೇ ಅಲ್ಲದೆ ಮನೆಯಲ್ಲಿ ಸಾಕುವ ಜಾನುವಾರುಗಳ ಪಾಲನೆಯ ಕಾರ್ಯವೂ ಮಹಿಳೆಯದ್ದು. ಅವುಗಳಿಗೆ ಬೇಕಾದ ಹುಲ್ಲು ಹಟ್ಟಿಗೆ ಸೊಪ್ಪು ಇವುಗಳನ್ನು ತರುವ ಕಾರ್ಯದಲ್ಲಿ ಸ್ತ್ರೀಯು ಬಿಸಿಲು ಮಳೆಗಳನ್ನು ಲೆಕ್ಕಿಸುವುದಿಲ್ಲ.

ಹಳ್ಳಿ ಪ್ರದೇಶದ ವನಿತೆಯರಲ್ಲಿ ಹೆಚ್ಚಿನವರು ಬೀಡಿ ಕಾರ್ಮಿಕರು. ಕೆಲವರು ಕೂಲಿ ಕೆಲಸಗಳಿಗೆ ಹೋಗುವವರು ಆಗಿದ್ದಾರೆ. ಇನ್ನು ಕೆಲವರು ಸರಕಾರಿ ಹಾಗೂ ಖಾಸಗೀ ಉದ್ಯೋಗಕ್ಕಾಗಿ ಪಟ್ಟಣಕ್ಕೆ ತೆರಳಿ ಆದಾಯವನ್ನು ತರುವವರಾಗಿದ್ದಾರೆ. ಮನೆಯ ಕೆಲಸ ಕರ್ಯಗಳೊಂದಿಗೆ ತನ್ನ ಸ್ವಯಂ ಉದ್ಯೋಗದ ಬಗ್ಗೆಯೂ ಹೆಚ್ಚಿನ ಗಮನ ಕೊಡಬೇಕಾದುದರಿಂದ ಮಹಿಳೆಯು ಹಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಕೆಲವೊಮ್ಮೆ ತಾನು ದುಡಿಯುವ ಸಂಸ್ಥೆಯ ಹಿರಿಯ ಅಧಿಕಾರಿಗಳ ಬಿರುನುಡಿಗಳನ್ನೂ ಸಹಿಸಬೇಕಾಗುತ್ತದೆ. ಅವಳಿಗೆ ಮಕ್ಕಳ ವಿದ್ಯಾಭ್ಯಾಸ ಹಾಗೂ ಆರೋಗ್ಯದ ಬಗ್ಗೆ ಗಮನ ಕೊಡಲು ಸಾಧ್ಯವಾಗುವುದಿಲ್ಲ. ಅಲ್ಲದೆ ತನ್ನ ಸ್ವಂತ ಆರೋಗ್ಯದ ವಿಷಯದಲ್ಲಿ ನಿರ್ಲಕ್ಷ್ಯ ಹೊಂದುತ್ತಾಳೆ.

ವನಿತೆಯರ ಆದಾಯದಿಂದಲೇ ಜೀವನ ನಡೆಸಲ್ಪಡುವ ಕುಟುಂಬಗಳು ಹಲವು ಇದೆ. ದಿನದಿಂದ ದಿನಕ್ಕೆ ವಸ್ತುಗಳಿಗೆ ಬೆಲೆ ಏರುತ್ತಿರುವ ಈ ಕಾಲದಲ್ಲಿ ಸಾಮಾನ್ಯ ವರ್ಗದ ಜನರು ತಮಗೆ ಆವಶ್ಯವಿರುವ ಆಹಾರ ವಸ್ತುಗಳನ್ನು ಖರೀದಿಸಲು ಅಸಮರ್ಥರಾಗಿರುತ್ತಾರೆ. ಉತ್ತಮ ಆಹಾರದ ಕೊರತೆ ಇರುವ ಮಕ್ಕಳ ಆರೋಗ್ಯವು ಬಹಳ ಬೇಗನೆ ಕೆಡುತ್ತದೆ. ಅಲ್ಲದೆ ಅವರು ಸಾಂಕ್ರಾಮಿಕ ರೋಗಗಳಿಗೆ ತುತ್ತಾಗುತ್ತಾರೆ. ಆರ್ಥಿಕವಾಗಿ ಹಿಂದುಳಿದ ಕುಟುಂಬದ ವನಿತೆಯರು ರೋಗ ಬಾಧಿಸಿದಾಗ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಮಾಡದಿರುವುದರಿಂದ ಅವರ ಆರೋಗ್ಯವು ಹದಗೆಡುತ್ತದೆ. ವನಿತೆಯರ ಆರೋಗ್ಯ ರಕ್ಷಣೆಯ ಕಾರ್ಯದಲ್ಲಿ ಆರೋಗ್ಯ ಕೇಂದ್ರವು ಪ್ರಧಾನ ಪಾತ್ರವನ್ನು ವಹಿಸಬೇಕಾಗಿದೆ.

ಹಳ್ಳಿಯ ಹಿಂದುಳಿದ ವರ್ಗದ ಜನರ ಗುಡಿಕೈಗಾರಿಕೆಗಳಾದ ಬುಟ್ಟಿ ಹೆಣೆಯುವುದು, ಚಾಪೆ ಹೆಣೆಯುವುದು, ಮುಟ್ಟಪ್ಪಾಳೆ ಮಾಡುವುದು, ಗೊರಬೆ ಹೆಣೆಯುವುದು, ಗೆರಸೆ ಹೆಣೆಯುವುದು- ಮುಂತಾದ ಉದ್ಯೋಗಗಳಿಗೆ ಪ್ರೋತ್ಸಾಹ ಸಿಗದಿರುವುದರಿಂದ ಅವುಗಳು ಅದೃಶ್ಯವಾಗುತ್ತಿವೆ. ಇಂತಹ ಉದ್ಯೋಗಗಳಿಗೆ ಸರಿಯಾದ ಪ್ರೋತ್ಸಾಹ ಕೊಟ್ಟು ತಯಾರಿಸಲ್ಪಟ್ಟ ವಸ್ತುಗಳು ನ್ಯಾಯಬೆಲೆಗೆ ಮಾರಾಟವಾಗುವಂತೆ ಮಾಡುವುದು ಅತೀ ಅವಶ್ಯ.

ಈಗ ಗ್ರಾಮದ ಅಲ್ಲಲ್ಲಿ ವಿದ್ಯಾಲಯಗಳು ಸ್ಥಾಪಿತವಾಗಿರುವುದರಿಂದ ಮಕ್ಕಳ ಪ್ರೈಮರಿ ಹಾಗೂ ಹೈಸ್ಕೂಲು ವಿದ್ಯಾಭ್ಯಾಸಕ್ಕೆ ಯಾವುದೇ ಅಡಚಣೆ ಇಲ್ಲ. ಆದರೆ ಚಿಕ್ಕ ಮಕ್ಕಳಿಗಾಗಿ ಹಳ್ಳಿಗಳಲ್ಲಿ ಅಂಗನವಾಡಿಗಳನ್ನು ನಿರ್ಮಿಸುವ ಅವಶ್ಯವಿದೆ.

ಸ್ತ್ರೀಯಾಗಲೀ ಪುರುಷನಾಗಲೀ ಜೀವಿಸಲು ಉದ್ಯೋಗವೊಂದು ಬೇಕೇ ಬೇಕು. ಕೇವಲ ಸರಕಾರಿ ಉದ್ಯೋಗಕ್ಕಾಗಿಯೇ ಬಾಯಿಬಿಟ್ಟು ಕುಳಿತರೆ ಕೆಲವೊಮ್ಮೆ ನಿರಾಶರಾಗಬಹುದು. ಅದಕ್ಕಾಗಿ ಮಹಿಳೆಯು ಕೆಲವು ಸ್ವ ಉದ್ಯೋಗಗಳಲ್ಲಿ ತೊಡಗುವುದು ಒಳ್ಳೆಯದು. ಹೊಲಿಗೆ ತರಬೇತಿ ಪಡೆದ ವನಿತೆಯರು ಹೊಲಿಗೆ ಯಂತ್ರವನ್ನು ತೆಗೆದು ಸಿದ್ಧ ಉಡುಪುಗಳನ್ನು ತಯಾರಿಸಿ ಮಾರಾಟ ಮಾಡಬಹುದು. ಅದೇ ರೀತಿ ಟೈಪ್‌ರೈಟಿಂಗ್ ಕಲಿತ ಮಹಿಳೆಯು ಜೋಬ್ ಟೈಪಿಂಗ್ ಮಾಡಬಹುದು. ಮನೆಯಲ್ಲೇ ಇರುವ ಮಹಿಳೆಯರು ತಮ್ಮ ಬಿಡುವಿನ ವೇಳ ಫೇನ್ಸಿ ವಸ್ತುಗಳನ್ನು ತಯಾರಿಸಿ ಪಕ್ಕದಲ್ಲಿರುವ ಫೇನ್ಸಿ ಸ್ಟೋರ್‌ಗೆ ಮಾರಾಟ ಮಾಡಿ ಹಣ ಸಂಪಾದನೆ ಮಾಡಬಹುದು. ಗೃಹಿಣಿಯರು ಹಪ್ಪಳ, ಸೆಂಡಿಗೆ, ಉಪ್ಪಿನಕಾಯಿ ಮುಂತಾದವುಗಳನ್ನು ಮಾಡಿ ಮಾರುವುದರ ಮುಖಾಂತರ ತಮ್ಮ ನಿರುದ್ಯೋಗಿತನವನ್ನು ಹೋಗಲಾಡಿಸಬಹುದು. ಈ ಕಾರ್ಯಕ್ಕೆ ಗ್ರಾಮ ಪಂಚಾಯತು ಉತ್ತೇಜನ ನೀಡುವುದು ಅಗತ್ಯ.

ನೃತ್ಯ, ಸಂಗೀತ, ಕಸೂತಿ ಮುಂತಾದ ಕಲೆಗಳಲ್ಲಿ ವನಿತೆಯರದೇ ಮೇಲುಗೈ. ಶಾಲೆಯಲ್ಲಿ ನಡೆಯುವ ಬಾಲಕಲೋತ್ಸವ ಹಾಗೂ ಯುವ ಜನೋತ್ಸವಗಳು ಮಕ್ಕಳ ಸುಪ್ತವಾದ ಪ್ರತಿಭೆಯ ವಿಕಾಸಕ್ಕೆ ಅವಕಾಶವನ್ನು ಕಲ್ಪಿಸಿ ಕೊಡುತ್ತದೆ. ಅಲ್ಲದೆ ಕೇರಳೋತ್ಸವವು ಪ್ರತಿಭಾ ವಿಕಾಸಕ್ಕೆ ಪ್ರೋತ್ಸಾಹವನ್ನು ಕೊಡುತ್ತದೆ.

ಇಂದಿನ ಮಕ್ಕಳೇ ಮುಂದಿನ ಜನಾಂಗ. ಮಕ್ಕಳು ಮುಂದೆ ಸಮಾಜದಲ್ಲಿ ಉತ್ತಮ ಪೌರರಾಗಿ ಬಾಳಲು ದೇಶದ ಏಳಿಗೆಯನ್ನುಂಟು ಮಾಡಲು ಮಕ್ಕಳಿಗೆ ವನಿತೆಯರ ಮಾರ್ಗದರ್ಶನ ಅಗತ್ಯವಾಗಿದೆ. ಆದ್ದರಿಂದ ವನಿತೆಯರ ಸರ್ವತೋಮುಖ ವಿಕಾಸದ ಕಾರ್ಯದಲ್ಲಿ ಗ್ರಾಮ ಪಂಚಾಯತು ಹೆಚ್ಚಿನ ಗಮನ ಕೊಡಬೇಕಾದುದು ಅತೀ ಅವಶ್ಯ.

### ವನಿತಾ ಸಮಸ್ಯೆಗಳಿಗೆ ನಿವಾರಣೋಪಾಯಗಳು :

ಮಹಿಳೆಯರ ಉನ್ನತಿಗಾಗಿ ಬಹುಮುಖ ಪ್ರತಿಭೆಗಳ ವಿಕಸನಕ್ಕಾಗಿ, ಸ್ವಂತ ಸಂಪಾದನೆಗಾಗಿ, ಕುಟುಂಬದ ಅಭಿವೃದ್ಧಿಗಾಗಿ, ಮಕ್ಕಳ ಏಳಿಗೆಗಾಗಿ, ಉತ್ಪಾದನೆಯ ಹೆಚ್ಚಳಕ್ಕಾಗಿ, ಸಮಾಜದ ಅಭಿವೃದ್ಧಿಗಾಗಿ, ನಿರುದ್ಯೋಗ ನಿವಾರಣೆಗಾಗಿ ಮಹಿಳೆಯರು ಈ ಕೆಳಗಿನ ಸೌಲಭ್ಯಗಳು ಅತ್ಯವಶ್ಯವಾಗಿವೆ.

1) ನೀರ್ಚಾಲು ಪರಿಸರದಲ್ಲಿ ಸಾಬೂನು ತಯಾರಿಕಾ ಘಟಕದ ಸ್ಥಾಪನೆ ಮತ್ತು ಚೆಡೆಕಲ್‌ನಲ್ಲಿ ಬೀಡಿ ಬ್ರಾಂಚ್‌ನ ಸ್ಥಾಪನೆ.
2) **ಹೊಲಿಗೆ ತರಬೇತಿ ಕೇಂದ್ರಗಳು :** ಚಾಲಕ್ಕೋಡು, ಮಾಡತ್ತಡ್ಕ, ಕಂಗಿಲ, ಪಟ್ಟಾಜೆ, ವಿದ್ಯಾಗಿರಿ, ಕುಂಟಾಲಮೂಲೆ, ಚೆನ್ನೆಗುಳಿ, ಉದಯಗಿರಿ, ಕುಕ್ಕಂಗೋಡ್ಲು, ಬಿರ್ಮಿನಡ್ಕ ಮತ್ತು ತಲ್ಪನಾಜೆ.
3) **ಮಹಿಳಾ ಸಹಕಾರಿ ಸಂಘ** : ಪಳ್ಳತ್ತಡ್ಕ, ಬಳ್ಳಂಬೆಟ್ಟು, ಬದಿಯಡ್ಕ
4) **ಮಹಿಳಾ ಸಮಾಜ** : ವಳಕ್ಕುಂಜ, ವಿದ್ಯಾಗಿರಿ, ಗೋಳಿಯಡ್ಕ
5) **ಕುಟುಂಬ ಕಲ್ಯಾಣ ಕೇಂದ್ರ** : ವಿದ್ಯಾಗಿರಿ, ಕನ್ನೆಪ್ಪಾಡಿ
6) **ಮಹಿಳಾ ಅನಾಥಾಶ್ರಮ** : ಬದಿಯಡ್ಕ
7) **ಅಂಗನವಾಡಿ** : ಮೂಕಂಪಾರೆ, ಬೀಜಂತಡ್ಕ, ವಿದ್ಯಾಗಿರಿ, ಬಾರಡ್ಕ, ಕಾಡಮನೆ, ಬಿರ್ಮಿನಡ್ಕ, ಕುಕ್ಕಂಕೋಡ್ಲು, ಚುಳ್ಳಿಕ್ಕಾನ, ಬಣ್ಪುತ್ತಡ್ಕ, ಕುಂಟಿಕಾನ, ಉದಯಗಿರಿ, ಪೆರುಮುಂಡ, ವಳಕ್ಕುಂಜ.

| | | | |
|---|---|---|---|
| 8) | ಮಹಿಳಾ ಡ್ರೈವಿಂಗ್ ಶಾಲೆ | : | ಬದಿಯಡ್ಕ |
| 9) | ಮಹಿಳಾ ಹೈನುಗಾರಿಕಾ ಕೇಂದ್ರ | : | ವಿದ್ಯಾಗಿರಿ, ಬದಿಯಡ್ಕ, ಮಾನ್ಯ, ಪಳ್ಳತ್ತಡ್ಕ |
| 10) | ಕೋಳಿ ಸಾಕಣಾ ಕೇಂದ್ರ | : | ತಲ್ಪನಾಜೆ, ಮಾಡತ್ತಡ್ಕ, ಚೆನ್ನೆಗುಳಿ, ಕುಕ್ಕಂಕೂಡ್ಲು, ಬದಿಯಡ್ಕ, ಮುಂಡೋಡು |
| 11) | ಆಡು ಸಾಕಣಾ ಕೇಂದ್ರ | : | ಗೋಳಿಯಡ್ಕ, ಉದಯಗಿರಿ, ಏಳ್ಕಾನ, ಬಿರ್ಮಿನಡ್ಕ |
| 12) | ಅಣಬೆ ಕೃಷಿ ಮಾಹಿತಿ ಕೇಂದ್ರ | : | ಬದಿಯಡ್ಕ ಪಂಚಾಯತು ಪರಿಸರ |
| 13) | ಮಹಿಳಾ ಸಮಾಜ ಕಲ್ಯಾಣ ನಿಧಿ ಸ್ಥಾಪನೆ | : | ಪಂಚಾಯತ್ ಮಟ್ಟದಲ್ಲಿ |
| 14) | ಪಾಯಿಖಾನೆ ನಿರ್ಮಾಣ | : | ಎಲ್ಲಾ ಅಂಗನವಾಡಿಗಳಲ್ಲಿ |
| 15) | ಮಹಿಳಾ ಕಲ್ಯಾಣ ಮತ್ತು ಶಿಶು ಕಲ್ಯಾಣ ಕೇಂದ್ರ | : | ಕುಕ್ಕಂಕೋಡ್ಲು, ಉದಯಗಿರಿ, ಬಳ್ಳಂಬೆಟ್ಟು |
| 16) | ವೃದ್ಧಾಪ್ಯ ವೇತನ | : | ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ಮತ್ತು ಕೃಷಿ ಕಾರ್ಮಿಕರಿಗೆ |
| 17) | ಹೊಲಿಗೆ ಯಂತ್ರಗಳನ್ನು ವಿತರಿಸುವ ವ್ಯವಸ್ಥೆ | : | ಪಂಚಾಯತ್ ವತಿಯಿಂದ |
| 18) | ಸಂಪೂರ್ಣ ಮದ್ಯ ನಿಷೇಧ | : | ಇಡೀ ಪಂಚಾಯತ್‌ನಲ್ಲಿ ಸಂಪೂರ್ಣವಾಗಿ |
| 19) | ಟೈಪ್‌ರೈಟಿಂಗ್ ಇನ್‌ಸ್ಟಿಟ್ಯೂಟ್ | : | ಕಿಳಿಂಗಾರು |
| 20) | ಇತರ ತರಬೇತಿಗಳು | : | ಬುಟ್ಟಿ ಹೆಣೆಯುವುದು, ಗುಡಿ ಕೈಗಾರಿಕೆಗಳು, ಹೂಗಳ ಉತ್ಪಾದನೆ ಮತ್ತು ಪೋಷಣೆ, ಸೌಟು ತಯಾರಿಕೆ, ಹಾಳೆಯ ವಿವಿಧ ಉತ್ಪನ್ನಗಳು, ನೇಯ್ಗೆ, ಕಸೂತಿ, ಎಂಬ್ರೋಯಿಡರಿ ಹಾಗೂ ಇತರ ಸ್ವೋದ್ಯೋಗಗಳು. |

## 15. ಸಹಕಾರಿ ವ್ಯವಸ್ಥೆ

ಬದಿಯಡ್ಕ ಪಂಚಾಯತಿನ ಹೆಚ್ಚಿನ ಜನರು, ಕೃಷಿಕರು ಹಾಗೂ ಕೃಷಿ ಕಾರ್ಮಿಕರಾಗಿದ್ದುದರಿಂದ ಈ ಪ್ರದೇಶದಲ್ಲಿ ಕೃಷಿಯನ್ನು ಅಭಿವೃದ್ಧಿಪಡಿಸುವುದು ಅತ್ಯಗತ್ಯ. ಆರ್ಥಿಕವಾಗಿ ಹಿಂದುಳಿದ ಅವರ ಕಷ್ಟಗಳನ್ನು ಮನಗಂಡು 1919ನೇ ಇಸವಿಯಲ್ಲಿ ಪೆರಡಾಲ ಸರ್ವೀಸ್ ಕೋ-ಓಪರೇಟಿವ್ ಸೊಸೈಟಿ ಎಂಬ ಸಂಸ್ಥೆಯು ಶ್ರೀ ಪೆರಡಾಲ ಕೃಷ್ಣಯ್ಯನವರಿಂದ ನೀರ್ಚಾಲಿನಲ್ಲಿ ಸ್ಥಾಪಿಸಲ್ಪಟ್ಟಿತು. ಅದುವೇ ಈ ಪಂಚಾಯತಿನ ಮೊತ್ತಮೊದಲ ಸಹಕಾರಿ ಸಂಸ್ಥೆ. ಆ ಸಂದರ್ಭದಲ್ಲಿ ಈ ಸಂಸ್ಥೆಯಲ್ಲಿ ಆಗಿನ ನಿಯಮಾವಳಿಗನುಸಾರವಾಗಿ ಕನಿಷ್ಟ ಸಂಖ್ಯೆಯ ಸದಸ್ಯರಿದ್ದರು. ಪ್ರಕೃತ 2780 ಸದಸ್ಯರು ಇರುತ್ತಾರೆ. ಅಭಿವೃದ್ಧಿಯ ಪಥದಲ್ಲಿ ಸಾಗಿದ ಈ ಸಂಸ್ಥೆಯ ಒಂದು ಘಟಕವು ಬದಿಯಡ್ಕದಲ್ಲಿ 1978ನೇ ಇಸವಿ ಜೂನ್ ತಿಂಗಳಲ್ಲಿ ಸ್ಥಾಪಿತವಾಯಿತು. ಪ್ರಸ್ತುತ ಈ ಪಂಚಾಯತಿನಲ್ಲಿ ಹತ್ತು ಸಹಕಾರಿ ಸಂಸ್ಥೆಗಳು ಕಾರ್ಯವೆಸಗುತ್ತಿವೆ.

**ಬದಿಯಡ್ಕ ಪಂಚಾಯತಿನ ಸಹಕಾರಿ ಸಂಘಗಳ ಇಂದಿನ ಸ್ಥಿತಿ :**

1. **ಪೆರಡಾಲ ಸರ್ವೀಸ್ ಕೋ-ಓಪರೇಟಿವ್ ಬೇಂಕ್ :** ಸೊಸೈಟಿಯಾಗಿ ರೂಪೀಕರಣಗೊಂಡ ಈ ಸಂಸ್ಥೆಯು ತದನಂತರ ಬೇಂಕ್ ಆಗಿ ಪರಿವರ್ತಿಸಲ್ಪಟ್ಟಿತು. ಕೃಷಿ, ವ್ಯಾಪಾರ ಮುಂತಾದ ವಿವಿಧೋದ್ದೇಶ ಲೋನ್‌ಗಳು, ಅಡವಿನ ಮೇಲೆ ಲೋನ್ ಮುಂತಾದ ಕಾರ್ಯಗಳು ಈ ಸಂಸ್ಥೆಯ ಮುಖಾಂತರ ನಡೆಯುತ್ತದೆ. ಈ ಸಂಸ್ಥೆಯ ಅಭಿವೃದ್ಧಿಯನ್ನು ಸಾಧಿಸುತ್ತಾ ಸಹಕಾರಿ ರಂಗದಲ್ಲಿ ಪ್ರಗತಿ ಪಥದಲ್ಲಿದೆ.

2. **K.A.C.M. ಸೊಸೈಟಿ ಲಿಮಿಟೆಡ್ :** 1958ನೇ ಇಸವಿಯಲ್ಲಿ K.A.C.M. ಎಂಬ ಸಂಸ್ಥೆಯು ನೀರ್ಚಾಲಿನಲ್ಲಿ ಸ್ಥಾಪಿಸಲ್ಪಟ್ಟಿತು. ಸಂಸ್ಥೆಯು ಕೃಷಿಕರಿಗೆ ಬೇಕಾದ ಕೃಷಿ ಉಪಕರಣಗಳು ಬೀಜ, ಕೃತಕ ಗೊಬ್ಬರಗಳನ್ನು ಒದಗಿಸುವುದು ಹಾಗೂ ಕೃಷಿಕರಿಂದ ಕೃಷಿ ಉತ್ಪನ್ನಗಳನ್ನು ಪಡೆದು ಮಾರಾಟ ಮಾಡುವ ಉದ್ದೇಶದಿಂದ ಸ್ಥಾಪಿತಗೊಂಡಿತು. ಈ ಸಂಸ್ಥೆಗೆ ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಿಲ್ಲ. ಆದರೂ ಇತ್ತೀಚೆಗಿನ ವರ್ಷಗಳಲ್ಲಿ ಸ್ವಲ್ಪ ಚೇತರಿಸಿಕೊಂಡಿದೆ.

3. **ಕಾಸರಗೋಡು ತಾಲೂಕು ಕೊರಗ ಕ್ಷೇಮ ವಿವಿದೋದ್ದೇಶ ಸಹಕಾರಿ ಸಂಘ ಬದಿಯಡ್ಕ :** ಕಾಸರಗೋಡು ತಾಲೂಕಿನ ಕೊರಗರ ಕ್ಷೇಮಕ್ಕಾಗಿ 1976ರಲ್ಲಿ ಬದಿಯಡ್ಕದಲ್ಲಿ ಈ ಸಂಸ್ಥೆಯು ಸ್ಥಾಪಿತಗೊಂಡಿತು. ಪ್ರಾರಂಭ ಕಾಲದಲ್ಲಿ ಬಾಡಿಗೆ ಕಟ್ಟಡದಲ್ಲಿ ಕಾರ್ಯವೆಸಗುತ್ತಿದ್ದ ಈ ಸಂಸ್ಥೆಗೆ ಇತ್ತೀಚೆಗೆ ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುವುದಕ್ಕೆ ಸಾಧ್ಯವಾಗಿದೆ. ಕೊರಗ ಜನಾಂಗದ ಕುಲಕಸುಬಾದ ಬುಟ್ಟಿ ಹೆಣೆಯುವುದಕ್ಕಾಗಿ ಧನ ಸಹಾಯವನ್ನು ನೀಡುವುದು ಹಾಗೂ ಇನ್ನಿತರ ಕ್ಷೇಮ ಪದ್ಧತಿಗಳನ್ನು ಜ್ಯಾರಿಗೊಳಿಸುವ ಯೋಜನೆ ಈ ಸಂಘದ ಮೂಲಕ ನಡೆಯುತ್ತದೆ.

4. **ಬದಿಯಡ್ಕ ಬೀಡಿ ವರ್ಕರ್ಸ್ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿ :** ಈ ಪ್ರದೇಶದ 50% ರಷ್ಟು ಮಹಿಳೆಯರು ಬೀಡಿ ವ್ಯವಸಾಯದಲ್ಲಿ ತೊಡಗಿರುವವರಾಗಿದ್ದಾರೆ. ಇವರ ಕ್ಷೇಮಕ್ಕಾಗಿ 1980ರಲ್ಲಿ ಸ್ಥಾಪನೆಗೊಂಡ ಒಂದು ಸಹಕಾರಿ ಸಂಸ್ಥೆಯು ಇದಾಗಿದೆ. ಮೊದಲು ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಂಸ್ಥೆಗೆ ಈಗ ಸ್ವಂತ ಕಟ್ಟಡವಿದೆ. ಈ ಪಂಚಾಯತಿನಲ್ಲಿ ಸಂಸ್ಥೆಗೆ ನಾಲ್ಕು ಘಟಕಗಳಿವೆ.

5. **ಬದಿಯಡ್ಕ ಮಹಿಳಾ ಸಹಕಾರಿ ಸಂಘ :** 1988ರಲ್ಲಿ ಈ ಸಂಸ್ಥೆಯು ಸ್ಥಾಪಿತವಾಯಿತು. ಮಹಿಳೆಯರ ಕ್ಷೇಮಾಭಿವೃದ್ಧಿಯನ್ನು ಗಮನದಲ್ಲಿರಿಸಿಕೊಂಡು ಸ್ಥಾಪಿತವಾದ ಈ ಸಂಸ್ಥೆಯಡಿಯಲ್ಲಿ ವನಿತಾ ಕೇಂಟಿನ್ ಒಂದು ಕಾರ್ಯ ನಿರ್ವಹಿಸುತ್ತದೆ. ಈ ಮೂಲಕ ಕೆಲವು ಮಹಿಳೆಯರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಲಾಗಿದೆ.

6. **ಬದಿಯಡ್ಕ ಪಂಚಾಯತ್ ಪರಿಶಿಷ್ಟ ಜಾತಿ ಕೋ-ಓಪರೇಟಿವ್ ಸೊಸೈಟಿ :** ಈ ಸಂಸ್ಥೆಯು 1988ರಲ್ಲಿ ಸ್ಥಾಪಿತವಾಯಿತು. ಈ ಸಂಸ್ಥೆಯ ಪ್ರಧಾನ ಉದ್ದೇಶಗಳು ಸ್ವೋದ್ಯೋಗ ತರಬೇತಿ (ಟೈಲರಿಂಗ್, ಟೈಪ್‌ರೈಟಿಂಗ್), ಉಳಿತಾಯ ಯೋಜನೆ ಹಾಗೂ ಪವರ್ ಟಿಲ್ಲರ್‌ನ್ನು ಕೃಷಿ ಕೆಲಸಗಳಿಗೆ ಒದಗಿಸಿಕೊಡುವುದು ಇತ್ಯಾದಿಗಳಾಗಿವೆ.

**7.** **ಬದಿಯಡ್ಕ ಟ್ರೈಬಲ್ ವರ್ಕರ್ಸ್ ಇಂಡಸ್ಟ್ರಿಯಲ್ ಕೋ-ಓಪರೇಟಿವ್ ಸೊಸೈಟಿ :** 1991ನೇ ಇಸವಿಯಲ್ಲಿ ಸ್ಥಾಪಿತವಾದ ಸಂಸ್ಥೆಯ ಕೆಂಪು ಕಲ್ಲು ಕಡಿಯುವ ವ್ಯವಸಾಯವನ್ನು ಪ್ರೋತ್ಸಾಹಿಸುತ್ತದೆ. ಈ ಸಂಸ್ಥೆಯು ಬದಿಯಡ್ಕದಲ್ಲಿ ಕಾರ್ಯವೆಸಗುತ್ತಿದೆ.

**8.** **ಪುದುಕೋಳಿ ಪರಿಶಿಷ್ಟ ಜಾತಿ ಸ್ಟೋನ್ ಕಟ್ಟಿಂಗ್ ಇಂಡಸ್ಟ್ರಿಯಲ್ ಕೋ ಓಪರೇಟಿವ್ ಸೊಸೈಟಿ :** ಈ ಸಂಸ್ಥೆಯು 1992ರಲ್ಲಿ ನೀರ್ಚಾಲಿನಲ್ಲಿ ಸ್ಥಾಪಿಸಲಾಯಿತು. ಕಲ್ಲು ಕಡಿಯುವ ವ್ಯವಸಾಯವನ್ನು ಈ ಸಂಸ್ಥೆಯು ಪ್ರೋತ್ಸಾಹಿಸುತ್ತಿದೆ.

**9.** **ಚೆನ್ನೆಗುಳಿ ಪರಿಶಿಷ್ಟ ಜಾತಿ ವಿಲೇಜ್ ಇಂಡಸ್ಟ್ರಿಯಲ್ ಕೋ ಓಪರೇಟಿವ್ ಸೊಸೈಟಿ ಲಿಮಿಟೆಡ್ :** ಯಂತ್ರವನ್ನುಪಯೋಗಿಸಿ ಕೆಂಪು ಕಲ್ಲು ಕಡಿಯುವ ವ್ಯವಸಾಯವನ್ನು ಈ ಸಂಸ್ಥೆಯು ನಡೆಸುತ್ತಿದೆ. ಸಂಸ್ಥೆಯು 1995ರಲ್ಲಿ ಸ್ಥಾಪಿತವಾಯಿತು.

**10.** ಬದಿಯಡ್ಕ ಪರಿಶಿಷ್ಟ ಜಾತಿ ವನಿತಾ ಇಂಡಸ್ಟ್ರಿಯಲ್ ಸೊಸೈಟಿ : 1994ರಲ್ಲಿ ಸಂಸ್ಥೆಯು ಸ್ಥಾಪಿಸಲ್ಪಟ್ಟಿತು. ಪ್ರಧಾನ ಉದ್ದೇಶ ಮಹಿಳೆಯರಿಗೆ ಸ್ವೋದ್ಯೋಗ ತರಬೇತಿಯನ್ನು ಒದಗಿಸಿ ಕೊಡುವುದಾಗಿದೆ.

ಈಗ ಪಂಚಾಯತ್‌ನಲ್ಲಿ ವಿವಿಧ ಕ್ಷೇತ್ರಗಳಲ್ಲಿ ಕಾರ್ಯವೆಸಗುತ್ತಿರುವ 10 ಸಹಕಾರಿ ಸಂಘಗಳ ಕುರಿತಾದ ಮಾಹಿತಿಯನ್ನು ಕೆಳಗೆ ಕೊಡಲಾಗಿದೆ.

| ಕ್ರ.ನಂಬ್ರ | ಹೆಸರು | ಸ್ಥಾಪನೆಗೊಂಡ ವರ್ಷ | ಕ್ರೆಡಿಟ್/ನಾನ್ ಕ್ರೆಡಿಟ್ | ಸದಸ್ಯರ ಸಂಖ್ಯೆ | ಮೂಲಧನ |
|---|---|---|---|---|---|
| 1. | ಪೆರಡಾಲ ಸರ್ವೀಸ್ ಕೋ-ಓಪರೇಟಿವ್ ಬೇಂಕ್ ಲಿ. | 1919 | ಕ್ರೆಡಿಟ್ | 2780 | 12,15,000/- |
| 2. | ಕೆ.ಎ.ಸಿ.ಎಂ. ಸೊಸೈಟಿ ಲಿ. ನೀರ್ಚಾಲು | 1958 | ನಾನ್ ಕ್ರೆಡಿಟ್ | 4342 | 12,60,000/- |
| 3. | ಕಾಸರಗೋಡು ತಾಲೂಕು ಕೊರಗ ಕ್ಷೇಮ ವಿವಿದೋದ್ದೇಶ ಕೋ-ಓಪರೇಟಿವ್ ಸಂಘ | 1976 | ನಾನ್ ಕ್ರೆಡಿಟ್ | 897 | 1,25,000/- |
| 4. | ಬದಿಯಡ್ಕ ಬೀಡಿ ವರ್ಕರ್ಸ್ ಇಂಡಸ್ಟ್ರಿಯಲ್ ಕೋ-ಓಪರೇಟಿವ್ ಸೊಸೈಟಿ | 1980 | ನಾನ್ ಕ್ರೆಡಿಟ್ | 1163 | 3,00,000/- |
| 5. | ಬದಿಯಡ್ಕ ಮಹಿಳಾ ಸಹಕಾರಿ ಸಂಘ | 1988 | " | 228 | 3,00,000/- |
| 6. | ಬದಿಯಡ್ಕ ಪಂಚಾಯತ್ SC ಸರ್ವೀಸ್ ಕೋ-ಓಪರೇಟಿವ್ ಸೊಸೈಟಿ | 1988 | " | 273 | 3,747/- |
| 7. | ಬದಿಯಡ್ಕ ಟ್ರೈಬಲ್ ವರ್ಕರ್ಸ್ ಇಂಡಸ್ಟ್ರಿಯಲ್ ಕೋ-ಓಪರೇಟಿವ್ ಸೊಸೈಟಿ | 1991 | " | 72 | 70,000/- |
| 8. | ಪುದುಕೋಳಿ S.C. ಸ್ಟೋನ್ ಕಟ್ಟಿಂಗ್ ಇಂಡಸ್ಟ್ರಿಯಲ್ ಕೋ.ಓಪ್.ಸೊಸೈಟಿ | 1992 | " | 21 | 20,000/- |
| 9. | ಚೆನ್ನೆಗುಳಿ S.C.ವಿಲೇಜ್ ಇಂಡಸ್ಟ್ರಿಯಲ್ ಕೋ.ಓಪ್.ಸೊಸೈಟಿ | 1995 | " | 11 | 1,00,000/- |
| 10. | ಬದಿಯಡ್ಕ S.C.ವನಿತಾ ಇಂಡಸ್ಟ್ರಿಯಲ್ ಕೋ.ಓಪ್.ಸೊಸೈಟಿ | 1994 | " | 15 | 30,075/- |

## ಲಿಕ್ವಿಡೇಟ್ ಆದ ಸಹಕಾರೀ ಸಂಸ್ಥೆಗಳು :

ಸುಮಾರು 60 ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟ ಬದಿಯಡ್ಕ ಕೋ.ಓಪರೇಟಿವ್ ಸ್ಟೋರ್ ಎಂಬ ಸಹಕಾರಿ ಸಂಸ್ಥೆಯೊಂದು ಉತ್ತಮ ಹೆಸರು ಗಳಿಸಿಕೊಂಡಿತ್ತು. ಗ್ರಾಹಕರ ಬೇಡಿಕೆಗಳನ್ನು ಪೂರೈಸುವಲ್ಲಿ ಸಂಸ್ಥೆಯು ಸಫಲವಾಗುತ್ತಿತ್ತು. ದಕ್ಷಿಣ ಭಾರತದಲ್ಲೇ ಪ್ರಶಂಸನಾತ್ಮಕವಾದ ಸ್ಥಾನವನ್ನು ಗಳಿಸಿದ ಈ ಸಹಕಾರಿ ಸಂಸ್ಥೆಯು ಪರದೇಶಗಳಿಂದಲೂ ಬೇಡಿಕೆಯ ವಸ್ತುಗಳನ್ನು ಆಮದುಗೊಳಿಸಿ ಗ್ರಾಹಕರಿಗೆ ಪೂರೈಸಿ ಕೊಡುತ್ತಿತ್ತು. ಕಾಲಕ್ರಮೇಣ 1966ನೇ ಇಸವಿಯಲ್ಲಿ ಕಾರ್ಯದರ್ಶಿಯವರ ಅದೃಶ್ಯದಿಂದಾಗಿ ಈ ಸಂಸ್ಥೆಯು ಪ್ರಗತಿ ಹಿನ್ನಡೆಯನ್ನು ಸಾಧಿಸಿತು. ಅನಂತರ ರೋಗಗ್ರಸ್ತವಾದ ಸಂಸ್ಥೆಯು ತನ್ನ ಎಲ್ಲಾ ಆಸ್ತಿ ಪಾಸ್ತಿ ಮತ್ತು ನೌಕರರನ್ನು ಕರೆದುಕೊಂಡು ಸುಮಾರು 5ವರ್ಷಗಳ ಹಿಂದೆ ಮುಚ್ಚಿ ಹೋದುದು ಈ ಪ್ರದೇಶದ ನಿವಾಸಿಗಳ ದುರದೃಷ್ಟ.

**ಸಮಸ್ಯೆಗಳು :**

1. ಕೃಷಿಯಲ್ಲಿ ನಿರತವಾಗಿರುವ ವ್ಯಕ್ತಿಗಳಿಗೆ ತಮ್ಮ ಉತ್ಪನ್ನಗಳಿಗೆ ಯೋಗ್ಯ ಮಾರುಕಟ್ಟೆಯ ಕೊರತೆ.
2. ಸಹಕಾರಿ ಬೇಂಕುಗಳಿಂದ ಕೃಷಿಕರಿಗೆ ಬೇಕಾದ ಆರ್ಥಿಕ ಧನ ಸಹಾಯವು ಸಕಾಲದಲ್ಲಿ ದೊರೆಯದಿರುವುದು
3. ಸಹಕಾರಿ ಸಂಘಗಳು 50ಸೆಂಟ್ಸ್‌ಗಿಂತಲೂ ಕಡಿಮೆ ಭೂಮಿಯನ್ನು ಹೊಂದಿದವರಿಗೆ ಕೃಷಿಗಾಗಿ ಸಾಲವನ್ನು ಕೊಡದಿರುವುದು.
4. ಕೃಷಿ ಅವಶ್ಯಕ್ಕಾಗಿ ಕೊಡುವ ಸಾಲದ ಪರಿಮಿತಿಯಿಂದುಂಟಾಗುವ ಸಮಸ್ಯೆ.
5. ನಿತ್ಯೋಪಯೋಗಿ ವಸ್ತುಗಳನ್ನು ಸಹಕಾರಿ ವ್ಯವಸ್ಥೆಯಲ್ಲಿ ನಿತರಿಸಲು ಯೋಗ್ಯ ಸೌಕರ್ಯಗಳ ಕೊರತೆ.
6. ನಿರುದ್ಯೋಗ ಸಮಸ್ಯೆ ಪರಿಹಾರ ಮಾಡಲು ಸಹಕಾರಿ ರಂಗಗಳಲ್ಲಿ ಕಾರ್ಯ ನಿರ್ವಹಿಸುವ ಕಿರು ಕೈಗಾರಿಕಾ ಘಟಕಗಳ ಕೊರತೆ.
7. ಕೃಷಿ ಉಪಕರಣಗಳು, ಬೀಜ, ಗೊಬ್ಬರ ಮುಂತಾದವುಗಳ ವಿತರಣೆಗಾಗಿ ಸಹಕಾರಿ ಸಂಘಗಳಿಲ್ಲದಿರುವುದು.

**ಪರಿಹಾರಗಳು :**

1. ಸಹಕಾರಿ ಸಂಘಗಳ ಮುಖಾಂತರ ವಸತಿ ಸೌಕರ್ಯಗಳಿಗಾಗಿ ಸಾಲ ಕೊಡುವ ಯೋಜನೆ.
2. Small farmers ಎಂಬ ಹಣೆ ಪಟ್ಟಿಯನ್ನು ಹೊಂದಿರುವ ಕೃಷಿಕರ ಸಾಲದ ಮಿತಿಯನ್ನು ಪರಿಷ್ಕರಿಸುವ ಉದ್ದೇಶದಿಂದ ವಿಸ್ತೀರ್ಣ ಮಿತಿಯನ್ನು 50ರಿಂದ 25 ಸೆಂಟ್ಸ್‌ಗೆ ಇಳಿಸಬೇಕು.
3. ಕೃಷಿಗೆ ಕೊಡುವ ಸಾಲದ ಮಿತಿಯನ್ನು 10,000 ರೂಪಾಯಿಯಿಂದ 20,000 ರೂಪಾಯಿಗೆ ಏರಿಸುವುದು.
4. ಕೃಷಿಕರ ಪೂರ್ಣ ಮಾಹಿತಿಯನ್ನು ಶೇಖರಿಸಿ ಲ್ಯಾಂಡ್ ರಿಜಿಸ್ಟ್ರಾರನ್ನು ತಯಾರಿಸಿಟ್ಟು, ಅದರ ಪ್ರಕಾರ ವರ್ಷಕ್ಕೊಮ್ಮೆ ಸಾಲ ಕೊಡುವ ವ್ಯವಸ್ಥೆಯನ್ನು ಸಹಕಾರಿ ಸಂಘಗಳಲ್ಲಿ ಏರ್ಪಡಿಸುವುದು. ಇದರಿಂದ ಸಾಲ ಕೊಡುವಾಗ ಉಂಟಾಗುವ ಕಾಲ ವಿಳಂಬವನ್ನು ದೂರೀಕರಿಸಬಹುದು.
5. ಸಹಕಾರಿ ರಂಗದಲ್ಲಿ ಪಡಿತರ ವಿತರಣಾ ಕೇಂದ್ರಗಳ ಸ್ಥಾಪನೆ - ವಿದ್ಯಾಗಿರಿ, ಬಾರಡ್ಕ, ಚೆಡೆಕ್ಕಲ್
6. ಮಹಿಳಾ ವಿವಿದೋದ್ದೇಶ ಸಹಕಾರಿ ಸಂಘ ಸ್ಥಾಪನೆ - ಬದಿಯಡ್ಕ, ಮಾನ್ಯ, ಗೋಳಿಯಡ್ಕ, ಕಿಳಿಂಗಾರು
7. ಸಹಕಾರಿ ರಂಗದಲ್ಲಿ ಮಹಿಳೆಯರಿಗೆ ಆಧ್ಯತೆಯನ್ನು ನೀಡುವುದರ ಸಲುವಾಗಿ ಮಹಿಳಾ ಸಹಕಾರಿ ಸಂಘಗಳ ಸ್ಥಾಪನೆ.
8. ಸಹಕಾರಿ ಬೇಂಕುಗಳ ಘಟಕಗಳ ಸ್ಥಾಪನೆ - ಪಳ್ಳತ್ತಡ್ಕ, ಚೆಡೆಕಲ್, ಮಾನ್ಯ
9. ಸಹಕಾರಿ ವ್ಯವಸಾಯ ತರಬೇತಿ ಕೇಂದ್ರದ ಸ್ಥಾಪನೆ - ಪಳ್ಳತ್ತಡ್ಕ
10. ಸಹಕಾರಿ ಕೋಳಿ ಸಾಕಣಾ ಕೇಂದ್ರ ಹಾಗೂ ಮಾಹಿತಿ ಕೇಂದ್ರಗಳನ್ನು ವಿದ್ಯಾಗಿರಿ, ಪಳ್ಳತ್ತಡ್ಕ, ಚೆಡೇಕಲ್, ಗೋಳಿಯಡ್ಕಗಳಲ್ಲಿ ಸ್ಥಾಪಿಸಬೇಕು.
11. ಸಹಕಾರಿ ಹಾಲಿನ ಡೈರಿಗಳನ್ನು ಬದಿಯಡ್ಕ, ಚೆನ್ನೆಗುಳಿ, ವಿದ್ಯಾಗಿರಿ, ಚೆಡೇಕಲ್, ಬೇಳ, ಮಾನ್ಯಗಳಲ್ಲಿ ಸ್ಥಾಪಿಸಬೇಕು.
12. ಮಾವೇಲಿ ಸ್ಟೋರ್ಸ್ : ಬದಿಯಡ್ಕ, ವಿದ್ಯಾಗಿರಿ, ಗೋಳಿಯಡ್ಕ, ಮಾನ್ಯ, ನೀರ್ಚಾಲು
13. ತರಕಾರಿ ಮತ್ತು ಹೂ ಮಾರ್ಕೆಟ್ ಬದಿಯಡ್ಕದಲ್ಲಿ ಸ್ಥಾಪಿಸಬೇಕು.

14. ಸಹಕಾರಿ ರಂಗದಲ್ಲಿ ಕಿರು ಕೈಗಾರಿಕಾ ಸಂಸ್ಥೆಗಳನ್ನು ಸ್ಥಾಪಿಸಬೇಕು.
15. ಸಹಕಾರಿ ಪ್ರಿಂಟಿಂಗ್ ಪ್ರೆಸ್ ಸ್ಥಾಪನೆ - ಬದಿಯಡ್ಕ
16. ವ್ಯಾಪಾರದ ಅಭಿವೃದ್ಧಿಗಾಗಿ ಕನ್‌ಸ್ಯೂಮರ್ ಕೋಓಪರೇಟಿವ್ ಸೊಸೈಟಿ ಸ್ಥಾಪನೆ.
17. ಜೇನು ಸಾಕಣೆಯನ್ನು ಪ್ರೋತ್ಸಾಹಿಸುವುದಕ್ಕೆ ಬೇಕಾಗಿ ಸಹಕಾರಿ ರಂಗದಲ್ಲಿ ಜೇನು ಸಾಕಣಾ ಕೇಂದ್ರದ ಸ್ಥಾಪನೆ.
18. ಕೈಗಾರಿಕಾ ಶೆಡ್ ಸ್ಥಾಪನೆ - ವಿದ್ಯಾಗಿರಿ
19. ಚಾಪೆ ಹೆಣೆಯುವುದು, ಹೊಲಿಗೆ ಮುಂತಾದವುಗಳ ಅಭಿವೃದ್ಧಿಗಾಗಿ ಸಹಕಾರಿ ಸಂಘಗಳ ಸ್ಥಾಪನೆ.
20. ಬದಿಯಡ್ಕದಲ್ಲಿ ಸಹಕಾರೀ ಪುಸ್ತಕದಂಗಡಿ (Co-operative book stall)ಯನ್ನು ಸ್ಥಾಪಿಸುವುದು.

# 16 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಕ್ಷೇಮ

1991ರ ಜನಗಣತಿ ಪ್ರಕಾರ ಬದಿಯಡ್ಕ ಗ್ರಾಮ ಪಂಚಾಯತಿನ ಒಟ್ಟು ಜನಸಂಖ್ಯೆಯ 22.74%ದಷ್ಟು ಜನರು ಪರಿಶಿಷ್ಟ ಜಾತಿ- ಪರಿಶಿಷ್ಟ ವರ್ಗದ ಪಂಗಡಕ್ಕೆ ಸೇರಿದವರಾಗಿದ್ದಾರೆ. ಇವರಲ್ಲಿ ಶೇಕಡಾ 11.94ರಷ್ಟು ಜನರು ಪರಿಶಿಷ್ಟ ಜಾತಿಗೂ ಶೇಕಡಾ 10.80 ರಷ್ಟು ಪರಿಶಿಷ್ಟ ವರ್ಗಕ್ಕೂ ಸೇರಿದವರಾಗಿದ್ದಾರೆ. ಇವರಲ್ಲಿ ಹೆಚ್ಚಿನವರೂ ಕೊಲೊನಿಗಳಲ್ಲಿ ವಾಸವಾಗಿದ್ದಾರೆ. ಬಹಳ ಹಿಂದುಳಿದ ಸ್ಥಿತಿಯಲ್ಲಿ ಜೀವನ ನಡೆಸುತ್ತಿರುವ ಇವರಿಗೆ ವಿದ್ಯಾಭ್ಯಾಸ, ಸಾಮಾಜಿಕ, ಆರ್ಥಿಕ ರಂಗಗಳಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಇನ್ನೂ ಸಾಧ್ಯವಾಗಿಲ್ಲ.

ಪರಂಪರಾಗತ ಕುಲಕಸುಬುಗಳಾದ ಚಾಪೆ ಹೆಣೆಯುವುದು, ಬುಟ್ಟಿ ಹೆಣೆಯುವುದು, ಇತ್ಯಾದಿಗಳು ಹಿಂದೆ ಇವರ ಜೀವನೋಪಾಯದ ಮಾರ್ಗಗಳಾಗಿದ್ದುವು. ಈಗ ಇವರು ಇತರ ಕೆಲಸ ಕಾರ್ಯಗಳಲ್ಲಿ ತೊಡಗಿರುತ್ತಾರೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಜನರ ಅಭಿವೃದ್ಧಿಗಾಗಿ, ಸರಕಾರವು ಹಲವಾರು ಯೋಜನೆಗಳನ್ನು ಜ್ಯಾರಿಗೊಳಿಸಿದ್ದರೂ, ಅವುಗಳನ್ನು ಪೂರ್ಣವಾಗಿ ಕಾರ್ಯರೂಪಕ್ಕೆ ತರಲು ಇಂದಿಗೂ ಸಾಧ್ಯವಾಗಿಲ್ಲ. ಯೋಜನೆಗಳಿಗಿರುವ ನಿಬಂಧನೆಗಳ ಸಂಕೀರ್ಣತೆಯಲ್ಲಿರುವ ಅಜ್ಞಾನವೂ, ಕೆಲವು ದುರಾಭ್ಯಾಸಗಳೂ, ಯೋಜನೆಗಳ ಹಿನ್ನೆಡೆಗೆ ಕಾರಣವಾಗಿದೆ. ಮಾತ್ರವಲ್ಲ ಪ. ಜಾತಿ ಮತ್ತು ಪಂಗಡದವರಿಗೆ ಸಂಬಂಧಿಸಿದ ಯೋಜನೆಗಳನ್ನು ಜ್ಯಾರಿಗೊಳಿಸುವಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮತ್ತು ಮಧ್ಯವರ್ತಿಗಳ ಸ್ವಾರ್ಥ ಮನೋಭಾವನೆಯೂ, ಯೋಜನೆಗಳ ಹಿನ್ನೆಡೆಗೆ ಕಾರಣವಾಗಿರಬಹುದು.

**ವಿದ್ಯಾಭ್ಯಾಸ ಮಟ್ಟ :** ಸಾಕ್ಷರತಾ ಆಂದೋಲನದ ಪರಿಣಾಮವಾಗಿ ಕೊಲೊನಿ ನಿವಾಸಿಗಳಲ್ಲಿ 100% ಸಾಕ್ಷರತೆಯನ್ನುಂಟು ಮಾಡಲು ಸಾಧ್ಯವಾಯಿತು. ಆದರೂ ಮುಂದಿನ ಹಂತಗಳ ವಿದ್ಯಾಭ್ಯಾಸದ ಕೊರತೆಯಿಂದ ಸಾಕ್ಷರತಾ ಮಟ್ಟವು ಕುಸಿಯತೊಡಗಿದೆ. ಇನ್ನಿತರ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರನ್ನು ಏಕೀಕರಿಸಿ ಪೂರ್ಣ ಪ್ರಮಾಣದ ಸಾಕ್ಷರತಾ ಕಾರ್ಯಕ್ರಮವನ್ನು ನಡೆಸಲು ಇದುವರೆಗೆ ಸಾಧ್ಯವಿಲ್ಲ. 1995-96ನೇ ಸಾಲಿನ ಅಧ್ಯಯನ ವರ್ಷದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ ಸೇರಿದ 753 ಹುಡುಗರೂ, 687 ಹುಡುಗಿಯರೂ, ಈ ಪಂಚಾಯತ್‌ನ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. 190 ಹುಡುಗರೂ, 131 ಹುಡುಗಿಯರೂ, ಸೇರಿ ಒಟ್ಟು 321 ಮಕ್ಕಳು ಕಲಿಕೆಯನ್ನು ನಿಲ್ಲಿಸಿದ್ದಾರೆ. ಉನ್ನತ ಶಿಕ್ಷಣವನ್ನು ಪಡೆಯುವವರ ಸಂಖ್ಯೆ ಕೇವಲ ಬೆರಳೆಣಿಕೆಯಷ್ಟೇ ಎಂದು ಹೇಳ ಬಹುದು. ಫೈಲಾದ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ತದನಂತರ ಮುಂದು ವರೆಸುವ ಗೋಜಿಗೆ ಹೋಗದೆ ಸೋಮಾರಿಗಳಾಗಿ ಅಲೆಯಲು ಇಷ್ಟಪಡುತ್ತಿದ್ದಾರೆ. ಆದುದರಿಂದ ಈ ರಂಗದಲ್ಲಿ ಹೆಚ್ಚಿನ ಪುರೋಗತಿ ಇನ್ನೂ ಆಗಬೇಕಾಗಿದೆ.

**ಸಾಮಾಜಿಕ ಸ್ಥಿತಿ :** ಬಹಳ ಹಿಂದಿನ ಕಾಲದಲ್ಲಿ ಪಂಚಾಯತ್‌ನಲ್ಲಿ ಅಸ್ಪೃಶ್ಯತೆ ಎಂಬ ಸಾಮಾಜಿಕ ಪಿಡುಗು ನೆಲೆ ನಿಂತಿತ್ತು. ಈಗ ಅಸ್ಪೃಶ್ಯತೆಯು ಹೆಚ್ಚಿನಂಶ ನಿರ್ಮೂಲನ ಗೊಂಡಿದೆ. ಯಾವುದೇ ಯೋಜನೆಗಳನ್ನು ರೂಪಕರಿಸಿದರೂ ಶುಚಿತ್ವದ ಕಡೆಗೆ ಹೆಚ್ಚು ಗಮನ ಕೊಡದೇ ಇರುವುದು ಈಗ ಕಂಡು ಬರುವ ಕೊರತೆ. ಪಂಚಾಯತ್‌ನಲ್ಲಿರುವ ಕೊರಗ ಸಮುದಾಯದವರಿಗೆ ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಿಲ್ಲ. ಬಹುಶಃ ಅಜ್ಞಾನವೇ ಇದಕ್ಕೆ ಕಾರಣವಾಗಿರಬಹುದು. ಈಗ ಪ. ಜಾತಿ, ಪ. ವರ್ಗಕ್ಕೆ ಸೇರಿದ ಜನರಲ್ಲಿ ಕೆಲವರು ಸಮಾಜದಲ್ಲಿ ನೇತೃತ್ವ ವಹಿಸುತ್ತಿದ್ದಾರೆ. ಎಲ್ಲಾ ರಂಗಗಳಲ್ಲೂ ಸಂಪೂರ್ಣವಾದ ಬದಲಾವಣೆಯು ಇನ್ನೂ ಆಗಬೇಕಾಗಿದೆ.

**ಆಚಾರಗಳು :** ಪರಿಶಿಷ್ಟ ಜಾಅತಿ ಮತ್ತು ಪರಿಶಿಷ್ಟ ವರ್ಗದ ಜನರು ಹಿಂದಿನ ಕಾಲದ ಕೆಲವು ಸಂಪ್ರದಾಯಗಳನ್ನು ಇನ್ನೂ ಪರಿಪಾಲಿಸಿಕೊಂಡು ಬರುತ್ತಿದ್ದಾಆರೆ. ಜಾನಪದ ಕಲೆಗಳಾದ ಆಟಿಕಳಂಜ, ಸೋಣೆ ಜೋಗಿ, ಮರ್ದ ಮುಂತಾದವುಗಳು ಇಂದೂ ಆಯಾ ತಿಂಗಳುಗಳಲ್ಲಿ ಊರಲ್ಲಿ ಕಾಣ ಸಿಗುತ್ತದೆ. ಚೆನ್ನು ಕುಣಿತ, ಕನ್ಯಾಪುಗಳಂತಹ ಜಾನಪದ ಕಲೆಗಳೂ ಅಪ್ರತ್ಯಕ್ಷವಾಗತೊಡಗಿದೆ. ಇವುಗಳೆಲ್ಲಾ ಊರಿಗೆ ಬರುವ ಅನಿಷ್ಟಗಳನ್ನು ದೂರ ಮಾಡುತ್ತವೆ ಎಂಬ ನಂಬಿಕೆಯಿದೆ. ಭೂತಾರಾಧನೆಗೆ ಈ

ಪಂಚಾಯತಿನಲ್ಲಿ ಪ್ರಾಧಾನ್ಯವಿದೆ. ಆದುದರಿಂದ ಭೂತ ಕಲಾವಿದರಿಗೆ, ಜಾನಪದ ಕಲಾವಿದರಿಗೆ ವೃದ್ಧಾಪ್ಯ ವೇತನಗಳಂತಹ ಸೌಕರ್ಯಗಳನ್ನು ಒದಗಿಸಿಕೊಟ್ಟು ಈ ಕಲೆಗಳನ್ನು ಉಳಿಸಲು ಪ್ರಯತ್ನ ಪಡಬೇಕಾಗಿದೆ.

**ವಸತಿ ಸೌಕರ್ಯಗಳು :** ವಸತಿ ಸೌಕರ್ಯಕ್ಕಾಗಿ ಸರಕಾರವು ಹಲವು ಯೋಜನೆಗಳನ್ನು ಜ್ಯಾರಿಗೊಳಿಸಿದೆ. ಈ ಮೂಲಕ ಕೋಲೋನಿಗಳಲ್ಲಿ ಸಂಪೂರ್ಣವಲ್ಲದಿದ್ದರೂ ಭಾಗಶಃ ಮನೆಗಳ ನಿರ್ಮಾಣವಾಗಿದೆ. ಆದರೆ ಇಲ್ಲಿ ಪ್ರಾಥಮಿಕ ಆವಶ್ಯಕತೆಗಳ ಕೊರತೆ ಕಂಡು ಬಂದಿರುತ್ತಿದೆ. ಕೊಲೊನಿಗಳಲ್ಲದ ಇತರ ಪ್ರದೇಶಗಳಲ್ಲಿ ಜೀವಿಸುತ್ತಿರುವ ಜನರಿಗೆ ಪೂರ್ಣವಾಗಿ ಪದ್ಧತಿಯ ಪ್ರಯೋಜನವನ್ನು ಪಡೆಯಲು ಸಾಧ್ಯವಾಗಿಲ್ಲ. ಸರಕಾರವು ಒದಗಿಸಿಕೊಡುವ ಮನೆಗಳಲ್ಲಿ ಸೌಕರ್ಯ ಬಹಳ ಪರಿಮಿತವಾಗಿರುವುದು ಒಂದು ಸಮಸ್ಯೆ. ಆದುದರಿಂದ ಕೊಲೊನಿಗಳಲ್ಲಿ ಹಾಗೂ ಇತರ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಯೋಗ್ಯ ಸೌಕರ್ಯಗಳುಳ್ಳ ಮನೆಗಳ ನಿರ್ಮಾಣವಾಗಬೇಕಾಗಿದೆ. ವಿದ್ಯುತ್, ಕುಡಿನೀರು, ಶೌಚಾಲಯಗಳಂತಹ ಪ್ರಾಥಮಿಕ ಆಆವಶ್ಯಕತೆಗಳನ್ನು ಒದಗಿಸಿಕೊಡಬೇಕಾಗಿದೆ.

**ಉದ್ಯೋಗ :** ಚಾಪೆ ಹೆಣೆಯುವುದು, ಬುಟ್ಟಿ ಹೆಣೆಯುವುದು ಮುಂತಾದವುಗಳು ಪರಂಪರಾಗತ ಕುಲಕಸುಬುಗಳಾಗಿವೆ. ಕುಲಕಸುಬುಗಳಲ್ಲಿ ಈ ಜನಾಂಗದವರಲ್ಲಿ ಅಭಿರುಚಿಯ ಕೊರತೆಯು ಈಗ ಕಂಡು ಬರತೊಡಗಿದೆ. ಜನಾಂಗದವರ ಅಭಿರುಚಿ ಕೊರತೆ ಹಾಗೂ ಕಚ್ಚಾ ವಸ್ತುಗಳ ಕೊರತೆಯಿಂದ ಈ ಕಸುಬುಗಳು ಕುಂಠಿತವಾಗತೊಡಗಿದೆ. ಆದುದರಿಂದ ಇವುಗಳ ಕುರಿತು ಯೋಗ್ಯ ಮಾರ್ಗದರ್ಶನ ಮಾಡ ಬೇಕಾದುದು ಅತೀ ಅವಶ್ಯ. ಇತರ ಕೆಲಸಗಳಲ್ಲಿ ಕೂಡ ಜನರು ಈಗ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಸರಕಾರಿ ಹಾಗೂ ಸಹಕಾರಿ ರಂಗಗಳಲ್ಲೂ ಕೂಡಾ ಕೆಲಸವನ್ನು ನಿರ್ವಹಿಸುತ್ತಿದ್ದಾರೆ.

**ಆರೋಗ್ಯ :** ಆರೋಗ್ಯ ಸ್ಥಿತಿಯ ಸಾಮಾನ್ಯ ಸುಧಾರಣಾ ರೀತಿಯಲ್ಲಿದೆ. ಆದರೆ ಶುಚಿತ್ವಕ್ಕೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಡದೇ ಇರುವುದು ಆರೋಗ್ಯದ ಮಟ್ಟ ಕುಸಿತಕ್ಕೆ ಕಾರಣ. ಹೆಚ್ಚಿನ ಕೊಲೊನಿಗಳಲ್ಲೂ ಶುಚಿತ್ವದ ಕೊರತೆ ಕಂಡು ಬರುತ್ತದೆ. ಶುಚಿತ್ವದ ದೃಷ್ಟಿಯಿಂದ ಯೋಗ್ಯ ಶೌಚಾಲಯ ನಿರ್ಮಾಣ ಅತ್ಯಗತ್ಯ. ಆರೋಗ್ಯದ ಕುರಿತಾದ ಅರಿವನ್ನು ಮೂಡಿಸಲು ಬೋಧನಾ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು. ಪ್ರತೀ ಮೂರು ತಿಂಗಳಿಗೊಮ್ಮೆ ಎಲ್ಲ ಕೊಲೊನಿಗಳಲ್ಲೂ ಆರೋಗ್ಯ ತಪಸಣಾ ಶಿಬಿರ ಏರ್ಪಡಿಸಬೇಕು.

ಬದಿಯಡ್ಕ ಪಂಚಾಯತಿನಲ್ಲಿ ಪರಿಶಿಷ್ಟ ಜಾತಿ -ಪರಿಶಿಷ್ಟ ವರ್ಗದವರ ಕ್ಷೇಮಕ್ಕಾಗಿ ಹಲವಾರು ಯೋಜನೆಗಳನ್ನು ಇಗಾಗಲೇ ಜ್ಯಾರಿಗೊಳಿಸಲಾಗಿದೆ. ಮನೆಕಟ್ಟಲು, ದುರಸ್ತಿಗೊಳಿಸಲು ಆರ್ಥಿಕ ಸಹಾಯ, ವಿದ್ಯುದೀಕರಣ, ಶೌಚಾಲಯ, ಬೀದಿ ದೀಪಗಳ ಅಳವಡಿಸುವಿಕೆ, ಕಮ್ಯೂನಿಟಿ ಹಾಲ್ ನಿರ್ಮಾಣ, ರಸ್ತೆಗಳ ಡಾಮರೀಕರಣ, ಸೋಶಿಯಲ್ ವೆಲ್‌ಫೇರ್ ಸ್ಕೀಂ, ಮೃಗ ಸಂರಕ್ಷಣಾ ಇಲಾಖೆಯವರ ಸ್ಪೆಷಲ್ ಕೋಂಪನೆಂಟ್ ಸ್ಕೀಂ (Special component scheme)ನ್ನು ಆಡು, ಕೋಳಿ, ದನಗಳಂತಹ ಸಾಕು ಪ್ರಾಣಿಗಳ ವಿತರಣೆಗಾಗಿ ಜ್ಯಾರಿಗೊಳಿಸಲಾಗಿದೆ. ಅದೇ ರೀತಿ Tribal sub plan ಎಂಬ ಸ್ಕೀಂನ್ನು S.T. ವಿಭಾಗಕ್ಕೆ ಸಾಕು ಪ್ರಾಣಿಗಳ ವಿತರಣೆಗಾಗಿ ಜ್ಯಾರಿಗೊಳಿಸಲಾಗಿದೆ. ಈ ರೀತಿಯಲ್ಲಿ ಹಲವು ಯೋಜನೆಗಳನ್ನು ಪಂಚಾಯತಿನಲ್ಲಿರುವ ಕೊಲೊನಿಗಳಲ್ಲಿ ಹಾಗೂ ಇನ್ನಿತರ ಪ್ರದೇಶಗಳಲ್ಲಿ ವಾಸಿಸುವ ಪ. ಜಾತಿ ಮತ್ತು ಪ. ವರ್ಗಕ್ಕೆ ಸೇರಿದ ಜನರ ಅಭಿವೃದ್ಧಿಗಾಗಿ ಜ್ಯಾರಿಗೊಸಲಾಗಿದ್ದರೂ ನಿರೀಕ್ಷಿತ ಮಟ್ಟದ ಅಭಿವೃದ್ಧಿ ಕಾರ್ಯ ಇನ್ನೂ ಆಗಿಲ್ಲ. ಆದುದರಿಂದ ಈ ಜನಾಂಗದವರ ಅಭಿವೃದ್ಧಿಗಾಗಿ ಸಮಗ್ರ ಅಭಿವೃದ್ಧಿಯೊಂದನ್ನು ತಯಾರಿಸಿ ಅದನ್ನು ಜ್ಯಾರಿಗೊಳಿಸ ಬೇಕಾಗಿದೆ. ಈ ಯೋಜನೆಯಿಂದ ಅವರನ್ನು ಆರ್ಥಿಕ, ಸಾಂಸ್ಕೃತಿಕ ಹಾಗೂ ವಿದ್ಯಾಭ್ಯಾಸ ರಂಗಗಳಲ್ಲಿ ಪ್ರಗತಿಯತ್ತ ಕೊಂಡೊಯ್ಯಲು ಸಾಧ್ಯವಿದೆ.

**ಸಮಸ್ಯೆಗಳು :**

1. ಕಾಲನಿ ಹಾಗೂ ಇನ್ನಿತರ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಸೂಕ್ತ ವಸತಿ ಸೌಕರ್ಯಗಳಿಲ್ಲ. ಕುಡಿ ನೀರು, ವಿದ್ಯುತ್, ಶೌಚಾಲಯ ಮುಂತಾದ ಪ್ರಾಥಮಿಕ ಸೌಕರ್ಯಗಳ ಕೊರತೆ.
2. ವಾಸಿಸಲು ಯೋಗ್ಯವಲ್ಲದ ಮನೆಗಳ ದುರಸ್ಥಿ ಕಾರ್ಯ ನಡೆಯದಿರುವುದು.
3. ಶೈಕ್ಷಣಿಕವಾಗಿ ಹಿಂದುಳಿದ ಸ್ಥಿತಿ.
4. ಕುಲಕಸುಬುಗಳಾದ ಚಾಪೆ ಹೆಣೆಯುವುದು, ಬುಟ್ಟಿ ಹೆಣೆಯುವುದು ಇತ್ಯಾದಿಗಳನ್ನು ನಡೆಸಲು ಬೇಕಾದ ಸೌಕರ್ಯದ ಕೊರತೆ ಅದರ ಕುರಿತಾದ ಸೂಕ್ತವಾದ ಮಾಹಿತಿಗಳ ಕೊರತೆ.

5. ಶುಚಿತ್ವದ ಕೊರತೆ.
6. ಆರೋಗ್ಯ ಹಾಗೂ ಕುಟುಂಬ ಕಲ್ಯಾಣದಲ್ಲಿ ಆಶಾದಾಯಕ ಪ್ರಗತಿಯನ್ನು ಸಾಧಿಸದಿರಬಹುದು, ಆರೋಗ್ಯ ಕೇಂದ್ರಗಳ ಘಟಕಗಳ ಕೊರತೆ.
7. ಕೃಷಿ ಸ್ಥಳಗಳ ಕೊರತೆ, ಕೃಷಿಗೆ ಬೇಕಾದ ನೀರಾವರಿ ಸೌಕರ್ಯ ಕೃಷಿ ಉಪಕರಣಗಳ ಕೊರತೆ.
8. ಸುಸಜ್ಜಿತ ಕೊಲೊನಿಗಳ ನಿರ್ಮಾಣವಾಗದೆ ಇರುವುದು.
9. ಬೇಳದಲ್ಲಿರುವ I.T.C. ನಿಲುಗಡೆಯಿಂದ ತರಬೇತಿ ಕಾರ್ಯಕ್ರಮ ರದ್ದಾಗಿರುವುದು.
10. ಯೋಗ್ಯ ಸಂಚಾರ ವ್ಯವಸ್ಥೆಗಾಗಿ ರಸ್ತೆಗಳಿಲ್ಲದಿರುವುದು.
11. ಸ್ವೋದ್ಯೋಗ ಹಾಗೂ ಇನ್ನಿತರ ಸಲಹೆಗಳಿಗಾಗಿ ಎಲ್ಲಾ ಪ್ರದೇಶಗಳಲ್ಲೂ ಸಹಕಾರಿ ಸಂಘಗಳಿಲ್ಲದಿರುವುದರಿಂದ ಬೇಂಕುಗಳನ್ನು ಆಶ್ರಯಿಸಬೇಕಾಗಿರುವುದು.
12. ಅಂಗನವಾಡಿ ಇಲ್ಲದಿರುವುದರಿಂದ ಉಂಟಾದ ಸಮಸ್ಯೆಗಳು.
13. ಕೆಲವು ಪ್ರದೇಶಗಳಲ್ಲಿ ಶ್ಮಶಾನ ಇಲ್ಲದಿರುವುದು.
14. ವಾಚನಾಲಯಗಳಿಲ್ಲದಿರುವುದು.
15. ಈಗ ಇರುವ ಅಭಿವೃದ್ಧಿ ಯೋಜನೆಗಳು ಸರಿಯಾಗಿ ಕಾರ್ಯಗತವಾಗದಿರುವುದು.

**ಪರಿಹಾರಗಳು :**

1. ಕಾಲನಿಗಳಲ್ಲಿ ವಾಸಿಸುವ ಕುಟುಂಬಗಳಿಗೆ ಸೂಕ್ತವಾದ ವಸತಿ ಸೌಕರ್ಯ, ಕುಡಿಯುವ ನೀರು, ವಿದ್ಯುತ್ ಸೌಕರ್ಯ, ಶೌಚಾಲಯಗಳಂತಹ ಪ್ರಾಥಮಿಕ ಸೌಕರ್ಯಗಳನ್ನು ಒದಗಿಸುವುದು. ಮನೆ, ಕೆರೆ, ಬಾವಿಗಳನ್ನು ದುರಸ್ತಿಗೊಳಿಸುವುದು.
2. ಇನ್ನಿತರ ಪ್ರದೇಶಗಳಲ್ಲಿ ವಾಸಿಸುವ (ಕಾಲನಿಗಳಲ್ಲದ ಪ್ರದೇಶ) ಜನರಿಗೆ ಸೂಕ್ತ ವಸತಿ ಸೌಕರ್ಯ, ಕುಡಿಯುವ ನೀರು, ಶೌಚಾಲಯಗಳನ್ನು ಒದಗಿಸುವುದು.
3. ಪ್ರಾಥಮಿಕ ಶಾಲೆಗಳ ನಿರ್ಮಾಣ: ಚೆಡೆಕಲ್, ಗೋಳಿಯಡ್ಕ, ಚೆನ್ನೆಗುಳಿ.
4. **a. ಅಂಗನವಾಡಿ** - ಕನಕಪ್ಪಾಡಿ, ಕಿಳಿಂಗಾರು, ಚುಳ್ಳಿಕ್ಕಾನ, ಬೇಳ, ಚೆನ್ನೆಗುಲಿ, ಉದಯಗಿರಿ, ಮೇಗಿನಡ್ಕ, ಮುಳಿಪರಂಬ, ಕಾರ್‍ಮಾಡು, ಗೋಳಿಯಡ್ಕ, ಪಟ್ಟಾಜೆ, ಚುಕ್ಕಿನಡ್ಕ, ತಲ್ಪಣಾಜೆ.
   **b. ವಾಚನಾಲಯ** - ವಾಚನಾಲಯ ಇಲ್ಲದ ಎಲ್ಲಾ ಕಾಲೊನಿಗಳಿಗೂ,
5. ಚಾಪೆ, ಬುಟ್ಟಿ ಹೆಣೆಯುವುದರ ಮಾಹಿತಿ ಕೇಂದ್ರ ಹಾಗೂ ಕೈಗಾರಿಕಾ ಶೆಡ್, ಬದಿಯಡ್ಕ, ದರ್ಬೆತಡ್ಕಗಳಂತಹ ಪ್ರದೇಶಗಳಲ್ಲಿ ಮತ್ತು ಅವಶ್ಯವಿರುವ ಇತರ ಪ್ರದೇಶಗಳಲ್ಲಿ.
6. ಶುಚಿತ್ವಕ್ಕೆ ಪ್ರಾಧಾನ್ಯ ನೀಡುವ ಕಾರ್‍ಯಕ್ರಮದ ಅಂಗವಾಗಿ ಬೋಧನಾ ಕಾರ್ಯಕ್ರಮ, ಆರೋಗ್ಯ ಇಲಾಖೆಯ ವತಿಯಿಂದ ಕೊಲೊನಿಗಳ ಭೇಟಿ .
7. **ಆರೋಗ್ಯ ಕೇಂದ್ರದ ಘಟಕಗಳ ಸ್ಥಾಪನೆ :** ಕಿಳಿಂಗಾರು, ಪಟ್ಟಾಜೆ ಕೊಲೊನಿ, ಪೆರಡಾಲ ಕೊರಗ ಕೊಲೊನಿ, ತಲ್ಪಣಾಜೆ.
8. **ಕೃಷಿಗೆ ಬೇಕಾದ ಉಪಕರಣಗಳ ವಿತರಣೆ, ಕೆರೆ ನಿರ್ಮಾಣ** - ಮುಣ್ಚಿಕ್ಕಾನ, ವಾಂತಿಚ್ಚಾಲು, ಪಡು ಮುಂಡೋಡು (ಕೊಳವೆ ಬಾವಿ)
9. **ವಾಟರ್ ಟೇಂಕ್ :** ಕನಕಪ್ಪಾಡಿ, ಬಾರಡ್ಕ, ಗೋಳಿಯಡ್ಕ
10. **ಶ್ಮಶಾನ ನಿರ್ಮಾಣ :** ವಾರ್ಡ್ : I, ಚೆನ್ನೆಗುಳಿ, ಏಣೆಯರ್ಪು ದರ್ಬೆತಡ್ಕ - ಅವಶ್ಯವಾಗಿ ಬೇಕಾದಂತಹ ಸುತ್ತಗೋಡೆ, ದಾರಿ ನಿರ್ಮಾಣ.
11. **ಹೊಸ ಕೊಲೊನಿ ನಿರ್ಮಾಣ** - ಕಂಗಿಲ, ಮುಚ್ಚಿರ್‌ಕಚೆ, ಹೂಹಾಕುವ ಕಲ್ಲು, ಏನಂಗೋಡ್ಲು, ಕೋರಿಕ್ಕಾರು, ಚಾಲಕ್ಕೋಡು (ಬೈರಕೊಲೊನಿ) ಪಟ್ಟಾಜೆ, ಚುಳ್ಳಿಕ್ಕಾನ, ಸೀತಾಂಗೋಳಿ, ಮೇಲಿನ ಬೇಳ, ಕುಂಜಾರು, ಪುದುಕೋಳಿ.

12. **ರಸ್ತೆ ನಿರ್ಮಾಣ :** ಉರಿಳಿತ್ತಡ್ಕ - ನಿಡುಗಳು
ಚೆಡೆಕಲ್ - ಪೆರಡಾಲ
ಬೋಳುಕಟ್ಟೆ - ಕನಕಪ್ಪಾಡಿ, ಚುಕ್ಕನಡ್ಕ ಕೊಲೊನಿ
ಪೆರಡಾಲ ಮೂಲೆ ಕೊಲೊನಿ ಕಾಲು ದಾರಿ.

13. **ಡಾಮರೀಕರಣ :** ಮೆಣಸಿನ ಪಾರೆ ಕೊಲೊನಿ, ಅನ್ನಪಳ್ಳಡ್ಕ ಕೊಲೊನಿ, ಬೀಜಂತಡ್ಕ - ಅರ್ತಿಪಳ್ಳ, ಕನ್ನಪಾಡಿ - ಚುಕ್ಕಿನಡ್ಕ - ಮಾನ್ಯ, ಪಿರೆಯಡ್ಕ, ದರ್ಬೆತಡ್ಕ ಕೊಲೊನಿ, ಪುದುಕೋಳಿ ಕೊಲೊನಿ ರೋಡ್, ಚರ್ಲಡ್ಕ-ಮುಳಿಪರಂಬ ಕೊಲೊನಿ, ಮಾನ್ಯ-ಚೆಡೆಕಲ್, ಏಳ್ಕಾನ ಕೊಲೊನಿ, ಬಾಜಂತಡ್ಕ (ಉದಯಗಿರಿ ) ಕೊಲೊನಿ ರೋಡ್, ದೇವರ ಕೆರೆಯಿಂದ ಮುಂಡೋಡು MLA Road ಮೂಲಕ ಬೊಳ್ಳುರಡ್ಕ

14. **ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗ ಸಹಕಾರಿ ಸಂಘಗಳ ರೂಪೀಕರಣ** - ಬೇಳ, ಮಾನ್ಯ, ಗೋಳಿಯಡ್ಕ. ಇವುಗಳ ಮೂಲಕ ಸ್ವೋದ್ಯೋಗಕ್ಕೆ ಸಾಲಕೊಡುವ ಯೋಜನೆ. ತಾಲೂಕು ವೆಲ್‌ಫೇರ್ ಘಟಕ (ಬೇಳ)

15. ಬೇಳ I.T.C.ಯನ್ನು I.T.I. ಯಾಗಿ ಮಾರ್ಪಡಿಸುವುದು.

17

# ಸಂಪನ್ಮೂಲ ಸಂಗ್ರಹ

ಬದಿಯಡ್ಕ ಗ್ರಾಮ ಪಂಚಾಯತು I ಗ್ರೇಡ್ ಪಂಚಾಯತು ಆಗಿದೆ. ಈ ಪಂಚಾಯತು ಸ್ವಲ್ಪ ಮಟ್ಟಿಗೆ ಕೃಷಿ ರಂಗದಲ್ಲಿ ಅಭಿವೃದ್ಧಿ ಹೊಂದಿದೆ. ವ್ಯವಸಾಯ ರಂಗ ಮತ್ತು ಪರಂಪರಾಗತವಾದ ಕೈಗಾರಿಕೆಯಲ್ಲಿ ಈಗಲೂ ಬಹಳಷ್ಟು ಹಿಂದುಳಿದಿದೆ. ಆದ ಕಾರಣ ಇಲ್ಲಿಯ ಜನರು ದಾರಿದ್ರ್ಯ ರೇಖೆಗಿಂತ ತುಂಬಾ ಕೆಳಮಟ್ಟದಲ್ಲಿದ್ದಾರೆ. ಇಲ್ಲಿಯ ಹೆಚ್ಚಿನ ಜನರೂ ನಿರುದ್ಯೋಗಿಗಳಾಗಿದ್ದಾರೆ. ಇಲ್ಲಿಯ ಜನರಲ್ಲಿ ಕೆಲವರು ಉದ್ಯೋಗವನ್ನು ಹುಡುಕಿಕೊಂಡು ವಿದೇಶಗಳಿಗೂ, ಅನ್ಯಸಂಸ್ಥಾನಗಳಿಗೂ ಈಗಲೂ ಹೋಗುತ್ತಿದ್ದಾರೆ. ಈ ಪಂಚಾಯತ್ ಪರಿಸರವು ಸಂಪನ್ಮೂಲ ಸಂಗ್ರಹದಲ್ಲಿ ಹಿಂದುಳಿದ ಕಾರಣ ಪಂಚಾಯತಿನ ಆದಾಯವು ಬಹಳಷ್ಟು ಕಡಿಮೆಯಾಗಿದೆ.

1993-94ನೇ ವರ್ಷದ ಪಂಚಾಯತಿನ ಒಟ್ಟು ವರಮಾನ ರೂ. 11,66,321.60/-, 1994-95ನೇ ವರ್ಷದಲ್ಲಿ ರೂ. 10,64,110.30/-, 1995-96ನೇ ವರ್ಷದಲ್ಲಿ ರೂ. 14,44,818/- ಆಗಿದೆ. ಮೇಲೆ ಸೂಚಿಸಿದ ಪಂಚಾಯತಿನ ವರಮಾನವು ಪಂಚಾಯತಿಗೆ ವಿವಿಧ ಮೂಲಗಳಿಂದ ಸಿಕ್ಕಿದ ವರಮಾನವಾಗಿದೆ. ಉದಾಹರಣೆ ಕಟ್ಟಡ ತೆರಿಗೆ, ವಿನೋದತೆರಿಗೆ, ಉದ್ಯೋಗ ತೆರಿಗೆ, ಇತ್ಯಾದಿ ಇದರ ಕುರಿತಾದ ಸಂಪೂರ್ಣ ಮಾಹಿತಿಯನ್ನು ಪಟ್ಟಿ- ಒಂದರಲ್ಲಿ ಸೂಚಿಸಲಾಗಿದೆ.

ಬದಿಯಡ್ಕ ಗ್ರಾಮ ಪಂಚಾಯತು ಆದಾಯ ಪಟ್ಟಿ.

| | | 1993-94 | 1994-95 | 1995-96 |
|---|---|---|---|---|
| Sl. No. | ವಿಧಗಳು | Rs. Ps. | Rs. Ps. | Rs. Ps. |
| 1. | ಕಟ್ಟಡ ತೆರಿಗೆ | 2,28,135.60 | 2,21,565.40 | 1,63,253.00 |
| 2. | ಉದ್ಯೋಗ ತೆರಿಗೆ | 1,66,655.00 | 1,73,725.00 | 1,28,460.00 |
| 3. | ಮನೋರಂಜನೆ ತೆರಿಗೆ | 45.00 | 45.00 | 295.00 |
| 4. | ಪರವಾನಿಗೆ ತೆರಿಗೆ | 6,567.00 | — | 6,790.00 |
| 5. | ಸಂತೆ ತೆರಿಗೆ | 100.00 | 75.00 | 115.00 |
| 6. | ವಾಹನ ತೆರಿಗೆ | — | — | 124.00 |
| 7. | ಜಮೀನಿ ಕೈ ಬದಲಾವಣೆ 75% | 1,62,747.00 | 1,40,780.00 | 1,00,528.00 |
| 8. | " " 25% | 50,000.00 | 50,000.00 | 50,000.00 |
| 9. | ಪ್ರದರ್ಶನ ತೆರಿಗೆ | 159.00 | 180.00 | 56.00 |
| 10. | ಅಡಿಶನಲ್ ಮನೋರಂಜನಾ ತೆರಿಗೆ | — | — | 13.00 |
| 11. | ಸರ್ವಿಸ್ ಚಾರ್ಜು | 36.00 | 45.00 | 4,908.00 |
| 12. | ಸರಕಾರದ ಗ್ರೇಂಟ್ ಇನ್ನಿತರ | 5,24,274.20 | 4,63,006.35 | 6,18,991.00 |
| 13. | ಡೆಪೊಸಿಟ್ | 27,602.80 | 15,868.15 | 16,948.00 |
| 14. | ಇನ್ನಿತರ | — | 1,06,529.30 | 3,54,357.00 |
| | ಜುಮ್ಲಾ | **11,66,321.60** | **10,64,110.30** | **14,44,818.00** |

ಮೇಲೆ ಸೂಚಿಸಿದ ಪಂಚಾಯತಿನ ವರಮಾನದಲ್ಲಿ ಸರಕಾರವು ಸಹಾಯಧನವಾಗಿ ಕೊಟ್ಟ ಹಣ 1993-94 ರಲ್ಲಿ Rs. 5,24,274.20, 1994-95ರಲ್ಲಿ 4,63,006.35, 1995-96 ರಲ್ಲಿ 6,18,991.00. ಒಟ್ಟು ಆದಾಯದಲ್ಲಿ 1993-94ರಲ್ಲಿ ಆಡಳಿತಕ್ಕೆ 13.92%, ವಿದ್ಯಾಭ್ಯಾಸಕ್ಕೆ 1.5%, ಕಾಮಗಾರಿಗೆ 55.1%, ನೀರಾವರಿಗೆ 2.9%, ದಾರಿದೀಪ 1.16% ಇತರ ಎಲ್ಲಾ ವಿಭಾಗಗಳಿಗೆ 25.4% ಖರ್ಚು ಮಾಡಲಾಗಿದೆ. ಈ ಕುರಿತಾದ ಖರ್ಚಿನ ವಿವರಗಳನ್ನು ಪಟ್ಟಿ 2 ರಲ್ಲಿ ಕೊಡಲಾಗಿದೆ.

ಖರ್ಚು ವಿವರಗಳು

| ಕ್ರಮ ನಂಬ್ರ | ವಿಧಗಳು | 1993-94 | 1994-95 | 1995-96 |
|---|---|---|---|---|
| 1. | ಆಡಳಿತ | 3,01,076.00 | 4,02,285.00 | 4,82,900.00 |
| 2. | ಲೋಕೋಪಯೋಗಿ | 11,98,659.00 | 9,33,177.25 | 10,11,762.25 |
| 3. | ವಿದ್ಯಾಭ್ಯಾಸ | 32,650.00 | 41,109.00 | 46,526.00 |
| 4. | ಕುಡಿನೀರು, ಆರೋಗ್ಯ ( ನೀರಾವರಿ) | 62,978.00 | 39,743.75 | 52,039.00 |
| 5. | ದಾರಿದೀಪ | 25,392.00 | 25,140.00 | — |
| 6. | ಇತರ | 5,53,489.65 | 5,69,718.80 | 5,11,934.75 |
| | **Total** | **21,74,245.35** | **20,11,173.80** | **21.05,164.00** |

1995-96ರಲ್ಲಿ ಪಂಚಾಯತ್ತಿನ ಆದಾಯದಲ್ಲಿ ಒಟ್ಟು ಆದಾಯದಲ್ಲಿ ಆಡಳಿತಕ್ಕೆ 22.94%, ವಿದ್ಯಾಭ್ಯಾಸಕ್ಕೆ 2.21%, ಕಾಮಗಾರಿಗೆ 48.06%, ನೀರಾವರಿಗೆ 2.48% ಮತ್ತು ಇತರ ಎಲ್ಲಾ ವಿಭಾಗಕ್ಕೆ 24.31% ಆಗಿರುವುದು.

ಹೀಗೆ ಪಂಚಾಯತು ತನ್ನ ಆದಾಯ ಅರ್ಧಾಂಶವನ್ನು ಕಾಮಗಾರಿ ಕೆಲಸಗಳಿಗಾಗಿ ವಿನಿಯೋಗಿಸಿದೆ. ಇದರಿಂದಾಗಿ ಉತ್ಪಾದನಾ ರಂಗದಲ್ಲಿಯೂ, ವಿದ್ಯಾಭ್ಯಾಸ ರಂಗದಲ್ಲಿಯೂ ಬೇಕಾದ ಮಹತ್ವ ಕೊಡಲು ಪಂಚಾಯತಿಗೆ ಆಗಲಿಲ್ಲ.

ಈ ಪಂಚಾಯತಿಗೆ ಸಂಬಂಧಿಸಿದಂತೆ R.D.B. ಪದ್ಧತಿ ಪ್ರಕಾರ ನಿರ್ಮಿಸಿದ ಎರಡು ವ್ಯಾಪಾರೀ ಸಂಕೀರ್ಣಗಳಿವೆ. ಎದರಲ್ಲಿ ಒಂದು ಬಸ್ ನಿಲ್ದಾಣ ಒಳಗೊಂಡ ವಾಣಿಜ್ಯ ಸಂಕೀರ್ಣ, ಇನ್ನೊಂದರಲ್ಲಿ ಪಂಚಾಯತು ಕಛೇರಿಯೂ ಕಾರ್ಯವೆಸಗುತ್ತಿದೆ. ಇವೆರಡರಲ್ಲಿಯೂ ಸೇರಿ 16 ವ್ಯಾಪಾರೀ ಕೋಣೆಗಳ ಬಾಡಿಗೆಗಳು ಪಂಚಾಯತಿಗೆ ಸಿಗುತ್ತವೆ. ಇದರಿಂದ ವರ್ಷದಲ್ಲಿ ರೂ. 1,02,343/- ಪಂಚಾಯತಿಗೆ ಆದಾಯವಾಗಿ ದೊರೆಯುತ್ತದೆ. 1996-97ರ ಅವಧಿಯಲ್ಲಿ JRY ಪದ್ಧತಿ ಪ್ರಕಾರ 10 ಕೋಣೆಗಳಿರುವ ಒಂದು ಮಹಡಿ ಕಟ್ಟಡ ನಿರ್ಮಿಸಲ್ಪಡುತ್ತದೆ. ಪಂಚಾಯತ್ ರೂರಲ್ ಡೆವೆಲಪ್‌ಮೆಂಟ್ ಬೋರ್ಡಿನಿಂದ ಆಫೀಸು ಕಂ ಶೋಪಿಂಗ್ ಕೋಂಪ್ಲೆಕ್ಸ್‌ಗೆ ಸಾಲ ತೆಗೆಯಲಾಗಿದೆ. ಕಟ್ಟಡದ ಕೆಲಸವು ತ್ವರಿತಗತಿಯಲ್ಲಿ ಮುಂದುವರಿಯುತ್ತದೆ. ಈಗ ಪಂಚಾಯತು ಪಾವತಿ ಮಾಡಲಿಕ್ಕಿರುವ ಸಾಲವು ರೂ. 10,95,477/- ಆಗಿರುತ್ತದೆ.

ಪಂಚಾಯತು ತನ್ನ ಆದಾಯದಲ್ಲಿ ಹೆಚ್ಚಿನ ಭಾಗವನ್ನು ಲೋಕೋಪಯೋಗಿ ಕಾರ್ಯಗಳಿಗೆ ನಿಯಮಾನುಸಾರ ಖರ್ಚು ಮಾಡುತ್ತಿದೆ. ಲೋಕೋಪಯೋಗಿ ಕೆಲಸಗಳಲ್ಲಿ ರಸ್ತೆ ನಿರ್ಮಾಣ, ನೀರಾವರಿ ಮೊದಲಾದವುಗಳನ್ನು ಕೆಲವು ಕಂಟ್ರಾಕ್ಟುದಾರರ ಮೂಲಕವೂ ಕೆಲವು ಸ್ಥಳೀಯ ಸಮಿತಿಗಳಿಂದಲೂ ಇನ್ನು ಕೆಲವು ಪಂಚಾಯತು ನೇರವಾಗಿಯೂ ನಡೆಸುತ್ತಿದೆ. ಸಂದರ್ಭಕ್ಕೆ ಅನುಸಾರವಾಗಿ ಆಡಳಿತ ಸಮಿತಿಯು ನಿಯಮಾನುಸಾರ ಬೇಕಾದ ಬದಲಾವಣೆಗಳನ್ನು ಕೈಗೊಳ್ಳುವುದು. ಇಲ್ಲಿ ರಾಷ್ಟ್ರೀಕೃತ ವಾಣಿಜ್ಯ ಬೇಂಕುಗಳು, ಸಹಕಾರೀ ಬೇಂಕುಗಳು, ಸಹಕಾರಿ ಸಂಘಗಳು, ನಿರುದ್ಯೋಗ ನಿವಾರಣೆಗೆ ಸಾಲ ಸೌಕರ್ಯಗಳನ್ನು ಒದಗಿಸುತ್ತವೆ. ಆದರೆ ಕಾರಣಾಂತರಗಳಿಂದ ಅಗತ್ಯವಿರುವ ಎಲ್ಲಾ ಜನರಿಗೂ, ಈ ಬೇಂಕುಗಳಿಂದ ಸಾಲ ಪಡೆಯಲು

ಕಷ್ಟವಾಗುವುದು. ಅಲ್ಲದೆ ಬ್ಯಾಂಕೇತರ ಆರ್ಥಿಕ ಸಂಸ್ಥೆಗಳು ಈ ಪಂಚಾಯತಿನಲ್ಲಿವೆ. ಅವುಗಳು ಸಾಲ ಅಗತ್ಯವಿರುವವರಿಗೆ ಚಿನ್ನಾಭರಣ ಅಡವಿನ ಮೇಲೆ ಸಾಲ ನೀಡುತ್ತವೆ. ಆದರೆ ಅವು ಹೇರಳ ಬಡ್ಡಿಯನ್ನು ವಸೂಲು ಮಾಡುತ್ತವೆ. ಈ ಸಾಲವನ್ನು ಹೆಚ್ಚಾಗಿ ನಿರುದ್ಯೋಗಿಗಳು ವ್ಯಾಪಾರಿಗಳು ಮತ್ತು ವಾಹನ ಖರೀದಿಸುವವರು ಪಡೆಯುತ್ತಾರೆ.

ಈ ಪಂಚಾಯತಿನಿಂದ ವಿದೇಶ ಮತ್ತು ಕೊಲ್ಲಿ ದೇಶಗಳಿಗೆ ಅನೇಕ ಮಂದಿ ಉದ್ಯೋಗಕ್ಕಾಗಿ ಹೋಗಿದ್ದಾರೆ. ಇದರ ಸಂಪಾದನೆಯಲ್ಲಿ ಹೆಚ್ಚಿನ ಭಾಗವನ್ನು ಕಟ್ಟಡ ನಿರ್ಮಾಣಗಳಿಗೆ ಉಪಯೋಗಿಸುತ್ತಾರೆ. ಅದೇ ರೀತಿಯಲ್ಲಿ ವಾಹನ ಖರೀದಿಗೂ ತಮ್ಮ ಆದಾಯದ ಸ್ವಲ್ಪ ಭಾಗವನ್ನುಪಯೋಗಿಸುತ್ತಾರೆ. ಕೊಲ್ಲಿ ಆದಾಯದಿಂದ ಕೈಗಾರಿಕೆ ಮತ್ತು ಕೃಷಿಗೆ ಉಪಯೋಗಿಸುವ ಹಣದ ಪ್ರಮಾಣ ಕಡಿಮೆ.

ಈ ಪಂಚಾಯತಿನಲ್ಲಿ ನಡೆಯುವ ಸ್ವಯಂ ಸೇವಾ ಕೆಲಸಗಳು ಬಹಳ ಕಡಿಮೆ. ಸ್ವಯಂ ಸೇವಾ ಸಂಸ್ಥೆಗಳು ಮುಖ್ಯವಾಗಿ ಆಟೋಟ ಸ್ಪರ್ಧೆಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹೆಚ್ಚಿನ ಮಹತ್ವ ಕೊಡುತ್ತವೆ.

**ಪಂಚಾಯತಿನ ಸಮಸ್ಯೆಗಳು :-**

1. ಪಂಚಾಯತಿಗೆ ಬರುವ ಆದಾಯ ಕಡಿಮೆಯಾಗಿರುತ್ತದೆ.
2. ಸಂಬಳ, ತುಟ್ಟಿ ಭತ್ತೆ ಮೊದಲಾದವುಗಳಲ್ಲಿ ಕಾಲ ಕಾಲದಲ್ಲಿ ಉಂಟಾದ ಹೆಚ್ಚಳದಿಂದ ಆಡಳಿತ ಖರ್ಚು ಹೆಚ್ಚುವುದು.
3. ಕಾಮಗಾರೀ ಹಾಗೂ ಇತರ ಕೆಲಸಗಳನ್ನು ಕಂಟ್ರಾಕ್ಟುದಾರರಿಗೆ ಕೊಡುವುದರಿಂದಾಗಿ ಅವರು ಅಮಿತ ಲಾಭಗಳಿಸುತ್ತಾರೆ.
4. ಸ್ವಯಂ ಸೇವಾ ಕೆಲಸಗಳಲ್ಲಿ ಕುಂದುತ್ತಿರುವ ಆಸಕ್ತಿ.

**ಪರಿಹಾರಗಳು :**

1. ಕಟ್ಟಡ ತೆರಿಗೆ ಹಾಗೂ ಇನ್ನಿತರ ತೆರಿಗೆಗಳನ್ನು ಸರಿಯಾದ ಮಾನ ದಂಡದಲ್ಲಿ ವಸೂಲಿ ಮಾಡಿ ಅದರಲ್ಲಿ ವಂಚನೆ ತಡೆಯುವುದು.
2. ಕಾಮಗಾರೀ ಕೆಲಸಗಳನ್ನು ಗ್ರಾಮ ಸಮಿತಿಗೆ ಒಪ್ಪಿಸುವುದು. ಆ ಕೆಲಸದ ಒಂದು ಭಾಗವನ್ನು ಸ್ವಯಂ ಸೇವಾ ಚಟುವಟಿಕೆಗಳ ಮೂಲಕ ನೆರವೇರಿಸಿ ಖರ್ಚನ್ನು ಕಡಿಮೆಗೊಳಿಸುವುದು.
3. ಸ್ವಯಂ ಸೇವಾ ಕೆಲಸಗಳನ್ನು ಮಾಡುವವರಿಗೆ ಎಲ್ಲಾ ರೀತಿಯ ಪ್ರೋತ್ಸಾಹ ನೀಡುವುದು.
4. ಪಂಚಾಯತಿನ ಎಲ್ಲಾ ಲೆಕ್ಕ ಪತ್ರಗಳನ್ನು ಮುದ್ರಿಸಿ ಗ್ರಾಮ ಸಭೆಯಲ್ಲಿ ಮಂಡಿಸುವುದು.
5. ಉದ್ಯೋಗ ತೆರಿಗೆಯ ಸಂಗ್ರಹ ಪದ್ಧತಿಯನ್ನು ಪರಿಷ್ಕರಿಸುವುದು.
6. ಸಿನೆಮಾ ಮಂದಿರ, ಕಲಾ ಮಂದಿರ ಮೊದಲಾದವುಗಳ ನಿರ್ಮಾಣಕ್ಕೆ ಪ್ರೋತ್ಸಾಹ.
7. ಪಂಚಾಯತ್ ವತಿಯಿಂದ ಕೃಷಿ ಉಪಕರಣಗಳ ವಿತರಣೆ.

**ಈ ಕೆಳಗಿನ ಉತ್ಪನ್ನಗಳನ್ನು ಲಾಭದಾಯಕವಾಗಿ ಬಳಸಲು ಅನುಕೂಲಕರ ಕೇಂದ್ರಗಳನ್ನು ಕೆಳಗೆ ನಮೂದಿಸಲಾಗಿದೆ.**

| ಉತ್ಪನ್ನಗಳು | ಕೇಂದ್ರಗಳು |
|---|---|
| 1. ಅಡಿಕೆ ಮರದ ಉತ್ಪನ್ನ | a. ಕೈಗಾರಿಕಾ ವ್ಯವಸ್ಥೆ ಮತ್ತು ಮಾರಾಟ ಕೇಂದ್ರಗಳು - ಪಳ್ಳತ್ತಡ್ಕ, ಕಡಾರು, ಪೆರುಮುಂಡ<br>b. ಸೋಗಿಯಿಂದ ಜೈವಿಕ ಗೊಬ್ಬರ ತಯಾರಿ ಘಟಕದ ಸ್ಥಾಪನೆ. ಕಿಳಿಂಗಾರು, ತಲ್ಪಣಾಜೆ, ಏಳ್ಕಾನ |

| ಉತ್ಪನ್ನಗಳು | | ಕೇಂದ್ರಗಳು | |
|---|---|---|---|
| | | c. | ಸೋಗೆಯಿಂದ ಹಿಡಿಸೂಡಿ ತಯಾರಿ - ಕುಂಟಿಕಾನ, ಬದಿಯಡ್ಕ |
| | | d. | ಹಾಳೆಯಿಂದ ಬಟ್ಟಲು, ಕಪ್ ಇತ್ಯಾದಿಗಳ ತಯಾರಿ ಘಟಕಗಳು - ಪಳ್ಳತ್ತಡ್ಕ, ಪೆರುಮುಂಡ, ಪೆರಡಾಲ |
| 2. | ತೆಂಗಿನ ಉತ್ಪನ್ನಗಳು | | ಕೈಗಾರಿಕಾ ಮತ್ತು ಮಾರಾಟ ಕೇಂದ್ರಗಳು |
| | | a. | ತೆಂಗಿನ ನಾರಿನ ಉತ್ಪನ್ನ ಘಟಕ - ಉಕ್ಕಿನಡ್ಕ |
| | | b. | ಚಾಪೆ, ಹುರಿಹಗ್ಗ ನಿರ್ಮಾಣ ಘಟಕ - ಪಳ್ಳತ್ತಡ್ಕ, ವಿದ್ಯಾಗಿರಿ, ಬೇಳ |
| | | c. | ಮಡಲಿನಿಂದ ಹಿಡಿಸೂಡಿ ತಯಾರಿ - ಪೆರಡಾಲ, ಉದಯಗಿರಿ, ಪೆರುಮುಂಡ |
| 3. | ಬುಟ್ಟಿ ತಯಾರಿ ಘಟಕ | | ಮಾಡತ್ತಡ್ಕ, ಕಾಡಮನೆ, ಬೇಳ, ಬದಿಯಡ್ಕ, ಕಾರ್ಯಾಡು |
| 4. | ಕಟ್ಟಿಗೆ ಡಿಪೋ | | ಬದಿಯಡ್ಕ |
| 5. | ಚಾಪೆ ಹೆಣೆಯುವ ಕೇಂದ್ರ | | ತಲ್ಪಣಾಜೆ, ಕುಂಟಿಕಾನ, ನೀರ್ಚಾಲು, ಉದಯಗಿರಿ, ಕಾಡಮನೆ |
| 6. | ಇಟ್ಟಿಗೆ ನಿರ್ಮಾಣ ಕೇಂದ್ರ | | ಕಡಾರು, ಮಾನ್ಯ ಏಣಿಯರ್ಪು |
| 7. | ಆವೆ ಮಣ್ಣಿನಿಂದ ಕರಕುಶಲ ವಸ್ತುಗಳ ಉತ್ಪಾದನಾ ಕೇಂದ್ರ | | ಮಾನ್ಯ |
| 8. | ಹಂಚು ನಿರ್ಮಾಣ ಕೇಂದ್ರ | | ಏಣಿಯರ್ಪು |
| 9. | ಗೇರು ಬೀಜ ಸಂಸ್ಕರಣಾ ಕೇಂದ್ರ | | ಮಾನ್ಯ - ಗೋಳಿಯಡ್ಕ |
| 10. | ಜಲ್ಲಿ ತಯಾರಿ ಉದ್ಯಮ | | ಕೊರತಿಗುಳಿ |
| 11. | ಕೆಂಪು ಕಲ್ಲು ಕಡಿಯುವ ಉದ್ಯಮ | | ಕಿಳಿಂಗಾರು, ಕನಕಪ್ಪಾಡಿ, ಕುಮಾರಮಂಗಲ, ಕೊರತ್ತಿಗುಳಿ |
| 12. | ಕೋಳಿ ಸಾಕಣಾ ಕೇಂದ್ರ | | ತಲ್ಪಣಾಜೆ, ಕನ್ನೆಪ್ಪಾಡಿ |
| 13. | ಪ್ಲೈವುಡ್ ಕಾರ್ಖಾನೆ | | 10ನೆಯ ವಾರ್ಡು |
| 14. | ಹಣ್ಣು-ಹಂಪಲು ಸಂಸ್ಕರಣಾ ಕೇಂದ್ರ | | ಗೋಳಿಯಡ್ಕ, ಕನ್ನೆಪ್ಪಾಡಿ |
| 15. | ಗುಡಿ ಕೈಗಾರಿಕಾ ಕೇಂದ್ರ (ಬಿದಿರು ಮತ್ತು ಕಾಡುತ್ಪತ್ತಿ) | | ಮಾನ್ಯ |
| 16. | ಹಪ್ಪಳ ತಯಾರಿ ಕೇಂದ್ರ | | ಪೆರಡಾಲ, ಕುಂಟಿಕಾನ, ಪಳ್ಳತ್ತಡ್ಕ |

18

# ಉಪಸಂಹಾರ

ಜಿಲ್ಲಾ ಯೋಜನಾ ಕಛೇರಿಯಿಂದ ದೊರೆತ ನಿರ್ದೇಶನದ ಪ್ರಕಾರ ಸಾಧ್ಯವಿದ್ದಷ್ಟೂ ಶ್ರಮಿಸಿ ವಿಕಸನ ವರದಿಯನ್ನು ನಿಮ್ಮ ಮುಂದಿ ಇರಿಸಿದ್ದೇವೆ. ಇದಕ್ಕಾಗಿ ಸ್ವಯಂಸೇವಾ ಮನೋಭಾವನೆಯಿಂದ ಹಲವರು ಶ್ರಮಿಸಿರುವುದನ್ನು ಕೃತಜ್ಞತಾಪೂರ್ವಕ ಸ್ಮರಿಸುತ್ತಿದ್ದೇವೆ. ಮಾತ್ರವಲ್ಲದೆ ಮುಂದಿನ ಸ್ಕೀಂಗಳು ಜ್ಯಾರಿಗೆ ಇದಕ್ಕಿಂತಲೂ ಹೆಚ್ಚಿನ ಸಹಕಾರ ನೀಡಬೇಕಾಗಿ ಕಳಕಳಿಯ ವಿನಂತಿ.

ಜನಕೀಯ ಯೋಜನೆಯ ಪದ್ಧತಿಯ ಪ್ರಕಾರ ಸರಕಾರದಿಂದ ದೊರೆತ ಅನುದಾನವನ್ನು ಸದುಪಯೋಗಗೊಳಿಸುವುದರೊಂದಿಗೆ ಜನ ಸಾಮಾನ್ಯರಿಂದ ದೇಣಿಗೆಗಳನ್ನು ಸ್ವೀಕರಿಸಿ ಕಡಿಮೆಯಾದ ಮೊಬಲಗನ್ನು ಭರ್ತಿ ಮಾಡಿಕೊಳ್ಳಬಹುದು. ಕೆಲವು ಯೋಜನೆಗಳನ್ನು ಸ್ಥಳೀಯರೇ ಸ್ವಯಂ ಸೇವೆಯಿಂದ ನಡೆಸಿ ಕೊಡಬಹುದು. ಈ ಯೋಜನೆಗಳ ವಿಜಯವು ಪಂಚಾಯತಿನ ನಾಗರಿಕರ ಉತ್ಸಾಹ, ಕಾರ್ಯಕ್ರಮತೆಯನ್ನು ಹೊಂದಿಕೊಂಡಿದೆ. ನಮ್ಮ ಪಂಚಾಯತಿನಲ್ಲಿ ಆದಾಯವು ಕಡಿಮೆ. ಅದಕ್ಕಿಂತ ಹೆಚ್ಚು ವೆಚ್ಚ ಮಾಡಬೇಕಾದಂತಹ ಸ್ಥಿತಿಯು ನಮ್ಮದಾಗಿದೆ. ಬಡವರ ಉದ್ಧಾರವಾಗಬೇಕು, ಕೈಗಾರಿಕೆಗಳ ಅಭಿವೃದ್ಧಿಯಾಗಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಕೃಷಿ ಆದಾಯದಲ್ಲಿ ಹೆಚ್ಚಳ ಉಂಟಾಗಬೇಕು. ವಿದ್ಯಾಭ್ಯಾಸದ ಗುಣಮಟ್ಟವು ವೃದ್ಧಿಯಾಗಬೇಕು. ಜನರಿಗೆ ಆರೋಗ್ಯದಿಂದ ಬಾಳಲು ವೈದ್ಯಕೀಯ ಸೌಲಭ್ಯ, ಕುಡಿಯವ ನೀರು ಮೊದಲಾದ ಸೌಕರ್ಯಗಳಿರಬೇಕು. ವಸತಿ ಹೀನರಿಗೆ ವಸತಿಗೃಹ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಅಭಿವೃದ್ಧಿ, ವನಿತೆಯರ ಕ್ಷೇಮಾಭಿವೃದ್ಧಿ ಮೊದಲಾದವುಗಳು ನಮ್ಮ ಮುಂದಿರುವ ಪ್ರಾಮುಖ್ಯ ಗುರಿಗಳಾಗಿವೆ.

ಸರಕಾರವು ಜನಕೀಯ ಯೋಜನೆಗಳಿಗಾಗಿ, ಸುಮಾರು 14,800 ಕೋಟಿ ಹಣವನ್ನು ಕಾದಿರಿಸಿದೆ. ಇವುಗಳ 40% ದಷ್ಟನ್ನು ಗ್ರಾಮ ಪಂಚಾಯತುಗಳಿಗೆ ವಿತರಿಸಲಾಗುವುದೆಂದು ತಿಳಿದು ಬಂದಿದೆ. ಇದರ ವಿನಿಯೋಗಕ್ಕಾಗಿ, ಮಹತ್ತಮ ಪ್ರಯೋಜನ ದೊರಕುವಂತಾಗಲು ಯೋಜನಾ ವರದಿಗಳನ್ನು ಅತ್ಯಂತ ಶ್ರದ್ಧೆಯಿಂದ ತಯಾರಿಸಲಾಗಿದೆ. ಈ ಯೋಜನೆಯನ್ನು ಜ್ಯಾರಿಗೊಳಿಸುವಾಗ ನಾವು ಪಕ್ಷ ಭೇಧ, ಜಾತಿ ಭೇಧ, ಬಡವ-ಬಲ್ಲಿದ ಭೇಧಗಳನ್ನು ಮರೆತು ನಾಗರಿಕರೆಲ್ಲಾ ಒಗ್ಗಟ್ಟಿನಿಂದ ಶ್ರಮಿಸಬೇಕಾಗಿದೆ. ಸ್ವಯಂಸೇವೆಯ ಮೌಲ್ಯಾಧಾರಿತ ಪಾಲುದಾರಿಕೆಗೆ ಸದಾ ಸ್ವಾಗತವಿದೆ. ಪಂಚಾಯತ್ ವಿಕಸನಾ ಸಭೆಯಲ್ಲಿ ಇದನ್ನು ಇನ್ನೂ ವಿಮರ್ಶೆಗೆ ಒಳಪಡಿಸಿ, ಚರ್ಚಿಸಿ, ಪೂರಕ ವರದಿಯನ್ನು ತಯಾರಿಸಿ ವಿಕಸನ ವರದಿಯೊಂದಿಗೆ ಲಗ್ತೀಕರಿಸಲಿದ್ದೇವೆ.

ಈ ವಿಕಸನ ಯೋಜನಾ ವರದಿಯನ್ನು ತಯಾರಿಸುವ ಉದ್ದೇಶದಿಂದ ಭೌಗೋಳಿಕ ಪರ್ಯಟನವನ್ನು ನಡೆಸಲಾಗಿದೆ. ನಮ್ಮ ಸ್ವಯಂಸೇವಕರು ವಿವಿಧ ಸರಕಾರಿ ಕಛೇರಿಗಳನ್ನು ಸಂದರ್ಶಿಸಿ ದ್ವಿತೀಯ ಮಾಹಿತಿ ಸಂಗ್ರಹವನ್ನು ಮಾಡಿರುತ್ತಾರೆ. ಸರಕಾರಿ ಕಛೇರಿಗಳ ಅಧಿಕಾರಿಗಳು ಸಭೆ ಸೇರಿ ಈವರೆಗೆ ಜ್ಯಾರಿಯಲ್ಲಿರುವ ಸ್ಕೀಂಗಳ ಮಾಹಿತಿ, ಇನ್ನು ಮುಂದೆ ಯಾವ ಸ್ಕೀಂಗಳನ್ನು ತಯಾರಿಸಬಹುದು ಮತ್ತು ಕೆಲವು ಸ್ಕೀಂಗಳ ನಿಲುಗಡೆಯಾಗಲು ಕಾರಣವೇನು ಎಂಬುದನ್ನು ವಿಮರ್ಶಿಸಿ ಬರೆದಿರುತ್ತಾರೆ. ಪಂಚಾಯತಿನ ಇತಿಹಾಸವನ್ನೂ, ಮಾಹಿತಿಯನ್ನೂ ಸಂಗ್ರಹಿಸಿ ಕ್ರೋಢೀಕರಿಸಲಾಗಿದೆ. ಕ್ಷೇತ್ರದ ಹಿರಿಯರನ್ನು ಸಂಪರ್ಕಿಸಿ ವಿಷಯ ಸಂಗ್ರಹಗಳನ್ನು ಮಾಡಲಾಗಿದೆ. ಕ್ಷೇತ್ರದ ಸ್ವಾತಂತ್ರ್ಯ ಸಮರ ಯೋಧರ ಮಾಹಿತಿಗಳನ್ನು ಸಮಗ್ರಹಿಸಲಾಗಿದೆ.

ವಿವಿಧ ಮೂಲಗಳಿಂದ ದೊರಕಿದ ಮಾಹಿತಿಗಳನ್ನು ಕ್ರೋಢೀಕರಿಸಿ ತಯಾರಿಸಿದ ಯೋಜನಾ ವರದಿಯನ್ನು ವಿಕಸನ ಸೆಮಿನಾರಿನಲ್ಲಿಟ್ಟು ಸ್ಕೀಂಗಳನ್ನು ತಯಾರು ಮಾಡಲು ಅವಕಾಶವನ್ನು ಕೊಟ್ಟು ಜ್ಯಾರಿಗೊಳಿಸಿದಾಗ ಪಂಚಾಯತು ಕ್ಷೇತ್ರಾಭಿವೃದ್ಧಿಗೆ ಅನುಕೂಲವಾದೀತೆಂದು ಭಾವಿಸುತ್ತೇವೆ.

ಬದಿಯಡ್ಕ ಗ್ರಾಮ ಪಂಚಾಯತು ಪ್ರದೇಶದ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ತಯಾರಿಸಲಾದ ಈ ವಿಕಸನ ವರದಿಯನ್ನು ವಿಮರ್ಶೆಗಾಗಿ ನಿಮ್ಮ ಮುಂದಿರಿಸಲು ಸಂತೋಷ ಪಡುತ್ತೇವೆ.




PRINTED AT JANATHA DIGITAL PRINTERS ,VITTAL 574 243 . ✆ : 52151